ಗುರಿಯಾಗುತ್ತಾರೆ. ಈ ತೊಂದರೆಗೆ ಒಳಗಾದ ರೈತರ ರಕ್ಷಣೆ ಕೊಡಬೇಕೆಂದು ಅಂತಹ ಒಂದು ರಕ್ಷಣೆಯನ್ನು ತ್ವರಿತವಾಗಿ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ನನಗೆ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಈ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.— ಇಲ್ಲಿಗೆ ಚರ್ಚೆ ಮುಕ್ತಾಯ ಆಯಿತು. ಈಗ ಮುಖ್ಯಮಂತ್ರಿಗಳಿಂದ ಉತ್ತರ.

೧೯೮೮-೮೯ರ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆಗೆ ಮುಖ್ಯಮಂತ್ರಿಯವರಿಂದ ಉತ್ತರ

† ಶ್ರೀ **ರಾಮಕೃಷ್ಣ ಹೆಗಡೆ** (ಮುಖ್ಯ ಮಂತ್ರಿಗಳು).— ಸನ್ಮಾನ್ಯ ಅಧ್ಯಕ್ಷರೆ, ಕಳೆದ ಐದು ದಿನಗಳಿಂದ ನಾನು ಈ ಸಭೆಯ ಮುಂದೆ ಮಂಡಿಸಿದ ೧೯೮೮-೮೯ನೇ ಸಾಲಿಗೆ ಸಂಬಂಧಪಟ್ಟ ಬಜೆಟ್ ಮೇಲೆ, ಈ ಮನೆಯ ಅನೇಕ ಮಾನ್ಯ ಸದಸ್ಯರು ಚರ್ಚೆ ಮಾಡಿದ್ದಾರೆ. ಅನೇಕ ಸೂಚನೆಗಳನ್ನು ಸಲಹೆಗಳನ್ನು ಕೊಟ್ಟಿದ್ದಾರೆ. ಅನೇಕ ಟೀಕೆಗಳನ್ನು ಮಾಡಿದ್ದಾರೆ, ಅವೆಲ್ಲವನ್ನೂ ನಾನು ಸ್ವಾಗತ ಮಾಡುತ್ತೇನೆ.

ಈ ಸಲದ ಬಜೆಟ್ ಚರ್ಚೆಯಲ್ಲಿ ಸಾಮಾನ್ಯವಾಗಿ ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಮತ್ತು ಅಭಿವೃದ್ಧಿಯ ಗತಿಯ ಬಗ್ಗೆ, ಅನೇಕ ಮಾನ್ಯ ಸದಸ್ಯರು ತಮ್ಮ ಚಿಂತೆಯನ್ನು ವ್ಯಕ್ತ ಮಾಡಿದ್ದಾರೆ. ಆ ರೀತಿಯಲ್ಲಿ ಚಿಂತೆಯನ್ನು ವ್ಯಕ್ತ ಮಾಡತಕ್ಕಂಥಾದ್ದು ಇಂದಿನ ಪರಿಸ್ಥಿತಿಯಲ್ಲಿ ಸ್ವಾಭಾವಿಕ ಎಂದು ನಾನು ಭಾವಿಸಿದ್ದೇನೆ. ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯು ಅಷ್ಟು ತೃಪ್ತಿಕರವಾಗಿಲ್ಲ ಎಷ್ಟೇ ಅಲ್ಲ, ಸ್ವಲ್ಪ ಮಟ್ಟಿಗೆ ಚಿಂತಾಜನಕವಾಗಿದೆ ಎಂದು ಹೇಳಿದರೂ ಕೂಡ ತಪ್ಪಾಗಲಾರದು,

ನಾನು ಚಿಂತಾಜನಕ ಎಂದು ಹೇಳತಕ್ಕಂಥ ಶಬ್ದವನ್ನು ಯಾವ ಅರ್ಥದಲ್ಲಿ ಉಪಯೋಗಿಸುತ್ತಾ ಇದ್ದೇನೆ ಎಂದರೆ, ಬೆಳವಣಿಗೆ ಅಥವಾ ಅಭಿವೃದ್ಧಿಯ ವ್ಯಾಪಕತೆ ಮತ್ತು ಅಭಿವೃದ್ಧಿಯ ಗತಿಯ ಅವುಗಳ ಮೇಲೆ ದುಷ್ಪರಿಣಾಮ ಮತ್ತು ಅನಾನುಕೂಲವಾದಂಥ ಪರಿಣಾಮ, ಇಂದಿನ ಆರ್ಥಿಕ ಪರಿಸ್ಥಿತಿ ಉಂಟು ಮಾಡುತ್ತದೆ ಎನ್ನತಕ್ಕಂಥ ಅರ್ಥದಲ್ಲಿ ಚಿಂತಾಜನಕ ಎಂಬ ಶಬ್ದವನ್ನು ಉಪಯೋಗಿಸಿದ್ದೇನೆ.

ನನ್ನ ಭಾಷಣದಲ್ಲಿ ಹೇಳಿದಂತೆ ರಾಜ್ಯದ ನಮ್ಮ ಅರ್ಥ ಪರಿಸ್ಥಿತಿ ವಿಚಾರದಲ್ಲಿ ಸರ್ಕಾರ ಯಾವುದೇ ಅಂಶವನ್ನೂ ಅಡಗಿಸಿರತಕ್ಕಂಥ ಅಗತ್ಯವಿಲ್ಲ, ಮತ್ತು ಅಡಗಿಸಿಡತಕ್ಕಂಥದ್ದು ಸರಿಯೂ ಅಲ್ಲ ಕಳೆದ ಒಂದು ವರ್ಷದ ಅವಧಿಯಲ್ಲಿಯೂ ರಾಜ್ಯದ ಹಣಕಾಸಿನ ಪರಿಸ್ಥಿತಿಯ ವಿಚಾರದಲ್ಲಿ ಎರಡು ಪುಸ್ತಕಗಳನ್ನು ನಾವು ಹೊರಡಿಸಿದ್ದೇವೆ. ಅದರಲ್ಲಿ ಇಂದಿನ ರಾಜ್ಯದ ಹಣಕಾಸಿನ ಮುಗ್ಗಟ್ಟಿನ ಪರಿಸ್ಥಿತಿಗೆ ಕಾರಣ ಏನು ಮತ್ತು ಅದನ್ನು ಎದುರಿಸಲು ಯಾವ ಯಾವ ಕ್ರಮಗಳನ್ನು ತೆಗೆದುಕೊಂಡಿದ್ದೇವೆ ಹಣಕಾಸಿನ ಪರಿಸ್ಥಿತಿ ಪರಿಣಾಮ ಅಭಿವೃದ್ಧಿಯ ಮೇಲೆ ಎಷ್ಟರಮಟ್ಟಿಗೆ ಅನುಕೂಲವಾಗಿ ಇದೆ ಅಥವಾ ಅನಾನುಕೂಲವಾಗಿ ಇದೆ ಈ ಎಲ್ಲಾ ವಿಚಾರದಲ್ಲಿ ಸ್ಪಷ್ಟವಾದ ಬೆಳಕು ಬೀರುವ ರೀತಿಯಲ್ಲಿ ಈ ಎರಡು ಪುಸ್ತಕಗಳಲ್ಲಿ ನಾವು ವಿವರವನ್ನು ಕೊಟ್ಟಿದ್ದೇವೆ. ನನ್ನ ಭಾಷಣದಲ್ಲಿ ಕೂಡ ಹೇಳಿದ್ದೇನೆ. ನಮ್ಮ ಆರ್ಥಿಕ ಮುಗ್ಗಟ್ಟಿಗೆ ಅಥವಾ ಇಂದಿನ ಆರ್ಥಿಕ ಪರಿಸ್ಥಿತಿಗೆ ಅನೇಕ ಕಾರಣಗಳು ಇವೆ. ಆ ಕಾರಣಗಳಲ್ಲಿ ಇಂದಿನ ಕೇಂದ್ರ ಮತ್ತು ರಾಜ್ಯ ಹಣಕಾಸು ಸಂಬಂಧವೂ ಒಂದು ಅಥವಾ ವ್ಯವಸ್ಥೆ ಕೂಡ ಒಂದು ಎಂದು ನಾನು ಹೇಳಿದ್ದೇನೆ. ಇದನ್ನೇ ಒಂದು ನೆಪವೆಂದು ನಾನು ಎಂದೂ ಭಾವಿಸಿಲ್ಲ. ಯಾವುದೇ ಒಂದು ಪಕ್ಷ ಇಂದು ಸರಕಾರವನ್ನು ನಡೆಸುತ್ತಿದ್ದರೂ, ಅದು ಜನತಾ ಪಕ್ಷವೇ ಆಗಬೇಕೆಂದು ಹೇಳತಕ್ಕಂಥಾದ್ದು ಇಲ್ಲ ಕಾಂಗ್ರೆಸ್ ಆದರೂ ಕೂಡ ಆ ಸರಕಾರದ ಮುಖ್ಯ ಮಂತ್ರಿ ಮತ್ತು ಹಣಕಾಸಿನ ಮಂತ್ರಿ ಬಹಿರಂಗವಾಗಿ ಈ ವಿಚಾರವನ್ನು ಹೇಳದೇ ಇದ್ದರೂ ಖಾಸಗಿಯಾಗಿ ಈ ವಿಚಾರವನ್ನು ಒಪ್ಪಿಕೊಳ್ಳುತ್ತಾರೆ. ಇದು ೧೯೮೭-೮೮ನೇ ಇಸವಿಯಲ್ಲಿ ತಸು ಹೆಚ್ಚೂ ಕಡಿಮೆ ಪ್ರತಿಯೊಂದು ರಾಜ್ಯದ ಯೋಜನಾ ಗಾತ್ರದಲ್ಲಿ ಮಾಡಿರತಕ್ಕಂತ ಅಥವಾ ಆಗಿರತಕ್ಕಂತಹ ದೊಡ್ಡ ಪ್ರಮಾಣದ ಖೋತಾ. ಇದರಿಂದ ಆಗಿದೆ ಎಂದು ಸ್ಪಷ್ಟವಾಗುತ್ತದೆ ನಾನು ಒಂದೆರಡು ಉದಾಹರಣೆಗಳನ್ನು ನನ್ನ ಭಾಷಣದಲ್ಲಿ ಕೊಟ್ಟಿದ್ದೇನೆ. ನಾವು ೨೫೦ ರಿಂದ ೩೦೦ ಕೋಟಿ ರೂಪಾಯಿಯಷ್ಟು ಯೋಜನಾ

ವೆಚ್ಚದ ಗಾತ್ರದಲ್ಲಿ ಕಡಿಮೆ ಮಾಡತಕ್ಕಂತಹ ಪ್ರಸಂಗ ಬಂದಿತ್ತು. ಅದೇ ರೀತಿ ಇನ್ನು ಇತರ ರಾಜ್ಯಗಳೂ ಕೂಡ ಕನಿಷ್ಠ ಪಕ್ಷ ೧೫೦ ಕೋಟಿಯಿಂದ ಕೆಲವು ಸಂದರ್ಭಗಳಲ್ಲಿ ಒಂದು ಸಾವಿರ ಕೋಟಿಯ ವರೆಗೂ ಯೋಜನಾ ವೆಚ್ಚದಲ್ಲಿ ಖೋತಾವನ್ನು ಮಾಡಿದ್ದಾರೆ ಮಾಡತಕ್ಕಂತಹ ಅನಿವಾರ್ಯ ಪ್ರಸಂಗ ಬಂದಿದೆ. ಅದಕ್ಕಾಗಿ ಆಗಾಗ ಪುನಃ ಪುನಃ ಈ ಸದನದಲ್ಲೂ ಸದನದ ಹೊರಗಡೆಯಲ್ಲೂ ಕೂಡ ಆಗ್ರಹ ಮಾಡುತ್ತಾ ಬಂದಿದ್ದೇನೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರ್ಥಿಕ ಸಂಪನ್ಮೂಲದ ವಿಚಾರದಲ್ಲಿ ಪುನರ್ ವಿಮರ್ಶೆ ಆಗಬೇಕು ಎಂದು, ಇದರ ಅರ್ಥ ರಾಜ್ಯ ಸರ್ಕಾರದ ಹೊಣೆ ಏನೂ ಇಲ್ಲ ರಾಜ್ಯ ಸರಕಾರ ಏನೂ ತಪ್ಪು ಮಾಡುವುದಿಲ್ಲ ಮತ್ತು ರಾಜ್ಯ ಸರಕಾರದಲ್ಲಿ ಆರ್ಥಿಕ ಮುಗ್ಗಟ್ಟು ಆದಾಗಲ್ಲಾ ಕೇಂದ್ರವನ್ನು ಹೊಣೆ ಮಾಡಬೇಕೆಂದು ಅಲ್ಲ. ಒಂದು ಸಂತೋಷದ ವಿಚಾರವೇನೆಂದರೆ ಬಜೆಟ್ ಭಾಷಣದಲ್ಲೂ ಕೂಡ ಆ ವಿಚಾರವನ್ನು ನಾನು ಪ್ರಸ್ತಾಪ ಮಾಡಿದ್ದೇನೆ. ನಾನು ಕಳೆದ ಅನೇಕ ವರ್ಷಗಳಿಂದ ಮಾಡುತ್ತಾ ಬಂದಿರತಕ್ಕಂತಹ ವಾದ ಏನು ಇದೆ ಅದನ್ನು ನಮ್ಮ ದೇಶದ ಖ್ಯಾತ ಪತ್ತ ಆರ್ಥಿಕ ತಜ್ಞರು ಮತ್ತು ನ್ಯಾಯವಾದಿಗಳು ಎತ್ತಿ ಹಿಡಿದ್ದಾರೆ ಮತ್ತು ಮೊನ್ನೆ ತಾನೇ ವರದಿಯನ್ನು ಕೊಟ್ಟಂತಹ ಸರ್ಕಾರಿಯಾ ಕಮಿಷನ್‌ರವರೂ ಕೂಡ ನನ್ನ ವಾದದ ಕೆಲವು ಅಂಶವನ್ನು ಎತ್ತಿ ಹಿಡಿದಿದ್ದಾರೆ ಮತ್ತು ಇದಕ್ಕೆ ಅನುಕೂಲವಾದಂತಹ ಶಿಫಾರಸ್ಸನ್ನು ಅವರು ಮಾಡಿದ್ದಾರೆ. ಈ ವಿಚಾರದಲ್ಲಿ ನಾನು ಬಹಳ ದೀರ್ಘವಾಗಿ ಪ್ರಸ್ತಾಪ ಮಾಡತಕ್ಕಂತಹ ಅಗತ್ಯವಿಲ್ಲ.

೧೧-೩೦ ಎ.ಎಂ.

ಆದರೆ ಒಂದು ಮಾತನ್ನು ದಯವಿಟ್ಟು ಮಾನ್ಯ ಸದಸ್ಯರು ಇವತ್ತು ಸ್ಪಷ್ಟವಾಗಿ ತಿಳಿದು ಕೊಳ್ಳುವುದು ಅಗತ್ಯ ಇದೆ. ಕೇಂದ್ರ ಮತ್ತು ರಾಜ್ಯದ ಆರ್ಥಿಕ ಸಂಬಂಧದ ವಿಚಾರ ಬಂದಾಗ ನಾನು ನೂರಕ್ಕೆ ನೂರರಷ್ಟು ಒಪ್ಪುತ್ತೇನೆ. ಅದರಲ್ಲಿ ಯಾವುದೇ ರೀತಿಯ ರಾಜಕೀಯ ಪಕ್ಷಪಾತ ತನದ ದೃಷ್ಟಿಯಿಂದ ನಾವು ನೋಡತಕ್ಕಂಥದ್ದು ಸಲ್ಲದು. ಯಾವುದೇ ಪಕ್ಷ ಇರಲಿ ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಯಾವುದೇ ಪಕ್ಷ ಯಾವುದೇ ರಾಜ್ಯದಲ್ಲಿ ಆಳುತ್ತಾ ಇರಲಿ, ಈ ಸಂಬಂಧದ ಪುನರ್‌ವ್ಯವಸ್ಥೆ ಇಡೀ ದೇಶದ ದೃಷ್ಟಿಯಿಂದ ಆಗಬೇಕು. ರಾಜ್ಯದ ದೃಷ್ಟಿಯಿಂದ ಆಗಬೇಕು ಎಂದು ನಾನು ಹೇಳುತ್ತಿಲ್ಲ. ಕೇವಲ ಕೇಂದ್ರದ ದೃಷ್ಟಿಯಿಂದ ಆಗಬೇಕು ಎಂದು ಕೂಡಾ ನಾನು ಹೇಳುತ್ತಿಲ್ಲ. ಇಂದು ಅದು ಅತ್ಯಂತ ಅವಶ್ಯಕವಾಗಿ ಆಗಬೇಕಾದಂಥ ಕೆಲಸ. ಇದನ್ನು ನಮ್ಮ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಪ್ರಸ್ತಾಪ ಮಾಡಿದ್ದೇನೆ. ಇಂದು ಇಡೀ ದೇಶದ ಅರ್ಥಪರಿಸ್ಥಿತಿ ಬಹಳ ಗಂಭೀರವಾದ ಪರಿಸ್ಥಿತಿಯಲ್ಲಿದೆ. ಎರಡು ಅಂಕಿಗಳ ಇನ್‌ಫ್ಲೇಷನನ್ನು ನಾವು ಮುಟ್ಟಿದ್ದೇವೆ. ರೂಪಾಯಿ ಬೆಲೆ ಪ್ರತಿ ವರ್ಷ ಪ್ರತಿ ತಿಂಗಳೂ ಕಡಿಮೆಯಾಗುತ್ತಿದೆ. ಕೇಂದ್ರ ಸರ್ಕಾರದಲ್ಲಿ ಏನು ಆದಾಯ ಬರುತ್ತದೆ, ಆ ಆದಾಯದಲ್ಲಿ ಪ್ರತಿ ವರ್ಷ ೧೪ ಸಾವಿರ ಕೋಟಿ ರೂಪಾಯಿಯಷ್ಟು ಕೇವಲ ಬಡ್ಡಿ ತೀರಿಸಲಿಕ್ಕೆ ಹೋಗುತ್ತದೆ. ನಾವು ಕಳೆದ ವರ್ಷ ಕೂಡಾ ಬಜೆಟ್ ಭಾಷಣದಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದಾಗ ಮಾನ್ಯ ಸದಸ್ಯರು ಅನೇಕರು ಅದನ್ನು ಅಷ್ಟೊಂದು ಗಂಭೀರವಾಗಿ ತೆಗೆದುಕೊಂಡಿರಲಿಕ್ಕಿಲ್ಲ. ನಾನು ಹೇಳಿದುದ್ದು ಏನೆಂದರೆ ಇಂದು ನಮ್ಮ ಪರಿಸ್ಥಿತಿ ಹೇಗಿದೆ ಎಂದರೆ ನಾವು ಹಣವನ್ನು ತಂದು ಅದರ ಬಹು ಭಾಗವನ್ನು ಸಾಲವನ್ನು ತೀರಿಸಲಿಕ್ಕೆ ಖರ್ಚು ಮಾಡತಕ್ಕಂಥ ಪರಿಸ್ಥಿತಿ ಇವತ್ತು ಬಂದಿದೆ. ನಾನು ಅನುಪಾತವನ್ನು ಕೊಟ್ಟಿದ್ದೆ. ಒಂದು ರೂಪಾಯಿ ಹಣವನ್ನು ತಂದರೆ ಸುಮಾರು ೬೨ ಪೈಸೆ ನಾವು ಅಷ್ಟು ಸಾಲವನ್ನು ತೀರಿಸಲಿಕ್ಕೆ ಕೊಡಬೇಕಾಗುತ್ತದೆ. ಸೆಂಟ್ರಲ್ ಅಸಿಸ್ಟೆನ್ಸ್ ಅದು ಸಾಲ ರೂಪವಾಗಿ ಬರತಕ್ಕಂಥದ್ದು. ಇದು ಪ್ರತಿ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಾ ಹೋಗುತ್ತದೆ. ಇದರಲ್ಲಿ ನಾವು ಕ್ರಾಂತಿಕಾರಿ ಬದಲಾವಣೆಯನ್ನು ಮಾಡದಿದ್ದರೆ ಮೂಲಭೂತವಾದ ಬದಲಾವಣೆಯನ್ನು ಮಾಡದಿದ್ದರೆ ಇನ್ನು ಕೆಲವೇ ವರ್ಷಗಳಲ್ಲಿ ಒಂದು ನೂರು ರೂಪಾಯಿ ಹಣ ತಂದು ೧೨೦ ರೂಪಾಯಿ, ೧೩೦ ರೂಪಾಯಿ ಹಣವನ್ನು ಮರುಪಾವತಿ ಮಾಡತಕ್ಕಂಥ ಪರಿಸ್ಥಿತಿ ಬರುತ್ತದೆ. ಈ ಪರಿಸ್ಥಿತಿಗೆ ನಾವು ಮುಟ್ಟದಂತೆ ಇಂದು ದೇಶದ ಆರ್ಥಿಕ ಪರಿಸ್ಥಿತಿಯಲ್ಲಿ ಇತ್ಯರ್ಥವನ್ನು ನಾವು ಮಾಡಬೇಕಾಗುತ್ತದೆ, ಪುನರ್ ವ್ಯವಸ್ಥೆಯನ್ನು ನಾವು ಮಾಡಬೇಕು. ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ ಎಂದು ನಾವು ಏನು ಕರೆಯುತ್ತೇವೆ. ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್‌ನಲ್ಲಿ ಹೆಚ್ಚಳವಾಗಿದೆ ಎನ್ನತಕ್ಕಂಥದ್ದನ್ನು ನಾವು ಒಪ್ಪುತ್ತೇವೆ ನಾನು ಒಪ್ಪುತ್ತೇನೆ ಆದರೆ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಅಷ್ಟು ಖಂಡನೀಯವಲ್ಲ. ಕೆಲವು ಎಲ್ಲೆಲ್ಲಿ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರನ್ನು ಮಾಡತಕ್ಕಂಥದ್ದು ತಪ್ಪಿಸಬಹುದು, ಅದನ್ನು ತಪ್ಪಿಸಲೇಬೇಕು, ಆದರೆ ರಾಜ್ಯಮಟ್ಟದಲ್ಲಿ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್

ಎಷ್ಟಾಗುತ್ತದೆಯೋ ಇದಕ್ಕಿಂತ ಎಷ್ಟೋ ಪಟ್ಟು ಹೆಚ್ಚು ಕೇಂದ್ರ ಮಟ್ಟದಲ್ಲಿ ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಆಗುತ್ತದೆ. ಅದನ್ನು ನಾನು ಮೊನ್ನೆ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಕೂಡಾ ಹೇಳಿದ್ದೇನೆ. ನಾನು ಅಲ್ಲಿ ಎರಡು ವಿಚಾರಗಳನ್ನು ನಮ್ಮ ಪ್ರಧಾನ ಮಂತ್ರಿಗಳ ಮುಂದಿಟ್ಟೆ. ಇಂದು ಕೇಂದ್ರದ ಮತ್ತು ಎಲ್ಲಾ ರಾಜ್ಯ ಸರ್ಕಾರಗಳು ಕೂಡಿ ಎರಡು ಅತ್ಯಂತ ಜೀವಾಳವಾದಂಥ ಪ್ರಶ್ನೆಯನ್ನು ಅಥವಾ ಸಮಸ್ಯೆಯನ್ನು ಬಿಡಿಸಲಿಕ್ಕೆ ನಾವು ಪ್ರಯತ್ನವನ್ನು ಮಾಡಬೇಕು. ಒಂದು ಡಿಸ್ಟಾರ್ಸನ್ ಆಫ್ ಡೆವಲಪ್‌ಮೆಂಟ್ ಎಂದರೆ ಅಭಿವೃದ್ಧಿಯಿಂದ ಯಾವ ರೀತಿಯ ವಿಪರೀತವಾದಂಥ ಪರಿಣಾಮವಾಗಿದೆಯೋ ಅದನ್ನು ನಾವು ಸರಿಪಡಿಸಬೇಕು. ಮತ್ತೊಂದು ರೂಪಾಯಿಯನ್ನು ನಾವು ಉಳಿಸಬೇಕು. ಹೇಗಾದರೂ ಮಾಡಿ ಅದರ ರಕ್ಷಣೆಯನ್ನು ಮಾಡಬೇಕು. ರೂಪಾಯಿಯನ್ನು ಉಳಿಸಬೇಕು ಎಂದು ಹೇಳಿದರೆ ರೂಪಾಯಿ ಬೆಲೆಯನ್ನು ಉಳಿಸಬೇಕು. ೧೯೭೬-೭೭ನೇ ಇಸವಿಯಲ್ಲಿ ರೂಪಾಯಿ ಬೆಲೆ ಹದಿನಾರೂವರೆ ಪೈಸೆ ಇತ್ತು. ೧೯೭೮ರಲ್ಲಿ ಹದಿನೇಳೂವರೆ ಪೈಸೆ ಆಯಿತು. ಇಂದು ಒಂದು ರೂಪಾಯಿ ಬೆಲೆ ಒಂಬತ್ತು ಮುಕ್ಕಾಲು ಪೈಸೆ. ಇದೇ ರೀತಿ ಹಣದುಬ್ಬರಕ್ಕೆ ಯಾವುದೇ ರೀತಿಯ ಆತಂಕವೂ ಇಲ್ಲದೆ, ನಿಗ್ರಹ ಇಲ್ಲದೇ ಹೋದರೆ ಇನ್ನು ೧೦ ವರ್ಷದ ಒಳಗಾಗಿ ರೂಪಾಯಿಗೆ ಒಂದು ಕಾಸಿನ ಬೆಲೆಯೂ ಉಳಿಯದೆ ಹೋಗಬಹುದು. ಅಷ್ಟು ತೀವ್ರಗತಿಯಿಂದ ರೂಪಾಯಿ ಬೆಲೆ ಡಿಸ್ಟಾರ್ಟ್ ಆಗುತ್ತಿದೆ ನಾನು ಹೇಳಿದ 'distortion of development' ಮೊನ್ನೆ ತಾನೆ 'Remove sensing Satilite' ನಾವು ಆಕಾಶದಲ್ಲಿ ಹಾರಿಸಿರತಕ್ಕದ್ದು ನಮ್ಮೆಲ್ಲರಿಗೂ ಬಹಳ ದೊಡ್ಡ ವಿಚಾರ ಸಂತೋಷ ತಂದ ವಿಚಾರ. ಇಡೀ ಪ್ರಪಂಚದಲ್ಲಿ ಕೇವಲ ಐದು ರಾಷ್ಟ್ರಗಳಿಗೆ ಈ ಒಂದು ತಂತ್ರ, ಈ ಒಂದು ಜ್ಞಾನ ಗೊತ್ತಿತ್ತು. ಈ ಐದು ರಾಷ್ಟ್ರಗಳಲ್ಲಿ ನಾವೂ ಒಬ್ಬರು ಎಂದು, ಅದು ಎಲ್ಲರಿಗೂ ಹರ್ಷವನ್ನು ತರತಕ್ಕ ವಿಚಾರ. ಆದರೆ ಅದೇ ಹೊತ್ತಿಗೆ ನಮ್ಮ ದೇಶದಲ್ಲಿ ಶೇಕಡಾ ೪೫ರಷ್ಟು ಜನರು ಎರಡು ಹೊತ್ತು ಹೊಟ್ಟೆಗೆ ಅನ್ನವಿಲ್ಲದೆ ಇರತಕ್ಕದ್ದನ್ನು, ಇವರನ್ನೆಲ್ಲಾ ನಾವು ಮರೆಯುವ ಹಾಗಿಲ್ಲ. ನಮ್ಮಲ್ಲಿ ಎಷ್ಟೋ ಪ್ರತಿಭಾವಂತ ವಿಜ್ಞಾನಿಗಳು ಇದ್ದಾರೆ. ಶೇಕಡಾ ೬೦ ರಿಂದ ೬೫ರಷ್ಟು ನಿರಕ್ಷರಕುಕ್ಷಿಗಳು ಇದ್ದಾರೆ ಎನ್ನುವುದನ್ನು ನಾವು ಮರೆಯುವ ಹಾಗಿಲ್ಲ. ಸುಮಾರು ೨೦ ಲಕ್ಷ ನಮ್ಮ ದೇಶದಲ್ಲಿ ಲೆಪ್ರಸಿಗೆ ಒಳಗಾದವರು ಇದ್ದಾರೆ, ಕೋಟಿಗಟ್ಟಲೆ ನಮ್ಮ ದೇಶದಲ್ಲಿ ಕುರುಡರು ಇದ್ದಾರೆ, ಕುರುಡರೂ ಆಗುತ್ತಾರೆ. ಮತ್ತು ನಮ್ಮ ದೇಶದಲ್ಲಿ ಇವತ್ತು ಒಂದೂವರೆ ಲಕ್ಷ ಕೆಳದರ್ಜೆಯವರು ಇದ್ದಾರೆ ಅವರನ್ನೆಲ್ಲಾ ನಾವು ಮರೆಯುವ ಹಾಗಿಲ್ಲ. ಈ ವಿಷಮಂತೆಯಲ್ಲಿ ಅಭಿವೃದ್ಧಿಯನ್ನು ಕಾಣಿಸಬೇಕು ಎನ್ನುವ ಸೂಚನೆಯನ್ನು ನಾನು ಮಾಡಿದ್ದೇನೆ. ಇದನ್ನು ಪ್ರಸ್ತಾಪ ಮಾಡತಕ್ಕಂಥ ಉದ್ದೇಶ ಇಷ್ಟೇ. ನಾವು ಅಭಿವೃದ್ಧಿಯನ್ನು ಯಾವಾಗ ಹೇಳುತ್ತೇವೆ ? ರಸ್ತೆಗಳು ಆದಾಗ, ಸಂಪರ್ಕಗಳನ್ನು ಮಾಡಿದಾಗ, ಸಾರಿಗೆ ಸಂಪರ್ಕ ಮಾಡಿದಾಗ, ಹೊಸ ಅಭಿವೃದ್ಧಿ ನೀರಾವರಿ ಇದರಲ್ಲಿ ದೊಡ್ಡದೂ ಆಗಬಹುದು, ಚಿಕ್ಕ ನೀರಾವರಿಯೂ ಆಗಬಹುದು, ಇದು ಕೂಡ ಅಭಿವೃದ್ಧಿಯೆಂದೇ ಹೇಳಬಹುದು. ಆಸ್ಪತ್ರೆ, ಸ್ಕೂಲು, ಕಾಲೇಜು ಕಟ್ಟಡ, ಇದು ಅಭಿವೃದ್ಧಿ. ವಿವಿಧ ಅಭಿವೃದ್ಧಿ ಕ್ಷೇತ್ರಗಳಲ್ಲಿ ನಾವು ದುಡ್ಡನ್ನು ಖರ್ಚು ಮಾಡಿ, ಏನು ಒಂದು ಪ್ರಗತಿಯನ್ನು ಅಂದರೆ ಭೌತಿಕ ಪ್ರಗತಿಯನ್ನು ಮಾಡುತ್ತೇವೆ ಅದು ಎಲ್ಲಾ ಅಭಿವೃದ್ಧಿ ಕೆಲಸ ಕಾರ್ಯಗಳು. ಇದರ ಬಗ್ಗೆ ಭೇದ ಭಾವ ಇಲ್ಲ. ಆದರೆ ಯಾವ ವರ್ಗ ನಮ್ಮ ಸಮಾಜದಲ್ಲಿ, ಈ ಎಲ್ಲಾ ಅಭಿವೃದ್ಧಿ ಪಾಲನ್ನು ಪಡೆದು ಕೊಳ್ಳುವುದಿಲ್ಲವೋ, ಅಭಿವೃದ್ಧಿಯ ಪಾಲನ್ನು ಯಾವ ನಿಶ್ಚಿತ ವರ್ಗ ಅನುಭವಿಸುವುದಿಲ್ಲವೋ, ಅಂಥವರಿಗೆ ಈ ಅಭಿವೃದ್ಧಿ ಆದರೂ ಒಂದೇ, ಆಗದಿದ್ದರೂ ಒಂದೇ. ಈ ವರ್ಗಗಳ ಕಾರಣಕ್ಕಾಗಿ ಇವತ್ತು ಸಮಾಜ ಕಲ್ಯಾಣದ ಕಾರ್ಯಕ್ರಮಗಳು ಅಷ್ಟು ಮಹತ್ವಕ್ಕೆ ಬಂತು. ಅದು ಇಲ್ಲದೇ ಹೋದರೆ ಸಮಾಜ ಕಲ್ಯಾಣದ ಬಗ್ಗೆ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಆಗುತ್ತಾ ಇರಲಿಲ್ಲ. ಸಮಾಜದಲ್ಲಿ ಕೆಳಕ್ಕೆ ತುಳಿಯಲ್ಪಟ್ಟಿರತಕ್ಕ ವರ್ಗಗಳಿಗೆ ಸರ್ಕಾರ ಶಾಲೆ, ಕಾಲೇಜು ಹೆಚ್ಚು ಹೆಚ್ಚು ಮಾಡಿದರೆ ಏನೂ ಉಪಯೋಗ ಇಲ್ಲ. ಸಮಾಜದ ಈ ಕೆಳ ವರ್ಗಗಳಿಗೆ ರಸ್ತೆ ಆದರೆ, ಏನು ಲಾಭ, ಬಸ್ಸನ್ನು ರಾಷ್ಟ್ರೀಕರಣ ಮಾಡಿ ಖಾಸಗಿಯವರಿಗೆ ಕೊಟ್ಟರೆ ಅದರಿಂದ ಏನೂ ಉಪಯೋಗ ಇಲ್ಲ. ಶಾಲೆ ಆದರೆ ಅದೂ ಪ್ರಾಥಮಿಕ ಶಾಲೆ ಆದರೆ ಅದರಿಂದ ಸ್ವಲ್ಪ ಪ್ರಯೋಜನ ಆಗಬಹುದು, ಆಗುತ್ತದೆ.

ನೀರಾವರಿ ಯೋಜನೆಗಳಿಂದ ಜಮೀನು ಇಲ್ಲದವರಿಗೆ ಏನು ಪ್ರಯೋಜನ? ಇದನ್ನು ಮಾನ್ಯ ಬಸವಲಿಂಗಪ್ಪನವರು ಇಲ್ಲಿ ಅನೇಕ ಸಲ ಹೇಳಿದ್ದಾರೆ. ಬೇರೆಯವರು ಸಹ ಇದನ್ನೇ ಹೇಳಿದ್ದಾರೆ. ಈ

ಸಂದರ್ಭದಲ್ಲಿ ನಾನು ಒಂದು ವಿಷಯವನ್ನು ನೆನಪು ಮಾಡಿಕೊಳ್ಳುತ್ತೇನೆ. ಅವು ಯಾವುದೇ ಕಾರಣದಿಂದ ಜಾರಿಗೆ ಬಂದಿರಲಿ, ಅದೇನೆಂದರೆ, ಈ ದೇಶದಲ್ಲಿ ಅತ್ಯಂತ ಹಿಂದುಳಿದ ವರ್ಗದ ಜನರು ನಿರ್ಲಕ್ಷ್ಯ ಮಾಡಲ್ಪಟ್ಟ ಜನರು, ನಿರ್ಗತಿಕರಾದಂಥ ಜನರು ಏನಿದ್ದಾರೆ, ಈ ನಮ್ಮ ಸಮಾಜದಲ್ಲಿ ಇಂತಹ ಒಂದು ವರ್ಗದ ಜನರು ಏನಿದ್ದಾರೆ, ಇಂತಹ ವರ್ಗಗಳ ಜನರಿಗೆ ಅನುಕೂಲ ಮಾಡಿಕೊಡುವಂತಹ ಕೆಲವು ಕಾರ್ಯಕ್ರಮಗಳನ್ನು ಸಮಾಜ ಕಲ್ಯಾಣ ಇಲಾಖೆ ಮೂಲಕ ಜಾರಿಗೆ ತಂದಂಥ ಕೀರ್ತಿ ಶ್ರೀಮಂತಿ ಇಂದಿರಾಗಾಂಧಿ ಅವರಿಗೆ ಹೋಗಬೇಕು. ಅದರಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯ ಇಲ್ಲ. ಗರೀಬಿ ಹಠಾವೋ ಎಂದು ಅವರು ಹೇಳಿದರು ಇದಕ್ಕೂ ಮೊದಲು ಅವರಿಗೆ ಈ ಜನರ ಬಗ್ಗೆ ಯೋಚನೆ ಇರಲಿಲ್ಲ. ಈ ಒಂದು ಘೋಷಣೆ ಮಾಡಿದ ಮೇಲೆ ಈ ಜನರ ಬಗ್ಗೆ ಅವರಿಗೆ ಯೋಚನೆ ಬಂತು. ಅದನ್ನು ನಾನು ಒಪ್ಪುತ್ತೇನೆ. ಈ ಒಂದು ಘೋಷಣೆ ಆದ ಮೇಲೆ ಪ್ರತಿಯೊಂದು ರಾಜ್ಯದಲ್ಲಿಯೂ ಸಹ ಸಮಾಜ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಪ್ರಾಶಸ್ತ್ಯ ಕೊಡಲಾಗುತ್ತಿದೆ. ಇನ್ನಿತರ ಕಾರ್ಯಕ್ರಮಗಳ ಬಗ್ಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಲಾಗುತ್ತಿದೆ. ಯಾವ ರೀತಿ ಕೊಡಲಾಗುತ್ತಿದೆ ಅಂದರೆ ಅದು ವ್ಯವಸಾಯದ ಅಭಿವೃದ್ಧಿ ಇರಬಹುದು, ನೀರಾವರಿ ಅಭಿವೃದ್ಧಿ ಇರಬಹುದು, ಶಿಕ್ಷಣದ ಅಭಿವೃದ್ಧಿ ಇರಬಹುದು, ಈ ಕಾರ್ಯಕ್ರಮಗಳಿಗೆ ಎಷ್ಟು ಮಹತ್ವವನ್ನು ಕೊಡಲಾಗುತ್ತಿದೆ, ಅಷ್ಟೇ ಮಹತ್ವವನ್ನು ಈ ಕಾರ್ಯಕ್ರಮಕ್ಕೂ ನಾವು ಕೊಡುತ್ತಿದ್ದೇವೆ. ಈ ಎರಡರ ನಡುವೆ ಯಾವಾಗ ಕ್ಲ್ಯಾಷ್ ಬರುತ್ತದೆ ಎಂದರೆ, ನಮ್ಮಲ್ಲಿ ಹಣಕಾಸು ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿದ್ದಾಗ. ಸಾಕಷ್ಟು ಪ್ರಮಾಣದಲ್ಲಿ ಹಣ ನಮಗೆ ಒದಗಿಬಂದರೆ, ಇದಕ್ಕೂ ಹಣವನ್ನು ಒದಗಿಸಬಹುದು, ಅದಕ್ಕೂ ಸಾಕಷ್ಟು ಹಣವನ್ನು ಒದಗಿಸಬಹುದು. ಹಾಗೂ ಈ ಎರಡನ್ನೂ ಸುಗಮವಾಗಿ ನಡೆಸಿಕೊಂಡು ಹೋಗಬಹುದು ಈ ಸಲದ ಕೇಂದ್ರ ಸರ್ಕಾರದ ಬಡ್ಜೆಟ್‌ನಲ್ಲಿ ರಾಜ್ಯ ಸರ್ಕಾರಗಳು ಈಗಾಗಲೇ ಜಾರಿಗೆ ತಂದಿರುವಂತಹ ಕೆಲವು ಕಾರ್ಯಕ್ರಮಗಳನ್ನು ಹೊಸ ಕಾರ್ಯಕ್ರಮಗಳು ಎಂದು ನಮೂದು ಮಾಡಿದ್ದಾರೆ. ಇದಕ್ಕೆ ನನ್ನ ಆಕ್ಷೇಪ ಇದೆ. ಕೇಂದ್ರ ಸರ್ಕಾರದವರು ಸಮಾಜ ಕಲ್ಯಾಣದ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟರೆ, ಅದಕ್ಕೆ ನನ್ನ ಆಕ್ಷೇಪವೇನೂ ಇಲ್ಲ, ಈ ಕಾರ್ಯಕ್ರಮಗಳಿಗೆ ಅವರು ಹಣವನ್ನು ಒದಗಿಸಿದರೆ ನನ್ನ ಆಕ್ಷೇಪವೇನೂ ಇಲ್ಲ. ಆದರೆ ರಾಜ್ಯ ಸರ್ಕಾರಗಳು ಮಾಡಬೇಕಾದ ಕೆಲಸಗಳನ್ನು ಅವರ ಕೈಗೆ ತೆಗೆದುಕೊಳ್ಳುವುದಕ್ಕೆ ನನ್ನ ಆಕ್ಷೇಪ ಇದೆ. ಈ ಸಂದರ್ಭದಲ್ಲಿ ಅಷ್ಟೊಂದು ನೇರವಾಗಿ ಸಂಬಂಧವಿಲ್ಲದಿದ್ದರೂ ಸಹ ಒಂದು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಬೇಕು ಎಂದು ನನ್ನ ಬಯಕೆ ಆಗಿದೆ. ಅದೇನೆಂದರೆ, ನಮ್ಮ ಸಂವಿಧಾನದಲ್ಲಿ ರಾಜ್ಯ ಸರ್ಕಾರಗಳಿಗೆ ಸಂಬಂಧಪಟ್ಟಂತೆ ಯಾವ ಯಾವ ವಿಚಾರಗಳು ಮತ್ತು ವಿಷಯಗಳು ಬರುತ್ತವೆ ಮತ್ತು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಂತೆ ಯಾವಯಾವ ವಿಚಾರಗಳು ಮತ್ತು ವಿಷಯಗಳು ಬರುತ್ತವೆ ಎಂದು ತಿಳಿಸುವುದಕ್ಕಾಗಿಯೇ ಒಂದು ವಿಭಾಗ ಇದೆ. ಈ ರೀತಿ ಸ್ಪಷ್ಟವಾಗಿ ತಿಳಿಸಿದ್ದರೂ ಸಹ ರಾಜ್ಯ ಸರ್ಕಾರಗಳಿಗೆ ಸಂಬಂಧಪಟ್ಟ ವಿಷಯಗಳ ಮೇಲೆ ಕೇಂದ್ರ ಸರ್ಕಾರದ ಹತೋಟಿ ಕಳೆದ ೩೫ ವರ್ಷಗಳಿಂದ ಹೆಚ್ಚಾಗುತ್ತಾ ಬಂದಿದೆ. ಈಗ ಉದಾಹರಣೆಗೆ ವ್ಯವಸಾಯ ಇಲಾಖೆ ತೆಗೆದುಕೊಳ್ಳೋಣ. ಇಲ್ಲವೇ ಕಾರ್ಮಿಕ ಇಲಾಖೆಯನ್ನು ತೆಗೆದುಕೊಳ್ಳೋಣ. ಇಲ್ಲವೇ ಆರೋಗ್ಯ, ಇಲ್ಲವೇ ಶಿಕ್ಷಣ ಇಲಾಖೆಯನ್ನು ತೆಗೆದುಕೊಳ್ಳೋಣ. ಇವೆಲ್ಲವೂ ರಾಜ್ಯ ಸರ್ಕಾರಗಳಿಗೆ ಸಂಬಂಧಪಟ್ಟ ವಿಷಯಗಳು. ಆದ್ದರಿಂದ ಈ ಖಾತೆಗಳಿಗೆ ಸಂಬಂಧಪಟ್ಟಂತೆ ಕೇಂದ್ರದಲ್ಲಿ ದೊಡ್ಡ ದೊಡ್ಡ ಎಸ್ಟಾಬ್ಲಿಷ್‌ಮೆಂಟ್ ಇರಬೇಕಾದ ಅಗತ್ಯ ಇಲ್ಲ. ಆದರೂ ಸಹ ಕೇಂದ್ರದ ವ್ಯವಸಾಯ ಖಾತೆಯಲ್ಲಿ ಹತ್ತು ಬೇರೆ ಬೇರೆ ಮಂತ್ರಾಲಯಗಳು ಇವೆ. ಹತ್ತು ಜನ ಸೆಕ್ರೆಟರಿಗಳು ಮತ್ತು ಹತ್ತು ಜನ ಅಡಿಷನಲ್ ಸೆಕ್ರೆಟರಿಗಳು ಇದ್ದಾರೆ. ಇಪ್ಪತ್ತು ಜನ ಜಾಯಿಂಟ್ ಸೆಕ್ರೆಟರಿಗಳು ಇರುತ್ತಾರೆ. ಅವರಿಗೆಲ್ಲಾ ಏನು ಕೆಲಸ ಇರುತ್ತದೆ? ವ್ಯವಸಾಯ ರಾಜ್ಯ ಸರ್ಕಾರಗಳಿಗೆ ಸಂಬಂಧಪಟ್ಟಿರುವ ಕಾರಣ ಕೇಂದ್ರದ ಜವಾಬ್ದಾರಿ ಏನಿರುತ್ತದೆ? ಒಂದುವೇಳೆ ರೀಸರ್ಚ್‌ಗೆ ಸಂಬಂಧಪಟ್ಟ ವಿಷಯಗಳಿದ್ದರೆ ಹಾಗೂ ಬೇರೆ ಬೇರೆ ದೇಶಗಳ ಜೊತೆಗೆ ಕೋಆರ್ಡಿನೇಷನ್ ಇದ್ದರೆ, ಇದನ್ನೆಲ್ಲಾ ನೋಡಿಕೊಳ್ಳಲು ಕೇಂದ್ರದಲ್ಲಿ ಒಂದು ಸಣ್ಣ ಕಚೇರಿ ಇದ್ದರೆ ಸಾಕು. ಈಗ ರಾಜ್ಯ ರಾಜ್ಯಗಳ ನಡುವೆ ಕೋಆರ್ಡಿನೇಷನ್ ಏರ್ಪಡಿಸುವುದಕ್ಕೆ ಪ್ಲಾನಿಂಗ್ ಕಮಿಷನ್ ಎಂದು ಏನಿದೆ, ಅದೇ ರೀತಿ ಕೇಂದ್ರದಲ್ಲಿ ಈ ಬಗ್ಗೆ ಒಂದು ಸಣ್ಣ ಕಚೇರಿ ಇದ್ದರೆ ಸಾಕು. ಈ ಬಗ್ಗೆ ನಾನು ಒಂದೇ ಒಂದು ಉದಾಹರಣೆಯನ್ನು ಕೊಟ್ಟೆ. ಮುಖ್ಯವಾಗಿ ರಾಜ್ಯ ಸರ್ಕಾರಗಳ ವ್ಯಾಪ್ತಿಯಲ್ಲಿ ಬರತಕ್ಕಂಥ ವಿಷಯಗಳ ಮೇಲೆ ಕೇಂದ್ರ ಸರ್ಕಾರದ ಹತೋಟಿ ಹೆಚ್ಚಿದಂತೆ ರಾಜ್ಯಗಳ ಅತೃಪ್ತಿಯು ಹೋಗೆ ಹೆಚ್ಚುತ್ತದೆ. ಆದ್ದರಿಂದ ಇದು ಹೋಗಬೇಕು. ಈ ೧೯೮೭-೮೮ರ ವರ್ಷ ಈ ತಿಂಗಳ ೩೧ನೇ ತಾರೀಖಿಗೆ ಮುಗಿಯುತ್ತದೆ. ನಾನು

ಹೇಳಿಂತ್ತೇನೆ, ಈ ವರ್ಷ ನಮ್ಮ ಆರ್ಥಿಕ ದೃಷ್ಟಿಯಿಂದ ಅತ್ಯಂತ ಕಷ್ಟಕರವಾದಂಥ ವರ್ಷ. ಇಷ್ಟು ಕಷ್ಟಕರವಾದಂಥ ವರ್ಷವನ್ನು ಬಹುಃಶಃ ಕಳೆದ ೫ ವರ್ಷಗಳಿಂದ ಅಲ್ಲ ಕಳೆದ ೨೦ ವರ್ಷಗಳಿಂದಲೂ ನಾವು ನೋಡಿರಲಿಕ್ಕಿಲ್ಲ. ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳು. ಒಂದನೆಯದು. ಕಳೆದ ೫ ವರ್ಷಗಳಿಂದಲೂ ಸತತವಾಗಿ ನಮ್ಮ ರಾಜ್ಯದಲ್ಲಿ ಆದಂಥ ಬರಗಾಲ ಪರಿಸ್ಥಿತಿಯ ಒಟ್ಟು ಪರಿಣಾಮ. ಅಕ್ಯುಮಾಲೇಟೆಡ್ ಎಫೆಕ್ಟ್ ಒಂದು ಸಲ, ಎರಡು ಸಲ ಬರಗಾಲ ಬಂದರೆ ನಮ್ಮ ರೈತರು ಹೇಗೋ ಸಹಿಸಿಕೊಂಡು ಹೋಗಬಹುದು, ಸರ್ಕಾರವೂ ಅದರಿಂದ ಆದಂಥ ಭಾರವನ್ನು ಸಹಿಸಿಕೊಂಡು ಹೋಗಬಹುದು ಆದರೆ ಪುನಃ ಪುನಃ ಆದರೆ ರೈತನಿಗೆ ಸ್ವಾಮಿನ ಹೊರಟು ಹೋಗುತ್ತದೆ ಸಹಿಸಿಕೊಂಡು ಹೋಗತಕ್ಕಂಥ ಶಕ್ತಿ ಇರುವುದಿಲ್ಲ. ಇದು ೫ನೇ ವರ್ಷವಾದುದರಿಂದ ಇದರ ಅಕ್ಯುಮಲೇಟೀವ್ ಪರಿಣಾಮ, ಒಟ್ಟು ಪರಿಣಾಮ ಅತ್ಯಂತ ತೀವ್ರವಾಗಿದೆ, ನಾನು ಕೊಟ್ಟಂಥ ಎರಡು ಪುಸ್ತಕಗಳಲ್ಲಿ ಔದ್ಯೋಗಿಕ ಕ್ಷೇತ್ರದಲ್ಲಿ ಮತ್ತು ವ್ಯವಸಾಯ ಕ್ಷೇತ್ರದಲ್ಲಿ ಎಷ್ಟು ನಷ್ಟವಾಯಿತು ಉತ್ಪನ್ನವಿಲ್ಲದೆ ಅಥವಾ ಉತ್ಪನ್ನ ಕಡಿಮೆಯಾಗಿ ಎನ್ನುವುದನ್ನು ಕೊಟ್ಟಿದ್ದೇನೆ. ಅದೇರೀತಿ ಅಭಾವ ಪರಿಸ್ಥಿತಿಯಲ್ಲಿ ಪರಿಹಾರ ಕೆಲಸಕ್ಕಾಗಿ ನಾವು ಎಷ್ಟು ಖರ್ಚು ಮಾಡಬೇಕಾಯಿತು ಎನ್ನುವುದನ್ನು ಕೊಟ್ಟಿದ್ದೇನೆ. ಇವಕ್ಕೆ ಕೇಂದ್ರ ಸರ್ಕಾರದ ನೆರವು ಹೆಚ್ಚು ಹೆಚ್ಚು ಬಂದಿದ್ದರೆ ಆ ಭಾರವನ್ನು ಸಹಿಸಿಕೊಂಡು ಹೋಗುವುದಕ್ಕೆ ಅಷ್ಟೊಂದು ಕಷ್ಟವಾಗುತ್ತಾ ಇರಲಿಲ್ಲ. ಮತ್ತೊಂದು ವಿಚಾರವೇನೆಂದರೆ, ೧೯೮೭–೮೮ನೇ ಸಾಲಿನಲ್ಲಿ ಕೇವಲ ನಮ್ಮ ಕರ್ನಾಟಕದಲ್ಲೇ ಅಲ್ಲ ದೇಶದ ಇನ್ನಿತರ ಭಾಗದಲ್ಲೂ ಕೂಡ ಬರಗಾಲವನ್ನು ಎದುರಿಸತಕ್ಕಂಥ ಪ್ರಸಂಗ ಬಂತು. ಕೇಂದ್ರ ಸರ್ಕಾರ ಅದರ ಬಗ್ಗೆ ಅನೇಕ ಕ್ರಮಗಳನ್ನು ತೆಗೆದುಕೊಂಡಿತ್ತು. ಈ ಹಿಂದೆ ೫ ವರ್ಷಗಳಲ್ಲಿ ತಮಿಳುನಾಡಿನ ಕೆಲವು ಭಾಗ, ಕರ್ನಾಟಕ, ಆಂಧ್ರಪ್ರದೇಶದ ಕೆಲವು ಭಾಗ, ಮಹಾರಾಷ್ಟ್ರದ ೬–೭ ಜಿಲ್ಲೆಗಳು, ಗುಜರಾತಿನ ಕೆಲವು ಭಾಗಗಳಲ್ಲಿ ಬರಗಾಲವಿತ್ತು, ಇಷ್ಟೆಲ್ಲಾ ಇದ್ದರೂ ಕೂಡ ಕೇಂದ್ರ ಸರ್ಕಾರ ಏಕೋ ಏನೋ ಗೊತ್ತಿಲ್ಲ ಅಷ್ಟೊಂದು ತೀವ್ರತರವಾದಂಥ ಗಮನ ಹರಿಸತಕ್ಕಂಥ ಬುದ್ಧಿ ಮಾಡಲಿಲ್ಲ, ಆದರೆ ೧೯೮೭–೮೮ನೇ ಸಾಲಿಗೆ ಡೆಲ್ಲಿಯ ಸುತ್ತಮುತ್ತ ಅತ್ಯಂತ ಉಗ್ರವಾದಂಥ ಬರಗಾಲ ಬಂತು, ನಿಜ, ನಾನು ಒಪ್ಪುತ್ತೇನೆ. ಅದರಿಂದ ಕೇಂದ್ರ ಸರ್ಕಾರಕ್ಕೆ ಅತ್ಯಂತ ತೀವ್ರವಾದಂಥ ಚಿಂತೆಯಾಯಿತು ಮತ್ತು ಅನೇಕ ಕ್ರಮವನ್ನು ತೆಗೆದುಕೊಂಡಿತು, ಅದರಿಂದಲೂ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಗೆ ಸ್ವಲ್ಪ ತೊಂದರೆಯಾಗಿದೆ, ಈಗ ಈ ಪುಸ್ತಕದಲ್ಲಿ ನಾನು ಕೊಟ್ಟಿದ್ದೇನೆ ಇದರ ಹೊರತಾಗಿ ನಮ್ಮ ಕಲೆ ಮೇಲೆ ಬೇರೆ ಬೇರೆ ರೀತಿಯ ಭಾರ ಬಂತು. ಅದೇನೆಂದರೆ, ನಮ್ಮ ಸರ್ಕಾರಿ ನೌಕರರಿಗೆ ನಾವು ಪುನಃ ಪುನಃ ಪುನಃ ತುಟ್ಟಿಭತ್ಯವನ್ನು ಹೆಚ್ಚು ಕೊಡಬೇಕಾಗುತ್ತದೆ. ಕೇಂದ್ರ ಸರ್ಕಾರದ ನೌಕರರಿಗೆ ಯಾವಾಗ ಹೆಚ್ಚು ತುಟ್ಟಿಭತ್ಯ ಸಿಗುತ್ತದೋ ಆಗಾಗಲೆಲ್ಲಾ ನಮ್ಮ ರಾಜ್ಯದ ಸರ್ಕಾರಿ ನೌಕರರಿಗೆ ನಾವೂ ಕೊಡಬೇಕಾಗುತ್ತದೆ. ಇದು ನಮ್ಮಲ್ಲಿ ಆಗಿರತಕ್ಕಂಥ ಒಂದು ಒಪ್ಪಂದ. ಮಾನ್ಯ ಸದಸ್ಯರು ದಯವಿಟ್ಟು ಈ ವಿಚಾರವನ್ನು ಗಮನಿಸಬೇಕು ೫ ವರ್ಷಗಳಲ್ಲಿ ಒಂದೊಂದು ವರ್ಷದಲ್ಲಿ ನಾಲ್ಕು ನಾಲ್ಕು ಸಲ. ಐದೈದು ಸಲ ತುಟ್ಟಿಭತ್ಯವನ್ನು ಹೆಚ್ಚಿಸತಕ್ಕಂಥ ಪರಿಸ್ಥಿತಿ ಬಂತು.

೧೯೮೨-೮೩ರಲ್ಲಿ ನಾಲ್ಕು ಸಲ ಕೊಟ್ಟಿದ್ದೇವೆ ಇದಕ್ಕಾಗಿ ೩೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ೧೯೮೩–೮೪ರಲ್ಲಿ ೮ ಸಲ ಕೊಟ್ಟಿದ್ದೇವೆ. ೭೧ ಕೋಟಿ ರೂಪಾಯಿಗಿಂತ ಹೆಚ್ಚು ಖರ್ಚಾಗಿದೆ. ೧೯೮೪–೮೫ರಲ್ಲಿ ೫ ಸಲ ಕೊಟ್ಟಿದ್ದೇವೆ. ೯೫ ಕೋಟಿ ರೂಪಾಯಿಗಿಂತ ಹೆಚ್ಚು ಖರ್ಚಾಗಿದೆ. ೧೯೮೫–೮೬ರಲ್ಲಿ ೪ ಸಲ ಕೊಟ್ಟಿದ್ದೇವೆ. ೩೮ ಕೋಟಿ ರೂಪಾಯಿಗಿಂತ ಹೆಚ್ಚು ಖರ್ಚಾಗಿದೆ. ೧೯೮೬–೮೭ರಲ್ಲಿ ೪ ಸಲ ಕೊಟ್ಟಿದ್ದೇವೆ, ೬೯.೯೩ ಕೋಟಿ ರೂಪಾಯಿ ಅಷ್ಟು ಖರ್ಚಾಗಿದೆ, ಇದರ ಹೊರತಾಗಿ ಪ್ರತಿ ವರ್ಷ ೧೨೦ ಕೋಟಿ ರೂಪಾಯಿಗಿಂತ ಹೆಚ್ಚು ಖರ್ಚಿನ ಭಾರ ಬರತಕ್ಕ ಮತ್ತೊಂದು ನಿರ್ಧಾರವನ್ನು ನಾವು ತೆಗೆದುಕೊಳ್ಳಬೇಕಾಯಿತು. ಅದೇನೆಂದರೆ ಸರ್ಕಾರಿ ನೌಕರರಿಗೆ ಪೇ ಕಮಿಷನ್ ನೇಮಕ ಆದ ಮೇಲೆ ಪೇ ಕಮಿಷನ್‌ನ ಶಿಫಾರಸ್ಸನ್ನು ನಾವು ಒಪ್ಪಿಕೊಳ್ಳಬೇಕಾಯಿತು ಕೇಂದ್ರ ಸರ್ಕಾರದಿಂದ ಪೇ ಕಮಿಷನ ಶಿಫಾರಸ್ಸು ಬಂದಮೇಲೆ ಈ ಹೆಚ್ಚುವರಿ ಭಾರವನ್ನು, ನಾವು ಬರಗಾಲ ಹೊಡೆತವನ್ನು ಸಹಿಸುವುದೇ ಕಷ್ಟವಾಗಿದ್ದ ಸಂದರ್ಭದಲ್ಲಿ ಇದನ್ನು ವಹಿಸಿಕೊಳ್ಳತಕ್ಕ ಸಂದರ್ಭ ಬಂತು. ನಮ್ಮ ಇಂದಿನ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಕಡಿಮೆ ಹಣವನ್ನು ಒದಗಿಸಿದಂತಹ ಪರಿಸ್ಥಿತಿ ಈಗ ಬಂದಿದೆ. ಮತ್ತು ೧೯೮೭–೮೮ನೇ ಸಾಲಿನಲ್ಲಿ ನಾವು ಒದಗಿಸಿರುವ ಹಣದಲ್ಲಿ ಖೋತಾ ಮಾಡುವ ಪರಿಸ್ಥಿತಿ ಏತಕ್ಕೆ ಬಂತು ಎಂಬ ವಿಚಾರ ಮಾನ್ಯ ಸದಸ್ಯರುಗಳಿಗೆ ಸರಿಯಾಗಿ ತಿಳಿಯಲಿ ಎಂದು ಇದನ್ನು ನಾನು ಹೇಳು

ಸ್ತಿದ್ದೇನೆ. ಈ ಚರ್ಚೆಯಲ್ಲಿ ಮಾನ್ಯ ಸದಸ್ಯರು ಸಾಮಾನ್ಯವಾಗಿ ಐದು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದು ರಾಜ್ಯದ ಹಣಕಾಸಿನ ಪರಿಸ್ಥಿತಿಯ ಬಗ್ಗೆ, ರೆಕ್ರೂಟ್‌ಮೆಂಟ್ ಬಗ್ಗೆ, ಪಾಲಿಸಿ ಬಗ್ಗೆ, ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರು, ಪ್ರಸ್ತಾಪ ಮಾಡಿದ್ದಾರೆ. ರೀಜನಲ್ ಇಂಬ್ಯಾಲೆನ್ಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಪ್ರತಿಯೊಂದಕ್ಕೂ ಉತ್ತರ ಹೇಳಲು ಸಾಧ್ಯವಾಗುವುದಿಲ್ಲ. ಪ್ಲಾನಿಂಗ್ ಔಟ್‌ಲೇ ವಿಚಾರದಲ್ಲಿ ದಿನ ಬಳಕೆಯ ವಸ್ತುಗಳ ಬೆಲೆ ಹೆಚ್ಚಾಗುತ್ತಿರುವ ವಿಚಾರದಲ್ಲಿ ಶ್ರೀ ಆರ್. ವೆಂಕಟರಾಮಯ್ಯನವರು ಪ್ರಸ್ತಾಪ ಮಾಡಿದ್ದಾರೆ. ಹಣಕಾಸಿನ ಪರಿಸ್ಥಿತಿಯ ವಿಚಾರದಲ್ಲಿ ಈಗಾಗಲೇ ಸಾಕಷ್ಟು ಹೇಳಿದ್ದೇನೆ. ಇನ್ನು ಇವರ ಬಗ್ಗೆ ಹೆಚ್ಚು ಹೇಳತಕ್ಕದ್ದು ಅಗತ್ಯವಿಲ್ಲ.

ಮಾನ್ಯ ಶ್ರೀ ವಿರಪ್ಪ ಮೊಯಿಲಿಯವರು ರೆವಿನ್ಯೂ ಡಿಫಿಸಿಟ್ ಪ್ರತಿ ವರ್ಷ ಹೆಚ್ಚಾಗುತ್ತಾ ಬಂದಿದೆ ಎಂದು ಹೇಳಿದರು. ೧೯೮೨-೮೩ರಲ್ಲಿ ಸರ್‌ಪ್ಲಸ್. ೧೯೮೩-೮೪ರಲ್ಲಿ ಸರ್‌ಪ್ಲಸ್ ಆಗಿದೆ. ೧೯೮೪-೮೫ರಲ್ಲಿ ಮೈನಸ್ ಆಗಿದೆ. ೧೯೮೫-೮೬ರಲ್ಲಿ ಮೈನಸ್ ಆಗಿದೆ. ೧೯೮೬-೮೭ರಲ್ಲಿ ಸರ್‌ಪ್ಲಸ್ ಆಗಿದೆ. ಸತತವಾಗಿ ಮೈನಸ್ ಆಗಿಲ್ಲ. ಈ ೫ ವರ್ಷಗಳಲ್ಲಿ ಮೂರು ಸರ್‌ಪ್ಲಸ್ ಎರಡು ವರ್ಷ ಮೈನಸ್ ಆಗಿದೆ. ಆದರೆ ಮೈನಸ್ ರೆವಿನ್ಯೂ ಆಗಲಿ ಅಥವಾ ಸರ್‌ಪ್ಲಸ್ ಆಗಲಿ. ಏನು ಇದೆ ಅದು ನಮ್ಮ ಹಣಕಾಸಿನ ಪರಿಸ್ಥಿತಿಯ ನೈಜ ಚಿತ್ರವನ್ನು ಸಂಪೂರ್ಣವಾಗಿ ಕೊಡುವುದಿಲ್ಲ. ಒಮ್ಮೊಮ್ಮೆ ರೆವಿನ್ಯೂ ಮೈನಸ್ ಇದ್ದರೂ ಕೂಡ ಅದರಲ್ಲಿ ಒಂದು ಮುಖ್ಯ ಕಾರಣ ಏನು ಇರಬಹುದು ಎಂದರೆ ನಾವು ನಮ್ಮ ಮೇಂಟೆನೆನ್ಸ್‌ಗೆ ನಮ್ಮ assets maintain ಮಾಡಲು ಮತ್ತು ಸರ್ವಿಸ್ standard ಅನ್ನು ಏರಿಸುವುದರಲ್ಲಿ ಗಮನ ಕೊಡುತ್ತಿದ್ದೇವೆ ಎಂದು ಅರ್ಥ ಆಗಬಹುದು. ಕೇವಲ ಒಂದರಿಂದಲೇ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯ ಬಗ್ಗೆ ನಾವು ನಿರ್ಣಯಕ್ಕೆ ಬರಲಿಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳಬಯಸುತ್ತೇನೆ. ಈಗ ನಮ್ಮ ಯೋಜನೆಯಲ್ಲಿ ಕಳೆದ ೫ ವರ್ಷಗಳಲ್ಲಿ ಎಷ್ಟು ಖರ್ಚು ಮಾಡಿದ್ದೇವೆ, ಈ ವರ್ಷ ಎಷ್ಟು ಖೋತಾ ಆಗಿದೆ ಎನ್ನುವ ವಿಚಾರದಲ್ಲಿ ಎರಡು ಶಬ್ದಗಳನ್ನು ಇಲ್ಲಿ ಹೇಳಬಯಸುತ್ತೇನೆ. ನಾವು ಅಧಿಕಾರಕ್ಕೆ ಬಂದ ವರ್ಷದಿಂದಲೇ ನಿಗದಿ ಮಾಡಿದಂಥ ಔಟ್‌ಲೇಗಿಂತ ೫೧ ಕೋಟಿ ಹಣವನ್ನು ಹೆಚ್ಚು ಯೋಜನಾ ವೆಚ್ಚದಲ್ಲಿ ನಾವು ಖರ್ಚು ಮಾಡಿದ್ದೇವೆ. ೮೩-೮೪ರಲ್ಲಿ ೫೬ ಕೋಟಿ ಹೆಚ್ಚು ಖರ್ಚು ಮಾಡಿದ್ದೇವೆ. ೧೯೮೪-೮೫ರಲ್ಲಿ ೫೭ ಕೋಟಿ ಹೆಚ್ಚು ಖರ್ಚು ಮಾಡಿದ್ದೇವೆ. ೮೫-೮೬ರಲ್ಲಿ ೧೫ ಕೋಟಿ ಹೆಚ್ಚು ಖರ್ಚು ಮಾಡಿದ್ದೇವೆ. ೮೬-೮೭ರಲ್ಲಿ ೩೧ ಕೋಟಿ ಹೆಚ್ಚು ಖರ್ಚು ಮಾಡಿದ್ದೇವೆ. ಎಷ್ಟೇ ಆರ್ಥಿಕ ಮುಗ್ಗಟ್ಟು ಇದ್ದರೂ ಕೂಡ ಯೋಜನಾ ವೆಚ್ಚದಲ್ಲಿ ಕಳೆದ ೫ ವರ್ಷಗಳಲ್ಲಿ ಒಂದು ರೂಪಾಯಿ ಕಡಿಮೆ ಆಗಿಲ್ಲ. ಪ್ರತಿ ವರ್ಷವೂ ಅತಿ ಕಡಿಮೆ ಅಂದರೆ ೧೫ ಕೋಟಿ ಹೆಚ್ಚು ಅಂದರೆ ೫೭ ಕೋಟಿಯಷ್ಟು ಹಣವನ್ನು ಖರ್ಚು ಮಾಡಿದ್ದೇವೆ. ಆದ್ದರಿಂದ ಯೋಜನೆಯಲ್ಲಿ ಪ್ರಗತಿ ಕುಂಠಿತವಾಗಿದೆ ಎನ್ನುವ ವಾದ ಏನಿದೆ, ಅದು ಬುನಾದಿ ಇಲ್ಲದಂಥ ವಾದವಾಗುತ್ತದೆಂದು ಹೇಳಬಯಸುತ್ತೇನೆ. ಅದಕ್ಕೆ ಮೊದಲು ಏನಿತ್ತು, ೭೮-೭೯ರಲ್ಲಿ ೩೨೩ ಕೋಟಿ ೫೬ ಲಕ್ಷ ಪ್ಲಾನ್ ಔಟ್‌ಲೇ ನಿಗಧಿಯಾಗಿದ್ದರೆ ಕೇವಲ ೨೭೭ ಕೋಟಿ ಮಾತ್ರ ಖರ್ಚಾಗಿದೆ. ೭೯-೮೦ರಲ್ಲಿ ೩೬೦ ಕೋಟಿ ೩೯ ಲಕ್ಷ ನಿಗಧಿ ಮಾಡಿದ್ದರೆ, ೩೨೭ ಕೋಟಿ ಮಾತ್ರ ಖರ್ಚು ಮಾಡಿದ್ದಾರೆ. ಅಂದರೆ ೩೩ ಕೋಟಿ ರೂಪಾಯಿಗಳು ಕಡಿಮೆ ಆಯಿತು. ೮೦-೮೧ರಲ್ಲಿ ನಿಗದಿಯಾದದ್ದಕ್ಕಿಂತಲೂ ೪ ಕೋಟಿ ರೂಪಾಯಿ ಕಡಿಮೆ ಖರ್ಚಾಗಿದೆ. ಆದರೆ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ, ಮೊದಲನೆಯ ವರ್ಷದಿಂದಲೇ ಯೋಜನಾ ವೆಚ್ಚದಲ್ಲಿ ಖರ್ಚು ಹೆಚ್ಚಾಗುತ್ತಾ ಹೋಗಿದೆ, ಕಡಿಮೆ ಮಾತ್ರ ಆಗಿಲ್ಲ ಎಂಬ ಅಂಶವನ್ನು ಮಾನ್ಯ ಸದಸ್ಯರುಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಲ್ಲಾ ಸೇರಿ ಒಂದೇ ವರ್ಷದಲ್ಲಿ ೩೦೦ ಕೋಟಿಗೆ ತಂದಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಇದನ್ನು ಮೊದಲೇ ಹೇಳಿದ್ದೇನೆ. ಅದಕ್ಕೆ ಕಾರಣಗಳನ್ನು ಹೇಳಿದ್ದೇನೆ. ಇನ್ನು ಬೆಲೆ ಹೆಚ್ಚಳದ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ನಾವು ಬಡವರಿಗೆ ಹಸಿರು ಕಾರ್ಡ್ ಯೋಜನೆಯನ್ನು ಜಾರಿಗೆ ತಂದಿದ್ದೇವೆ. ಪ್ರಾರಂಭದಲ್ಲಿ ಈ ಯೋಜನೆ ಬಗ್ಗೆ ಸಾಕಷ್ಟು ಟೀಕೆಗಳು ಬಂದವು.

ಶ್ರೀ ಕೆ. ಹೆಚ್. ಪಾಟೀಲ್.—ಈಗಲೂ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಈಗಲೂ ಇದೆ. ತಾವು ದಯಮಾಡಿ, ಒಂದು ಕ್ಷಣ ಯೋಚನೆ ಮಾಡಬೇಕು. ಈ ಯೋಜನೆಯನ್ನು ನಿಲ್ಲಿಸಿದರೆ, ತೀರಾ ಬಡವರು ಬೆಲೆ ಏರಿಕೆಯ ಒತ್ತಡದಲ್ಲಿ ಜೀವನ ಮಾಡತಕ್ಕಂಥಾದ್ದು ಸಾಧ್ಯವೆ.

ಶ್ರೀ ಬಿ. ಲಕ್ಕಪ್ಪ.—ಗ್ರಾಮೀಣ ಬಡವರಿಗೆ ಕೊಡುತ್ತಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಇನ್ನೇನು ಸಾಹುಕಾರರಿಗೆ ಕೊಡುತ್ತಿದ್ದೇವೆಯೆ ? ಇದು ನಿಜ ವಾದಂಥ ವಾದವಲ್ಲ. ಯಾರಿಗೆ ಈ ಕಾರ್ಡನ್ನು ಕೊಡಬೇಕೆಂಬ ಬಗ್ಗೆ ಮಂಡಲಪಂಚಾಯ್ತಿಯಲ್ಲಿಯೇ ನಿರ್ಧಾರವಾಗುತ್ತದೆ. ಅದಕ್ಕೆ ಏಕೆ ತಲೆ ಬಿಸಿಮಾಡಿಕೊಳ್ಳುತ್ತೀರಿ. ಪ್ರತಿಯೊಂದನ್ನು ಇಲ್ಲಿ ಕುಳಿತು ಕೊಂಡು ನಿರ್ಧಾರ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ, ಎಷ್ಟು ಜನರಿಗೆ ಕೊಡುತ್ತಿದ್ದೇವೆಂಬುದನ್ನು ಹೇಳುತ್ತೇನೆ.

೧೨-೦೦ ಮಧ್ಯಾಹ್ನ

ಶ್ರೀ ಪ್ರತಾಪಚಂದ್ರಶೆಟ್ಟಿ.—ಅದರ ಬಗ್ಗೆ ಸಮೀಕ್ಷೆ ಮಾಡಿದರೆ ಗೊತ್ತಾಗುತ್ತದೆ.

ಶ್ರೀ ರಾಮಕೃಷ್ಣಹೆಗಡೆ.—ಇದು ಅತಿಶಯೋಕ್ತಿಯ ಪರಮಾವಧಿ ಎಂದು ಹೇಳಬಹುದು. ನಿಮಗೆ ಲಾಭ ಏನು ಅಂದರೆ, ಸರ್ಕಾರ ಮಾಡಿದಂಥ ಕೆಲಸ ಸರಿಯಲ್ಲ ಎಂದು ಹೇಳಿ ನೀವು ಇಲ್ಲಿ ಸಮಾಧಾನ ಮಾಡಿಕೊಳ್ಳಬಹುದು. ಇನ್ನು ಈ ಬೆಲೆ ಏರಿಕೆಗೆ ಮುಖ್ಯ ಕಾರಣ ಏನು ಎಂದು ಇದರ ಬಗ್ಗೆ ಒಂದೆರಡು ಸಾರಿ ಈ ಮನೆಯ ಮುಖಾಂತರವಾಗಿ ಎಲ್ಲಾ ಸತ್ಯಸಂಗತಿಗಳನ್ನು ಹೇಳಲಿಕ್ಕೆ ಪ್ರಯತ್ನ ಮಾಡಿದ್ದೇನೆ. ಇವೊತ್ತು ಕೂಡ ಆ ವಿಚಾರವನ್ನು ಹೇಳಿದರೆ ತಪ್ಪಾಗಲಾರದು. ಬೆಲೆ ಏರಿಕೆಯನ್ನು ತಡೆಯತಕ್ಕ ಜವಾಬ್ದಾರಿ ಯಾರದು. ? ಇಲ್ಲಿ ಕಳ್ಳ ಸಂಗ್ರಹ ಮಾಡಿ ವಸ್ತುಗಳು ಕೃತ್ರಿಮವಾಗಿ ಅಭಾವ ಉಂಟಾಗಿ ಅದರಿಂದ ಬೆಲೆ ಏರಿಕೆ ಆಗಿದ್ದರೆ ಅದನ್ನು ನಾನು ಒಪ್ಪುತ್ತೇನೆ. ರಾಜ್ಯ ಸರ್ಕಾರ ಅದಕ್ಕೆ ಕಾರಣ ಆಗಬಹುದು.

ಶ್ರೀ ಎನ್.ಎಮ್. ಅದ್ಯಂತಾಯ.—ಅತೀ ಹೆಚ್ಚು ಬೆಲೆ ಬೆಂಗಳೂರಿನಲ್ಲಿ ಆಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ಗೊತ್ತಿದೆಯೋ ?

ಶ್ರೀ ರಾಮಕೃಷ್ಣ ಹೆಗಡೆ.—ಪಾರ್ಲಿಮೆಂಟಿನಲ್ಲಿ ಪ್ರತಿಸಾರಿ ಆ ಪ್ರಶ್ನೆ ಬಂದಾಗ ಬೆಂಗಳೂರಿನಲ್ಲಿ ಜೀವನ ವೆಚ್ಚ ಎಲ್ಲಾ ರಾಜಧಾನಿಗಳಿಗಿಂತಲೂ ಹೆಚ್ಚಿಗೆ ಎನ್ನುವುದನ್ನು ಅನೇಕಸಲ ಅಲ್ಲಿಯ ಮಂತ್ರಿಗಳು ಹೇಳಿದ್ದಾರೆ. ಬೆಲೆ ಏರಿಕೆಗೆ ಎರಡು ಮುಖ್ಯ ಕಾರಣಗಳು. ಇವೊತ್ತು ಯಾವುದೇ ವಸ್ತುವಿನ ಅಭಾವ ದಿಂದ ಬೆಲೆ ಏರಿಕೆ ಆಗುತ್ತಿಲ್ಲ ಅದನ್ನು ನಾವು ತಿಳಿದುಕೊಳ್ಳಬೇಕು. ನಮ್ಮ ಉಗ್ರಾಣಗಳಲ್ಲಿ ಅಕ್ಕಿ ಗೋಧಿ ಇನ್ನಿತರೆ ಆಹಾರ ಪದಾರ್ಥಗಳು ಸುಮಾರು ಎರಡೂ ಕೋಟಿ ಟನ್ ದಾಸ್ತಾನು ಇದೆ. ಎಂದು ನಮ್ಮ ಪ್ರಧಾನಮಂತ್ರಿಗಳು ಪುನ:ಪುನ: ಹೇಳಿದರು ಇಂತಹ ಅಭಾವ ಪರಿಸ್ಥಿತಿಯಲ್ಲೂ ಕೂಡ ನಾವು ಅಮೆರಿಕಾದಿಂದ ಬೇರೆ ದೇಶಗಳಿಂದ ಆಮದು ಮಾಡತಕ್ಕಂಥ ಪರಿಸ್ಥಿತಿ ಬಂದಿಲ್ಲ ನಮ್ಮಲ್ಲಿ ಆಹಾರ ಪದಾರ್ಥ ಶೇಖರಿತವಾಗಿದೆ ಎಂದು ಹೇಳಿದ್ದಾರೆ. ಆದರೂ ಸಹ ಈ ಆಹಾರ ಪದಾರ್ಥಗಳ ಬೆಲೆ ಹೆಚ್ಚು ಆಗಲಿಕ್ಕೆ ಕಾರಣ ಏನು ? ಉದಾಹರಣೆಗೆ ಹೇಳುವುದಾದರೆ. ಕೇವಲ ಮೂರು ನಾಲ್ಕು ದಿವಸಗಳ ಹಿಂದೆ ಗೋಧಿ ಬೆಲೆಯನ್ನು ಒಂದು ಕ್ವಿಂಟೋಲ್‌ಗೆ ೯ ರೂಪಾಯಿ ಹೆಚ್ಚು ಮಾಡಿದರು. ನಾನು ಅದಕ್ಕೆ ಸಂಬಂಧಪಟ್ಟಂತೆ ಕಳೆದ ೫ ವರ್ಷಗಳಲ್ಲಿ ಕೇಂದ್ರ ಸರ್ಕಾರದವರು ಎಷ್ಟು ಸಾರಿ ಬೆಲೆ ಹೆಚ್ಚು ಮಾಡಿದ್ದಾರೆ ಎನ್ನುವ ಬಗ್ಗೆ ಮಾಹಿತಿ ಕೊಡಲಿಕ್ಕೆ ಬಯಸುತ್ತೇನೆ. ಕಳೆದ ಎರಡು ವರ್ಷಗಳಲ್ಲಿ ಅಕ್ಕಿ ಬೆಲೆ ಯನ್ನು ಕೇಂದ್ರ ಸರ್ಕಾರದವರು ೩ ಸಾರಿ ಹೆಚ್ಚು ಮಾಡಿದರು. ೧-೧೨-೧೯೮೬ರಲ್ಲಿ ಒಂದು ಕ್ವಿಂಟೋಲ್‌ಗೆ ೧೫ ರೂಪಾಯಿ ಹೆಚ್ಚು ಮಾಡಿದರು. ಒಂದೇ ವರ್ಷದಲ್ಲಿ ಎರಡನೇ ಸಲ ೧-೧೦-೧೯೮೬ ರಲ್ಲಿ ೮ ರೂಪಾಯಿ ಹೆಚ್ಚು ಮಾಡಿದರು. ೧-೧೦-೧೯೮೭ರಲ್ಲಿ ಒಂದೇ ವರ್ಷಕ್ಕೆ ಮತ್ತೊಂದು ಸಾರಿ ೧೩ ರೂಪಾಯಿ ಹೆಚ್ಚು ಮಾಡಿದರು. ಇದು ರೇಷನ್ ಕಾರ್ಡ್ ಮುಖಾಂತರ ಕೊಡತಕ್ಕ ಅಕ್ಕಿ.

ಶ್ರೀ ಎನ್, ಎಮ್. ಅದ್ಯಂತಾಯ.—ತಾವೂ ಸಹ ಎರಡೂವರೆ ರೂಪಾಯಿ ಇದ್ದುದನ್ನು ಮೂರು ರೂಪಾಯಿ ಮಾಡಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಕೇಂದ್ರ ಸರ್ಕಾರದಿಂದ ನಾವು ಅಕ್ಕಿಯನ್ನು ಖರೀದಿ ಮಾಡುತ್ತೇವೆ. ಕೇಂದ್ರ ಸರ್ಕಾರದವರು ಬೆಲೆಯನ್ನು ಹೆಚ್ಚಿಗೆ ಮಾಡಿದರೆ ನಾವು ಎಷ್ಟು ವರ್ಷದವರೆಗೆ ಅಷ್ಟರಮಟ್ಟಿಗೆ ಈ ಅಕ್ಕಿಯ ಬೆಲೆಯ ಹೆಚ್ಚಳವನ್ನು ನುಂಗಿಕೊಂಡು ಕಡಿಮೆ ಬೆಲೆಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ?...

ಶ್ರೀ ಎನ್. ಎಂ. ಅಡ್ಯಂತಾಯ.—ಅವರು ೨ ರೂಪಾಯಿ ಒಂದು ಕ್ವಿಂಟಾಲ್‌ಗೆ ಹೆಚ್ಚು ಮಾಡಿದರೆ ನೀವು ೫೦–೬೦ ರೂಪಾಯಿ ಹೆಚ್ಚಿಗೆ ಮಾಡುತ್ತೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಕೇಂದ್ರ ಸರ್ಕಾರದವರು ಯಾವಾಗ ಆಹಾರ ಪದಾರ್ಥಗಳ ಬೆಲೆಗಳನ್ನು ಎಷ್ಟು ಹೆಚ್ಚಿಗೆ ಮಾಡುತ್ತಾರೋ ಅದೇ ಪ್ರಮಾಣದಲ್ಲಿ ನಾವು ರೇಷನ್ ಕಾರ್ಡ್‌ನ ಮುಖಾಂತರ ಮತ್ತು ಗ್ರೀನ್ ಕಾರ್ಡ್‌ನ ಮುಖಾಂತರ ಈ ಆಹಾರ ಪದಾರ್ಥಗಳನ್ನು ಹಂಚುತ್ತಿದ್ದೇವೆ. ನಾವು ಎಷ್ಟು ಹಂಚುತ್ತೇವೆ ಅದಕ್ಕೆ ಅಷ್ಟು ಬೆಲೆ ಯನ್ನು ಹೆಚ್ಚು ಮಾಡತಕ್ಕ ಅನಿವಾರ್ಯ ಪ್ರಸಂಗ ಇದೆ. ಆದರೆ ಅದಕ್ಕಿಂತ ಹೆಚ್ಚಿಗೆ ಮಾಡುವುದಿಲ್ಲ. ೨ ವರ್ಷದಲ್ಲಿ ಅವರು ೩೫ ರೂಪಾಯಿಗಳನ್ನು ಅಕ್ಕಿಗೆ ಹೆಚ್ಚು ಮಾಡಿದ್ದಾರೆ. ಅದೇರೀತಿ ಗೋಧಿಯ ಬಗ್ಗೆ ಹೇಳುವುದಾದರೆ, ೧೯೮೬ ರಿಂದ ೮೮ನೇ ಇಸವಿಯವರೆಗೆ ೩ ಸಾರಿ ಹೆಚ್ಚಿಗೆ ಮಾಡಿದ್ದಾರೆ. ಮೊದಲನೇ ಸಾರಿ ೧೮ ರೂಪಾಯಿ, ಎರಡನೇ ಸಾರಿ ೧೫ ರೂಪಾಯಿ ಮತ್ತು ೩ನೇ ಸಾರಿ ೯ ರೂಪಾಯಿ ಹೀಗೆ ಒಟ್ಟು ೩೨ ರೂಪಾಯಿಗಳನ್ನು ೨ ವರ್ಷದಲ್ಲಿ ಹೆಚ್ಚಿಗೆ ಮಾಡಿದ್ದಾರೆ.

ಇನ್ನು ಸಕ್ಕರೆಯ ಬಗ್ಗೆ ಹೇಳುವುದಾದರೆ ೨ ವರ್ಷಗಳಲ್ಲಿ ೨ ಸಾರಿ ಹೆಚ್ಚಿಗೆ ಮಾಡಿದ್ದಾರೆ. ಮೊದಲನೇ ಸಾರಿ ೫ ರೂಪಾಯಿ ಮತ್ತು ಎರಡನೇ ಸಾರಿ ೨೫ ರೂಪಾಯಿಗಳನ್ನು ಹೆಚ್ಚು ಮಾಡಿದ್ದಾರೆ.

ಇನ್ನು ತಾಳೆ ಎಣ್ಣೆಯ ಬಗ್ಗೆ ಹೇಳುವುದಾದರೆ ಕಳೆದವರ್ಷ ಒಂದೇ ಸಾರಿ ೨೦೦ ರೂಪಾಯಿಗಳನ್ನು ಹೆಚ್ಚು ಮಾಡಿದ್ದಾರೆ. ಇದು ಡೈರೆಕ್ಟ್ ಆಗಿ, ಇದರ ಹೊರತಾಗಿ ಅಡ್ಮಿನಿಸ್ಟರ್ಡ್ ಪ್ರೈಸ್ ಎಂದು ನಾವು ಏನು ಹೇಳುತ್ತೇವೆ, ಅಂದರೆ ಸರ್ಕಾರೀ ವಲಯದಲ್ಲಿ ಉತ್ಪಾದನೆಯಾಗತಕ್ಕ ವಸ್ತುಗಳ ಬೆಲೆ ಇದ್ದಕ್ಕಿದ್ದ ಹಾಗೆ ಹೆಚ್ಚಿಗೆ ಮಾಡಿ ತಮ್ಮ ಆದಾಯವನ್ನು ಹೆಚ್ಚಿಗೆ ಮಾಡಿಕೊಳ್ಳುವುದಕ್ಕೆ ಮತ್ತು ರಾಜ್ಯ ಸರ್ಕಾರಕ್ಕೆ ಸಲ್ಲತಕ್ಕ ಹಣವನ್ನು ವಂಚನೆ ಮಾಡುವುದಕ್ಕೆ ಕೇಂದ್ರ ಸರ್ಕಾರದವರು ಈ ನಿರ್ಣಯವನ್ನು ಮಾಡಿದ್ದಾರೆ. ೮೫-೮೬ರಲ್ಲಿ ಪೆಟ್ರೋಲ್ ಬೆಲೆಯನ್ನು ಹೆಚ್ಚಿಗೆ ಮಾಡಿ ೧೮೦೦ ಕೋಟಿ ರೂಪಾಯಿ ಇಡೀ ವರ್ಷಕ್ಕೆ ಹೆಚ್ಚಿಗೆ ಆದಾಯ ಬರತಕ್ಕ ರೀತಿಯಲ್ಲಿ ಅವರು ಮಾಡಿಕೊಂಡಿದ್ದಾರೆ. ೮೫–೮೭ರಲ್ಲಿ ಪೆಟ್ರೋಲ್ ಮತ್ತು ಸ್ಟೀಲ್‌ನ ಬೆಲೆಯನ್ನು ಹೆಚ್ಚು ಮಾಡಿ ೧೧೦ ಕೋಟಿ ರೂಪಾಯಿಗಿಂತ ಹೆಚ್ಚಿಗೆ ಬರತಕ್ಕ ರೀತಿಯಲ್ಲಿ ಮಾಡಿಕೊಂಡಿದ್ದಾರೆ. ೮೬-೮೭ರಲ್ಲಿ ಕಲ್ಲಿದ್ದಲು, ಗೊಬ್ಬರ ಮತ್ತು ಪೆಟ್ರೋಲ್‌ಗೆ ಎಲ್ಲದಕ್ಕೂ ಸೇರಿ ವರ್ಷಕ್ಕೆ ೨೮೦೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಆದಾಯ ಬರತಕ್ಕ ರೀತಿಯಲ್ಲಿ ಮಾಡಿಕೊಂಡಿದ್ದಾರೆ. ೮೭-೮೮ ರಲ್ಲಿ ಪೆಟ್ರೋಲ್ ಮತ್ತು ಪೆಟ್ರೋಲಿಯಂ, ಸ್ಟೀಲ್ ಇವುಗಳ ಬೆಲೆಯನ್ನು ಹೆಚ್ಚಿಗೆ ಮಾಡಿದರು. ಈಗ್ಗೆ ೩ ತಿಂಗಳ ಹಿಂದೆ ಪೆಟ್ರೋಲ್ ಬೆಲೆಯನ್ನು ೧ ಲೀಟರ್‌ಗೆ ೧ ರೂಪಾಯಿ ನಂತೆ ಹೆಚ್ಚಿಗೆ ಮಾಡಿದರು. ಇದು ಕೇಂದ್ರ ಸರ್ಕಾರದ ನಿರ್ಣಯ. ಅವರ ನಿರ್ಣಯದಿಂದಾಗಿ ನಮ್ಮ ರಾಜ್ಯ ಸರ್ಕಾರಕ್ಕೆ ಒಂದು ವರ್ಷಕ್ಕೆ ೧೦೦ ಕೋಟಿ ರೂಪಾಯಿಗಳ ಲುಕ್ಸಾನಾಗುತ್ತದೆ. ಶೇಕಡ ೬೫ ರಿಂದ ೭೦ ರಷ್ಟು ಪೆಟ್ರೋಲ್ ಬಳಕೆಯನ್ನು ನಮ್ಮ ರಾಜ್ಯ ಸರ್ಕಾರ ಮತ್ತು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟ ಸಂಸ್ಥೆಗಳು ಉಪಯೋಗಿಸುತ್ತವೆ. ಇದೇರೀತಿ ಸ್ಟೀಲ್‌ನ ಬೆಲೆಯನ್ನೂ ಹೆಚ್ಚಿಗೆ ಮಾಡಿದರು. ಇದರಿಂದಾಗಿ ಬ್ರಿಡ್ಜ್ ಕೆಲಸ ಇರಬಹುದು, ಡ್ಯಾಮ್‌ನ ಕೆಲಸ ಇರಬಹುದು, ಅಥವಾ ಕಟ್ಟಡದ ಕೆಲಸ ಇರಬಹುದು ಇವುಗಳ ಕಾಸ್ಟ್ ಆಫ್ ಕನ್‌ಸ್ಟ್ರಕ್ಷನ್ ನಮಗೆ ಜಾಸ್ತಿಯಾಗುತ್ತದೆ. ಕಲ್ಲಿದ್ದಲಿನ ಬೆಲೆಯನ್ನು ಅವರು ಜಾಸ್ತಿ ಮಾಡಿದರು. ಇದರಿಂದಾಗಿ ನಮ್ಮ ರಾಯಚೂರಿನಲ್ಲಿರತಕ್ಕ ಶಾಖೋತ್ಪನ್ನ ವಿದ್ಯುಚ್ಛಕ್ತಿಯ ಉತ್ಪಾದನಾ ವೆಚ್ಚ ಜಾಸ್ತಿಯಾಗುತ್ತದೆ. ಈ ರೀತಿ ಹೆಚ್ಚು ಖರ್ಚು ಬರತಕ್ಕದ್ದು ಕೇವಲ ನಮ್ಮ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲ. ಇಡೀ ದೇಶದಲ್ಲಿರತಕ್ಕ ಎಲ್ಲಾ ರಾಜ್ಯ ಸರ್ಕಾರಗಳಿಗೂ ಇದರಿಂದ ಎರಡು ರೀತಿಯ ಹೊಡೆತ ಬೀಳುತ್ತದೆಂದು ನಾನು ಈಗಾಗಲೇ ಹೇಳಿದ್ದೇನೆ. ಇದರಿಂದ ಕ್ಯಾಸ್‌ಕೇಡಿಂಗ್ ರೀತಿಯಲ್ಲಿ ಎಲ್ಲಾ ವಸ್ತುಗಳ ಮೇಲೆ ಒಂದು ರೀತಿಯ ಪರಿಣಾಮವಾಗಿದೆ ಆದ್ದರಿಂದ ಬೆಲೆಗಳ ಮೇಲೂ ಅದರ ಪರಿಣಾಮವಾಗುತ್ತದೆ, ರೇಲ್ವೆ ಫೇರ್ ಹೆಚ್ಚು ಮಾಡಿದರು. ಅದೇ ರೀತಿಯಲ್ಲಿ ಪೋಸ್ಟ್ ಅಂಡ್ ಟೆಲಿಗ್ರಾಫ್ ಡಿಪಾರ್ಟ್‌ಮೆಂಟ್‌ನಲ್ಲಿ ಹೆಚ್ಚು ಮಾಡಿದರು. ಇದೆಲ್ಲದರ ಪರಿಣಾಮ ಒಟ್ಟಾರೆ ಬೆಲೆ ಹೆಚ್ಚಾಗಿದೆ. ಇದರಿಂದಾಗಿ ರೂಪಾಯಿಯ ಬೆಲೆ ಕಡಿಮೆಯಾಗುತ್ತದೆ,

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಎಲೆಕ್ಟ್ರಿಸಿಟಿ ಬೆಲೆ ಜಾಸ್ತಿ ಮಾಡಿರಂತ್ರೀರಿ.

ಶ್ರೀ ರಾಮಕೃಷ್ಣ ಹೆಗಡೆ —ಮಾಡಲೇ ಬೇಕಾಗುತ್ತದೆ, ಈವತ್ತು ನಾವು ಈ ಒಂದು ಬಾಬಿಗೆ ಒಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಅವರಿಂದ ಸಾ[illegible]ರತಕ್ಕಂಥ ಪರಿಸ್ಥಿತಿ ನಮಗೆ ಬಂದಿದೆ. ಆದುದರಿಂದ ಇದರ ಬೆಲೆಯನ್ನು ಹೆಚ್ಚು ಮಾಡದಿದ್ದರೆ ಸಬ್[illegible]ಕೊಡುವುದರಕ್ಕೂ ಕೂಡ ಸಾಲ ಕೊಡತಕ್ಕಂಥ ಪರಿಸ್ಥಿತಿ ಬರುತ್ತದೆ.

ಮಾನ್ಯ ಅಧ್ಯಕ್ಷರೇ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮತ್ತು [illegible]ತರ ಒಬ್ಬಬ್ಬಿರು ಮಾನ್ಯ ಸದಸ್ಯರು ಎಕ್ಸೈಸ್ ಮತ್ತು ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ಗಳಲ್ಲಿ ಬಾಕಿ ಇರತಕ್ಕಂಥ ಹಣ ನೂರಾರು ಕೋಟಿ ಇರುತ್ತದೆ, ಇದರ ಬಗ್ಗೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲವೆಂದು ಹೇಳಿದರು. ನಾವು ಇದಕ್ಕೆ ಸಂಬಂಧಪಟ್ಟ ಹಾಗೆ ಅಂಕಿ ಅಂಶಗಳನ್ನು ಹಿಂದೆ ಪ್ರಶ್ನೋತ್ತರ ಕಾಲದಲ್ಲಿ ಕೊಟ್ಟಂತೆ ನೆನಪಿದೆ. ಆದರೆ ಪುನಃ ಒಂದು ಸಲ ಈ ವಿಚಾರವನ್ನು ಇಲ್ಲಿ ಹೇಳಿದರೆ ತಪ್ಪಾಗಲಾರದೆಂದು ನಾನು ಭಾವಿಸುತ್ತೇನೆ ಸೇಲ್ಸ್ ಟ್ಯಾಕ್ಸ್ ೧೯೮೬-೮೭ನೇ ಇಸವಿಯಲ್ಲಿ ಮೂರು ನೂರು ಕೋಟಿ ರೂಪಾಯಿಗಳಿಗಿಂತಲೂ ಕಡಿಮೆ ಆದಾಯವಿತ್ತು. ೧೯೮೭-೮೮ಕ್ಕೆ ೮೮೮ ಕೋಟಿ ರೂಪಾಯಿವರೆಗೆ ಆಯಿತು. ಅಭಾವ ಪರಿಸ್ಥಿತಿ ಇದ್ದರೂ ಕೂಡ ನಿಜವಾಗಿಯೂ ನೋಡಿದರೆ ೧೯೮೭-೮೮ನೇ ಇಸವಿಯಲ್ಲಿ ಅಂದರೆ ಕಳೆದ ವರ್ಷದ ಬಜೆಟ್ ಭಾಷಣವನ್ನು ತಾವು ಮತ್ತೊಂದು ಸಲ ಓದಿ ನೋಡಿದರೆ ಗೊತ್ತಾಗುತ್ತದೆ. ನಾವು ನಿರೀಕ್ಷೆ ಮಾಡಿದ್ದುದ ೧೦೦೦ ಕೋಟಿ ರೂಪಾಯಿಗಳು. ಆದರೆ ಪುನರ್‌ವಿಮರ್ಶಿಸಿದ ಅಂದಾಜು ಮೇಲೆ ಕೇವಲ ೮೩೦,೩೧ ಕೋಟಿ ರೂಪಾಯಿಗಳಷ್ಟು ಮಾತ್ರ ಆಗುತ್ತದೆ, ೧೯೮೭ನೇ ಇಸವಿಯಲ್ಲಿ ಎಕ್ಸೈಸ್‌ನಿಂದ ಬರತಕ್ಕಂಥ ಆದಾಯ ೧೬೦ ಕೋಟಿ ರೂಪಾಯಿಗಳಿಗಿಂತಲೂ ಕಡಿಮೆಯಾಯಿತು ಕಳೆದ ವರ್ಷ ನಾವು ಅಂದಾಜು ಮಾಡಿದ ಪ್ರಕಾರ ೨೬೦ ಕೋಟಿ ರೂಪಾಯಿ ಆಗಿದೆ, ಮೋಟರ್ ವೆಹಿಕಲ್ಸ್ ಬಾಬಿನಲ್ಲಿ ೫೯ ಕೋಟಿ ರೂಪಾಯಿಗಳು ಆಗಿದೆ. ೧೯೮೭-೮೩ರಲ್ಲಿ ಅಂದರೆ ಚಾಲ್ತಿ ವರ್ಷದಲ್ಲಿ ೧೪೫ ಕೋಟಿ ರೂಪಾಯಿಗಳಿಗೆ ಏರಿಕೆಯಾಗಿದೆ. ಅಂದರೆ ೧೯೮೭-೮೩ನೇ ವರ್ಷದಲ್ಲಿ ಒಟ್ಟು ಟ್ಯಾಕ್ಸ್ ರೆವಿನ್ಯೂ ೬೭೦ ಕೋಟಿ ರೂಪಾಯಿಗಳು ಅಷ್ಟು ಇದೆ. ಕಳೆದ ವರ್ಷ ಅಂದರೆ ಚಾಲ್ತಿ ವರ್ಷದಲ್ಲಿ ೧೬೨೦ ಕೋಟಿ ರೂಪಾಯಿಗಳಷ್ಟು ಟ್ಯಾಕ್ಸ್ ರೆವಿನ್ಯೂ ಹೆಚ್ಚಾಗಿದೆ. ಇದರ ಅರ್ಥ ಮಾನ್ಯ ಸದಸ್ಯರು ಟೀಕೆ ಮಾಡಿದ ಹಾಗೆ ಅಡಿಷನಲ್ ರಿಸೋರ್ಸಸ್ ಮೊಬಲೈಸೇಷನ್‌ನಲ್ಲಿ ನಮ್ಮ ಸರ್ಕಾರ ಎಂದೂ ಹಿಂದೆ ಬಿದ್ದಿಲ್ಲ. ಇದನ್ನು ನಾನು ಹೇಳುವ ಮಾತಲ್ಲ, ಪ್ಲಾನಿಂಗ್ ಕಮಿಷನ್‌ರವರೇ ಕರ್ನಾಟಕ ಸರ್ಕಾರದ ಬಗ್ಗೆ ಅಡಿಷನಲ್ ರಿಸೋರ್ಸಸ್ ಮೊಬಲೈಸೇಷನ್ ವಿಚಾರದಲ್ಲಿ ಮೆಚ್ಚುಗೆಯ ಮಾತನ್ನು ಆಡಿದ್ದಾರೆ. ಆದರಿಂದ ಆ ಟೀಕೆ ಆಧಾರ ರಹಿತವಾಗಿರತಕ್ಕದ್ದು ಎಂದು ಹೇಳುವುದಕ್ಕೆ ಬಯಸುತ್ತೇನೆ. ಬಾಕಿ ಇರತಕ್ಕ ಬಾಬುಗಳಲ್ಲಿ ಎಷ್ಟು ಹಣ ಯಾವ ರೀತಿ ಇದೆ ಎಂದು ಹೇಳುವ ವಿಚಾರದಲ್ಲಿ ಟೀಕೆ ಬಂದಿರುವುದರಿಂದ ಎರಡು ಮಾತುಗಳನ್ನು ಹೇಳಬೇಕಾಗಿದೆ. Excise arrears accumulated upto the end of June, 1987 is Rs. 69.33 crores. The arrears collected upto November, 1987 is Rs. 17.71 crores, Balance of Rental arrears is Rs 51.62 crores. Balance collectable arrears is Rs. 18,75 crores. Amount covered under Courts stay order is Rs. 83.787 crores. ಅಂದರೆ ೩೨-೩೩ ಕೋಟಿ ರೂಪಾಯಿಗಳಷ್ಟು ಕೋರ್ಟಿನ ಸ್ಟೇ ಬಂದಿದ್ದರಿಂದ ಕಲೆಕ್ಟ್ ಮಾಡುವುದು ಸಾಧ್ಯವಾಗಲಿಲ್ಲ. ಅದೇ ರೀತಿ ಸೇಲ್ಸ್ ಟ್ಯಾಕ್ಸ್‌ನಲ್ಲಿ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೩೨ ಕೋಟಿ ರೂಪಾಯಿ ಸ್ಟೇ ಬಂದದ್ದು ರೂ, ೧೮ ಕೋಟಿ ರಿಕವರಬಲ್ ೫೧ ಕೋಟಿ ರೆಂಟಲ್ ಅರಿಯರ್ಸ್, ಅಂದರೆ ಒಟ್ಟು ೭೦ ಕೋಟಿ ರೂಪಾಯಿ ಕಲೆಕ್ಟ್ ಮಾಡಬೇಕಾದ್ದು ಇದೆ.

ಶ್ರೀ ರಾಮಕೃಷ್ಣ ಹೆಗಡೆ.—೫೧ ಕೋಟಿ ರೂಪಾಯಿ ರೆಂಟಲ್ ಅರಿಯರ್ಸ್ ಇದೆ. ಅದರಲ್ಲಿಯೆ ೩೨ ಕೋಟಿ ರೂಪಾಯಿಗೆ ಸ್ಟೇ ಆರ್ಡರ್ ಇದೆ. ಅಂದರೆ ಸ್ಟೇ ಆರ್ಡರ್ ಇಲ್ಲದೆ ಕಲೆಕ್ಟ್ ಮಾಡಬೇಕಾದಂದು ೧೮ ಕೋಟಿ ರೂಪಾಯಿಗಳು. ಅದರ ಬಗ್ಗೆ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ಏನಿದೆ ಅದನ್ನು ವಸೂಲ್ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಇದರಲ್ಲಿ ಏನಾಗಿದೆ ಎಂದರೆ, ಎಕ್ಸೈಜ್ ಅನ್ನು ಹರಾಜು ಮಾಡುವಾಗ ಬೇನಾಮಿಗಳ ಹೆಸರಿ

ನಲ್ಲಿ ಹರಾಜಿನಲ್ಲಿ ಆಫರ್ ಮಾಡುತ್ತಾರೆ. ಇದು ಬಹಳ ವರ್ಷಗಳಿಂದ ನಡೆದುಕೊಂಡು ಬಂದಿದೆ. ಕಳೆದ ಎರಡು ಮೂರು ವರ್ಷಗಳದ್ದೇನಲ್ಲ. ಅದಕ್ಕಾಗಿ ಈ ವರ್ಷ ಹರಾಜು ಮಾಡುವಾಗ ನಿಯಮಗಳನ್ನು ತಿದ್ದುಪಡಿ ಮಾಡಬೇಕೆಂದು ಮಾಡಿದ್ದೇವೆ. ಬೇನಾಮಿ ಹೆಸರಿನಲ್ಲಿ ಯಾರೂ ಕೂಡ ಯಾವುದೇ ಎಕ್ಸೈಜ್ ಕಂಟ್ರಾಕ್ಟರ್ ಬಿಡ್ ಮಾಡಲಿಕ್ಕೆ ಬಾರದೆ ಇರತಕ್ಕ ರೀತಿಯಲ್ಲಿ ನಿಯಮಗಳನ್ನು ತಿದ್ದುಪಡಿ ಮಾಡುತ್ತೇವೆ ಇಲ್ಲದಿದ್ದರೆ ಇದುವರೆಗೆ ಏನು ನಡೆದು ಕೊಂಡು ಬಂದಿದೆ ಎಂದರೆ ಒಬ್ಬ ಎಕ್ಸೈಜ್ ಕಂಟ್ರಾಕ್ಟರ್ ಇರುತ್ತಾನೆ, ಅವನಿಗೆ ಸಾಕಷ್ಟು ಶಕ್ತಿ ಇರುತ್ತದೆ, ಬಿಡ್ ತನಗೆ ಸಿಗಬೇಕೆಂಬ ದೃಷ್ಟಿಯಿಂದ ತನ್ನ ಡ್ರೈವರ್ ಹೆಸರಿನಲ್ಲಿ, ಪೀವನ್ ಹೆಸರಿನಲ್ಲಿ, ಮತ್ತೊಬ್ಬರ ಹೆಸರಿನಲ್ಲಿ ಬಿಡ್ ಮಾಡಿಸುತ್ತಾನೆ. ಅದಕ್ಕೆ ಹಣ ಡಿಪಾಸಿಟ್ ಮಾಡುವುದು, ಬ್ಯಾಂಕ್ ಗ್ಯಾರಂಟಿ ಕೊಡುವುದು ಸುಲಭ. ಕಷ್ಟವೇನೂ ಇಲ್ಲ.

ಶ್ರೀ ಬಿ, ಬಸವಲಿಂಗಪ್ಪ —ನಿಮ್ಮ ಅಧಿಕಾರಿಗಳು ಏನು ಮಾಡುತ್ತಿರುತ್ತಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಆ ಹೊತ್ತಿನಲ್ಲಿ ಅದು ಗೊತ್ತಾಗುವುದಿಲ್ಲ. ಅದಕ್ಕೋಸ್ಕರ ರೂಲ್ಸ್ ತಿದ್ದುಪಡಿ ಮಾಡಿ ಅದು ಆಗದಂತೆ ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ. ಮಾನ್ಯ ಸದಸ್ಯರಿಗೆ ಆಶ್ಚರ್ಯವಾಗಬಹುದು, ಕೆಲವು ಕೇಸುಗಳಲ್ಲಿ ಎಕ್ಸೈಜ್ ಕಂಟ್ರಾಕ್ಟರ್ಸ್ ಏನು ಬ್ಯಾಂಕ್ ಗ್ಯಾರಂಟಿ ಕೊಟ್ಟಿದ್ದಾರೆ ಅದನ್ನು ಎನ್‌ಫೋರ್ಸ್ ಮಾಡುವುದಕ್ಕೆ ಹೋದರೆ ಷೆಡ್ಯೂಲ್ ಬ್ಯಾಂಕಿನವರು ಕೋರ್ಟಿನಿಂದ ಸ್ಟೇ ಆರ್ಡರ್ ತಂದಿದ್ದಾರೆ.

ಬ್ಯಾಂಕ್ ಗ್ಯಾರಂಟಿಯನ್ನು ನಾವು ಎನ್‌ಫೋರ್ಸ್ ಮಾಡುವುದಕ್ಕೆ ಕ್ರಮ ತೆಗೆದುಕೊಂಡರೆ Certain Scheduled banks have gone to the Court and obtained the stay order. ಇದೇ ಸಂದರ್ಭವನ್ನು ನಾನು ಉಪಯೋಗಿಸಿಕೊಂಡು ಒಂದು ವಿಚಾರವನ್ನು ಹೇಳುತ್ತೇನೆ. ಮಾನ್ಯ ವೀರಪ್ಪ ಮೊಯಿಲಿಯವರು ಒಂದು ಕೇಸನ್ನು ಇಲ್ಲಿ ಪ್ರಸ್ತಾಪ ಮಾಡಿದರು. ಆ ವಿಚಾರದಲ್ಲಿ ನಾನು ಎರಡು ಮಾತನ್ನು ಹೇಳಬಯಸುತ್ತೇನೆ. ಅವರು ಪ್ರಸ್ತಾಪ ಮಾಡಿರತಕ್ಕ ವಿಚಾರ ನಿಜ. ಮತ್ತು ಹೈಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ಅಬ್ಕಾರಿ ಖಾತೆಯ ಕಮೀಷನರ್ ಬಗ್ಗೆ ಕೆಲವೊಂದು ಟೀಕೆ ಮಾಡಿರತಕ್ಕದ್ದೂ ನಿಜ. ಬಜೆಟ್ ಭಾಷಣದಲ್ಲಿ ನಾನು ಒಂದು ವಿಚಾರ ಅನೌನ್ಸ್ ಮಾಡಿದೆ. ಆ ಭಾಷಣದ ಆಧಾರದ ಮೇಲೆ ಎಕ್ಸೈಸ್ ಕಮೀಷನರ್ ಒಂದು ಇನ್‌ಸ್ಟ್ರಕ್ಷನ್ ಕೊಟ್ಟರು. ನಾಲ್ಕು ರೂಪಾಯಿಯಿಂದ ಆರು ರೂಪಾಯಿಗೆ ಅದರಲ್ಲಿ ಏರಿಸಿದ್ದಾರೆ. ಆದ್ದರಿಂದ ಬರುವ ತಿಂಗಳು ಮೊದಲನೇ ವಾರದಿಂದ ಆರು ರೂಪಾಯಿನಂತೆ ನೀವು ವಸೂಲು ಮಾಡಬೇಕು ಎಂದು ಹೇಳತಕ್ಕ ಇನ್‌ಸ್ಟ್ರಕ್ಷನನ್ನು ಅವರು ಕೊಟ್ಟರು. ಕಂಟ್ರಾಕ್ಟರ್‌ಗಳು ಅದರ ವಿರುದ್ಧ ಸ್ಟೇ ಆರ್ಡರ್ ತಂದರು. ಆ ಸ್ಟೇ ಆರ್ಡರ್ ಕೊಟ್ಟಿದ್ದು ಯಾವ ಕಾರಣದಿಂದ ಎಂದರೆ ನಾವು ರೂಲ್ಸ್ ಮಾಡಿರಲಿಲ್ಲ ಎಂದು. ಈ ಇನ್‌ಸ್ಟ್ರಕ್ಷನ್‌ಗೆ ಯಾವುದೇ ಆಧಾರ ಇಲ್ಲದೇ ಇರುವುದರಿಂದ ರೂಲ್ಸ್ ಮಾಡದೆ ಇರುವುದರಿಂದ ಇದನ್ನು ತೆಗೆದುಹಾಕುತ್ತೇವೆಂದು ಕೋರ್ಟಿನಲ್ಲಿ ಹೇಳಿದ್ದಾರೆ. ಅಷ್ಟರೊಳಗೆ ನಾವು ರೂಲ್ಸ್ ಮಾಡಿದ್ದೇವೆ. ಈಗ ಆಗಿರತಕ್ಕ ತಪ್ಪು ಏನೆಂದರೆ ರೂಲ್ಸ್ ಮಾಡಿದ ಮೇಲೆ ತಕ್ಷಣ ನಾವು ಕೋರ್ಟಿಗೆ ತಿಳಿಸಿ ರೂಲ್ಸ್ ಮಾಡಿದ್ದೇವೆ. ಅದರ ಪ್ರಕಾರ ನಾವು ವಸೂಲು ಮಾಡುವುದಕ್ಕೆ ಅನುಮತಿ ಕೊಡಿ ಎಂದು ಹೇಳಬೇಕಾಗಿತ್ತು, ಇದನ್ನು ಮಾಡದೇ ಇರತಕ್ಕದ್ದು ಒಂದು ತಪ್ಪಾಗಿದೆ ಆದರೂ ಅಷ್ಟನ್ನೂ ವಸೂಲು ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಆಗಿರತಕ್ಕ ಅಚಾತುರ್ಯ ಏನೆಂದರೆ ಯಾವ ವಕೀಲರು ಸರ್ಕಾರದ ಪರವಾಗಿದ್ದರೋ ಆ ವಕೀಲರು ಸಕಾಲದಲ್ಲಿ ನಿಗಾವಹಿಸಿಲ್ಲ. ಅದು ನನ್ನ ಗಮನಕ್ಕೆ ಬಂದಾಗ ಅವರ ವಿರುದ್ಧ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳಬೇಕು ಎಂದು ಹೇಳಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ —ಸಮಯಕ್ಕೆ ಸರಿಯಾಗಿ ಕ್ರಮ ತೆಗೆದುಕೊಂಡಿದ್ದರೆ ಇದಕ್ಕೆ ಅವಕಾಶ ಇರುತ್ತಾ ಇರಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.— ತಪ್ಪಾಗಿದೆ ಎಂದು ನಾನೇ ಹೇಳಿದ್ದೇನೆ.

SRI M. MALLIKARJUNA KHARGE.—To break this monopoly, why should you not go in for hobli-wise or shop-wise auction ಇದರಲ್ಲಿ ಕೆಲವೇ ಜನ ಒಂದು ರಿಂಗ್ ಮಾಡಿಕೊಂಡಿರುತ್ತಾರೆ. ಆಕ್ಷನ್‌ನಲ್ಲಿ ಹೋಗಿ ದುಡ್ಡು ಕಲೆಕ್ಟ್ ಮಾಡಿ...

ಶ್ರೀ ರಾಮಕೃಷ್ಣ ಹೆಗಡೆ.— ಎಕ್ಸೈಸ್ ಡಿಪಾರ್ಟ್‌ಮೆಂಟ್ ಡಿಮಾಂಡ್ ಬಂದಾಗ ಈ ಸೂಚನೆಯನ್ನು ಮಾಡಿ. ಸಂಬಂಧಪಟ್ಟ ಮಂತ್ರಿಗಳು ಇದನ್ನು ಗಮನಿಸುತ್ತಾರೆ, ಇದರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ವಕೀಲರು ತಪ್ಪು ಮಾಡಿದ್ದಾರೆ ಎಂದು ಹೇಳಿದ್ದೀರಿ. ಸರ್ಕಾರದಿಂದ ರೂಲ್ಸ್ ಮಾಡಿರುವುದನ್ನು ಕೋರ್ಟ್ ಗಮನಕ್ಕೆ ತಂದು ಸ್ಟೇ ವೆಕೇಟ್ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದರೆ ಆ ಕರೆಸ್ಪಾಂಡೆನ್ಸನ್ನು ದಯಮಾಡಿ ಸದನದ ಮುಂದೆ ಇಡಿ. ಆಗ ನಿಮ್ಮ ರಿಪ್ಲೈ ಕನ್‌ವಿನ್ಸ್ ಆಗುತ್ತದೆ. ಇಲ್ಲದಿದ್ದರೆ ವಕೀಲರ ಮೇಲೆ ತಪ್ಪು ಹಾಕಿ ಸರ್ಕಾರ ತಪ್ಪಿಸಿ ಕೊಂಡಹಾಗಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.— ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಈ ಬಗ್ಗೆ ವರದಿ ಕೊಟ್ಟಿದ್ದಾರೆ. ಎಕ್ಸೈಜ್ ಡಿಪಾರ್ಟ್‌ಮೆಂಟ್‌ನವರು ಅದಕ್ಕೆ ಉತ್ತರ ಕೊಡುತ್ತಾರೆ ಆಗ ಯಾರು ಜವಾಬ್ದಾರರು, ಏನು ಕ್ರಮ ತೆಗೆದುಕೊಂಡಿದೆ ಎಂಬುದು ಗೊತ್ತಾಗುತ್ತದೆ. ಈಗ ತಡೆಯಾಜ್ಞೆ ಬಂದ ನಂತರವೂ ೧೬೨.೩೪ ಕೋಟಿ ರೂಪಾಯಿಗಳನ್ನು ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಅಂದರೆ ೬ ತಿಂಗಳಲ್ಲಿ ೧೬.೭ ಕೋಟಿ ರೂಪಾಯಿಗಳಲ್ಲಿ ಸುಮಾರು ೩೦ ಕೋಟಿ ರೂಪಾಯಿಗಳಷ್ಟು ವಸೂಲಾಗಿದೆ. The arrears stood at Rs. 162 34 crores as on 31-3-1987. ೯೩ ಕೋಟಿ ರೂಪಾಯಿಗಳಲ್ಲಿ ಕೋರ್ಟಿನಿಂದ ಸ್ಟೇ ಆರ್ಡರ್ ಕೊಟ್ಟ ಮುಖಾಂತರವಾಗಿ ಬಾಕಿ ಉಳಿದಿದೆ. ೧೩ ಕೋಟಿ ರೂಪಾಯಿಗಳಲ್ಲಿ ಡಿಕ್ರಿಯಾದ ೫ ಕೋಟಿಯನ್ನು ಕೋರ್ಟಿನ ಮುಖಾಂತರ ವಸೂಲು ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಆ ಮೇಲೆ ೨೮ ಕೋಟಿ ರೂಪಾಯಿಗಳ ವಿಚಾರದಲ್ಲಿ ಅದು ಬೇರೆ ಬೇರೆ ಹಂತದಲ್ಲಿದ್ದು ಆ ಬಗ್ಗೆ ಆಕ್ಷನ್ ತೆಗೆದುಕೊಳ್ಳಲಾಗುತ್ತಿದೆ.

ನಂತರ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು. ರೀಜನಲ್ ಇಂಬ್ಯಾಲೆನ್ಸ್ ವಿಚಾರದಲ್ಲಿ ಇಲ್ಲಿ ಪ್ರಸ್ತಾಪ ಮಾಡಿದರು. ನಾನು ಅದನ್ನು ಒಪ್ಪುತ್ತೇನೆ. ಅಭಿವೃದ್ಧಿಯ ಕ್ಷೇತ್ರದಲ್ಲಿ ಯಾವುದೇ ಒಂದು ಪ್ರದೇಶಕ್ಕೆ ಅನ್ಯಾಯವಾಗದ ರೀತಿಯಲ್ಲಿ ನಮ್ಮ ನೀತಿ ಇರಬೇಕು. ಅದರಲ್ಲೂ ಒಂದು ರಾಜ್ಯದಲ್ಲಿ ಯಾವುದೇ ಪ್ರದೇಶದಲ್ಲಿ ಅಭಿವೃದ್ಧಿಯ ಮಟ್ಟ ಕಡಿಮೆಯಾಗದಂತೆ ಬೇರೆ ಬೇರೆ ಕಾರಣಗಳು ಇರಬಹುದು. ಐತಿಹಾಸಿಕ ಕಾರಣಗಳು ಇರಬಹುದು. ಆ ಪ್ರದೇಶಕ್ಕೆ ಹೆಚ್ಚು ಗಮನ ಕೊಡತಕ್ಕಂಥದ್ದು ಕೂಡ ಸರ್ಕಾರದ ಕರ್ತವ್ಯವೆಂದು ಹೇಳುವುದನ್ನು ನಾನು ಒಪ್ಪುತ್ತೇನೆ. ಆದರೆ ಈಗ ಕಳೆದ ೫ ವರ್ಷಗಳ ಅವಧಿಯಲ್ಲಿ ಅದರಲ್ಲೂ ಮುಖ್ಯವಾಗಿ ಅಧಿಕಾರ ವಿಕೇಂದ್ರೀಕರಣದ ಆಡಳಿತವನ್ನು ಜಾರಿಗೆ ತಂದ ಮೇಲೆ ನಾನು ಅತ್ಯಂತ ಸಂತೋಷದಿಂದ ಹೇಳುವುದಕ್ಕೆ ಬಯಸುತ್ತೇನೆ. ಹೈದರಾಬಾದ್ ಕರ್ನಾಟಕಕ್ಕೆ ಯಾವುದೇ ರೀತಿಯ ಅನ್ಯಾಯ ಆಗಿಲ್ಲ ಎಂದು ನಾನು ಅಂಕಿ ಸಂಖ್ಯೆಗಳ ಆಧಾರದ ಮೇಲೆ ಹೇಳಬಲ್ಲೆ. ಈಗ ದೊಡ್ಡ ದೊಡ್ಡ ಕೆಲಸಗಳನ್ನು ನಾವು ಮಾಡಿರುವಂತಹದ್ದು ಮಾನ್ಯ ಸದಸ್ಯರಿಗೆ ಗೊತ್ತುಂಟು. ರಾಯಚೂರಿನಲ್ಲಿ ಒಂದು ವ್ಯವಸಾಯಕ್ಕೆ ಸಂಬಂಧಪಟ್ಟ ಕಾಲೇಜನ್ನು ಮಾಡಿದ್ದೇವೆ. ಬೀದರ್‌ನಲ್ಲಿ ವೆಟರ್‌ನರಿ ಕಾಲೇಜೊಂದನ್ನು ಮಾಡಿದ್ದೇವೆ. ರಾಯಚೂರಿನಲ್ಲಿರತಕ್ಕ ಥರ್ಮಲ್ ಯೋಜನೆ ಏನು ಇದೆ ಅದರ ೩ನೇ ಘಟಕ ಇನ್ನು ಸ್ವಲ್ಪ ದಿವಸದಲ್ಲೇ ಕಮಿಷನ್ ಆಗುತ್ತದೆ. ಕಳೆದ ತಿಂಗಳಿನಲ್ಲಿ ೪ನೇ ಘಟಕಕ್ಕೂ ಕೂಡ ಕೇಂದ್ರ ಸರ್ಕಾರದ ಮಂಜೂರಾತಿಯನ್ನು ಮಾಡಿಸಿಕೊಂಡಿದ್ದೇವೆ. ಅವರಿಂದ ಕ್ಲಿಯರೆನ್ಸ್ ಬಂದಿದೆ. ಮತ್ತು ನಮ್ಮ ವಿಚಾರ ೫ ಮತ್ತು ೬ನೇ ಘಟಕವನ್ನು ಕೂಡ ಅಲ್ಲಿ ಆಗಬೇಕೆಂದು ಮಾಡಿದ್ದೇವೆ. ಅಲ್ಲಿ ಒಟ್ಟು ೬ ಘಟಕಗಳೂ ಆದ ಮೇಲೆ ಅದು ಸೂಪರ್ ಥರ್ಮಲ್ ಸ್ಟೇಷನ್ ಆಗುತ್ತದೆ, ಅದಕ್ಕೆ ಬೇಕಾದ ಯಾವ್ಯಾವ ಮುಂಜಾಗ್ರತ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಈಗಾಗಲೇ ತೆಗೆದುಕೊಂಡಿದ್ದೇವೆ.

ಶ್ರೀ ವೀರಯ್ಯ ಸ್ವಾಮಿ.—ಅಲ್ಲಿ ಅಭಿವೃದ್ಧಿಯ ಕಾರ್ಯಗಳು ಆಗಿಯೇ ಇಲ್ಲ. ಅಲ್ಲಿ ರೋಡ್ಸ್‌ಗಳೇ ಆಗಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—೨೨-೩ ೧೯೮೩ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೆಂದರೆ.—

On 22-3-1983- you made a statement on the floor of this House? You said that Development Boards would be set up in all the four

Divisions in the State to monitor overall Development of the Region" "The Chief Minister was replying to a matter raised by former Municipal Administration Minister Sri Dharam Singh and four other Congress-I members regarding Hyderabad Karnataka Development Board."

೧೨-೩೦ ಪಿ. ಎಂ.

ತಾವು ಇದಕ್ಕೆ ಏನು ಹೇಳುತ್ತೀರಿ ?

ಶ್ರೀ ಧರ್ಮಸಿಂಗ್.—ಹೋದಸಾರಿ ಅರ್ಧ ಗಂಟೆ ಚರ್ಚೆಯಲ್ಲಿ ಈ ವಿಷಯವನ್ನು ಎತ್ತಿದಾಗ ಡೆವಲಪ್‌ಮೆಂಟ್ ಬೋರ್ಡ್ ಮಾಡುತ್ತೇವೆಂದು ಇದೇ ಸದನದಲ್ಲಿ ಹೇಳಿದ್ದೀರಿ. ಇದು ಆದಮೇಲೆ ಆಗಸ್ಟ್‌ನಲ್ಲಿ ಮತ್ತು ಗುಲ್ಬರ್ಗದಲ್ಲಿ ಅಲ್ಲಿನ ಎಲ್ಲಾ ಶಾಸಕರು ತಮ್ಮನ್ನು ಭೇಟಿ ಮಾಡಿ ಕೇಳಿಕೊಂಡಿದ್ದೇವೆ. Because of this reason special administrative agency ಆಗಲಿ, on top priority ಬೇಕೆಂದು ನಾವು ಹೇಳಿದ್ದೇವೆ. ಈಗ ಅಂಕಿ ಅಂಶಗಳ ಆಧಾರದ ಮೇಲೆ ಹೇಳುತ್ತಿದ್ದೇನೆ. ಈ ಸಲ ಬಡ್ಜೆಟ್ ಮೇಲೆ ಮಾತನಾಡುವುದಕ್ಕೆ ನಮಗೆ ಅವಕಾಶ ಸಿಗಲಿಲ್ಲ. ಸ್ಪೆಷಲ್ಲಾಗಿ ಇದರ ಬಗ್ಗೆ ತಾವು ಚರ್ಚೆಯನ್ನು ಇಡಿ. ಈ ಬಗ್ಗೆ ೧೯೫೪ರ ಫ್ಯಾಕ್ಟ್ ಫೈಂಡಿಂಗ್ ರಿಪೋರ್ಟ್ ಇದೆ. On that basis also we have to say. ಅಲ್ಲಿ communication ಏನಿದೆ, agriculture ಏನಿದೆ, per capita income ಏನಿದೆ ಇದನ್ನೆಲ್ಲಾ ತೆಗೆದುಕೊಂಡು in 1980 the then Government have taken a decision ಆಗ ಮಾನ್ಯ ವೀರಪ್ಪ ಮೊಯಿಲಿಯವರು ಹಣಕಾಸಿನ ಮಂತ್ರಿಗಳಾಗಿದ್ದರು. ಗುಲ್ಬರ್ಗ, ರಾಯಚೂರು, ಬೀದರ್‌ಗೆ ವಿಶೇಷವಾಗಿ ಡೆವಲಪ್‌ಮೆಂಟ್ ಬೋರ್ಡ್ ಆಗಬೇಕೆಂದು ಆಗ ನಿರ್ಣಯವನ್ನು ನಾವು ತೆಗೆದುಕೊಂಡಿದ್ದೆವು ಇವತ್ತು ಮೂರು ಕಾಲೇಜುಗಳು ಬಂದಿರುವುದು ಅದು ಬೇರೆ ವಿಷಯ. ೧೯೫೪ರ ಫ್ಯಾಕ್ಟ್ ಫೈಂಡಿಂಗ್ ರಿಪೋರ್ಟ್ ಪ್ರಕಾರ ಆ ಭಾಗಕ್ಕೆ ಸರ್ಕಾರ ಏನೇನು ವಿಶೇಷ ಆದ್ಯತೆಗಳನ್ನು ಕೊಡಬೇಕಾಗಿದೆ ಅದರ ಬಗ್ಗೆ ಅಂಕಿ ಸಂಖ್ಯೆಗಳನ್ನು ಇಟ್ಟುಕೊಂಡು ಇಲ್ಲಿ ಪ್ರಸ್ತಾಪ ಮಾಡಿ ಶಾಸಕರ ಅಭಿಪ್ರಾಯಗಳನ್ನು ತೆಗೆದುಕೊಂಡು ಈ ಸದನದಲ್ಲಿ ಹೇಳಿದರೆ ಒಳ್ಳೆಯದು ಆಗಬಹುದೆಂದು ನಾನು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಡೆ.—ಮಾನ್ಯ ಅಧ್ಯಕ್ಷರೇ, ಈ ವಿಚಾರದ ಬಗ್ಗೆ ಹಿಂದೆಯೂ ಕೂಡಾ ಎರಡು ಮೂರು ಸಲ ಇಲ್ಲಿ ಮಾನ್ಯ ಧರ್ಮಸಿಂಗ್ ಅವರು ಪ್ರಸ್ತಾಪ ಮಾಡಿದ್ದರು. ಹಾಗೂ ಇನ್ನೂ ಕೆಲವು ಸದಸ್ಯರು ಪ್ರಸ್ತಾಪ ಮಾಡಿದ್ದರು. ಮಾನ್ಯ ಧರ್ಮಸಿಂಗ್ ಅವರು ಮಂತ್ರಿಗಳಾಗಿದ್ದ ಕಾಲದಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ ಸಂಬಂಧಪಟ್ಟ ಒಂದು ಮಂಡಲಿಯನ್ನು ಸ್ಥಾಪನೆ ಮಾಡುತ್ತೇವೆಂದು ಹೇಳಿದ್ದುದು ನಿಜ. ಆದರೆ ಅದಕ್ಕೆ ಒಂದು ಕಾಸೂ ದುಡ್ಡನ್ನು ತಾವು ತೆಗೆದಿಡಲಿಲ್ಲ. ಆ ಬಗ್ಗೆ ಅವರು ಘೋಷಣೆ ಮಾಡಿರುವುದು ನಿಜ.

SRI DHARMASINGH.—We have provided money. ನಾವು ಕೊಟ್ಟಿದ್ದೇವೆ. ಈ ಬಗ್ಗೆ ಸರ್ಕಾರ ಹೊರಡಿಸಿರುವ ಸುತ್ತೋಲೆಗಳನ್ನು ತಾವು ನೋಡಬಹುದು. ಕ್ಯಾಬಿನೆಟ್ ತೀರ್ಮಾನವನ್ನು ತಾವು ನೋಡಬಹುದು. ೧೯೮೨ ರಲ್ಲಿ we have made the budget provision. ಇದರ ಬಗ್ಗೆ ವಿಚಾರ ಆಗಬೇಕಾಗಿದೆ.

ಶ್ರೀ ರಾಮಕೃಷ್ಣ ಹೆಗ್ಡೆ.—ಮಾನ್ಯ ಅಧ್ಯಕ್ಷರೇ, ಈ ಡಿಸ್ಟ್ರಿಕ್ಟ್ ಪ್ಲಾನ್ ಔಟ್‌ಲೇ ಬಗ್ಗೆ...

ಶ್ರೀ ಬಿ. ಬಸವಲಿಂಗಪ್ಪ.—ಡೆವಲಪ್‌ಮೆಂಟ್ ಬೋರ್ಡ್ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ರಾಮಕೃಷ್ಣ ಹೆಗ್ಡೆ.—ಡೆವಲಪ್‌ಮೆಂಟ್ ಬೋರ್ಡ್ ವಿಚಾರದಲ್ಲಿ ಒಂದು ಸಲ ಅಲ್ಲ, ಎರಡು ಸಲ ಅಲ್ಲ, ಮೂರು ಸಲ ಹೇಳಿದ್ದೇನೆ. ಇದರ ಬಗ್ಗೆ ನಮ್ಮ ನಿಲುವು ಏನೂ ಬದಲಾವಣೆ ಇಲ್ಲ.

ಶ್ರೀ ಧರ್ಮಸಿಂಗ್.—೬ನೇ ಯೋಜನೆಯಲ್ಲಿ ಸ್ಟೇಟ್ ಗೌರ್ನ್‌ಮೆಂಟ್‌ಗೆ Regional imbalance ಹೋಗಲಾಡಿಸಬೇಕೆಂದು ಇದೆ. ಡೈರೆಕ್ಷನ್ ಇದೆ.

ಶ್ರೀ ರಾಮಕೃಷ್ಣ ಹೆಗ್ಡೆ.—ಒಂದೇ ಒಂದು ಅಂಶವನ್ನು ಈ ಸಭೆಯ ಮುಂದೆ ನಾನು ಹೇಳಿದರೆ ಮಾನ್ಯ ಸದಸ್ಯರ ಮನಸ್ಸಿನಲ್ಲಿ ಇರತಕ್ಕ ಆತಂಕ ಏನಿದೆ ಅದು ಮಾಯ ಆಗಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಈಗ ನಾವು ಎಲ್ಲಾ ಜಿಲ್ಲೆಗಳಿಗೂ ಡಿಸ್ಟ್ರಿಕ್ಟ್ ಪ್ಲಾನ್ ಔಟ್‌ಲೇ ನಾವು ಕೊಟ್ಟಿರತಕ್ಕದ್ದು ಎಷ್ಟು ಎಂಬುದನ್ನು ನೋಡಿ ೧೯೮೩–೮೪ ರಲ್ಲಿ ೨೦೦ ಕೋಟಿ ರೂಪಾಯಿಗಳು ಡಿಸ್ಟ್ರಿಕ್ಟ್ ಪ್ಲಾನ್‌ಗೆ ಸಂಬಂಧಪಟ್ಟಿದ್ದು. ಇದರಲ್ಲಿ ೨೮ ಕೋಟಿ ರೂಪಾಯಿಗಳನ್ನು ಹೈದರಾಬಾದ್ ಕರ್ನಾಟಕ ರೀಜನ್‌ಗೆ ನಾವು ಕೊಟ್ಟಿದ್ದೇವೆ. ಎಂದರೆ ೧೯.೩೧ ಪರ್ಸೆಂಟ್ ನಾವು ಕೊಟ್ಟಿದ್ದೇವೆ. ಅಲ್ಲಿಯ ಜನಸಂಖ್ಯೆ ಎಷ್ಟು ಎಂದರೆ ೧೭.೧೦ ಪರ್ಸೆಂಟ್. ಎಂದರೆ ಒಟ್ಟು ಭಾಗದ ಜನಸಂಖ್ಯೆ ಏನು ಇದೆಯೋ ಆ ಜನಸಂಖ್ಯೆ ದಾಮಾಷಾ ಪ್ರಮಾಣಕ್ಕಿಂತಲೂ ಹೆಚ್ಚಿನ ರೀತಿಯಲ್ಲಿ ನಾವು ಜಿಲ್ಲಾ ಯೋಜನೆ ಕೆಳಗೆ ಹಣವನ್ನು ಕೊಡುತ್ತಿದ್ದೇವೆ. ಕಳೆದ ವರ್ಷ ೧೯೮೭–೮೮ ರಲ್ಲಿ ೬೮ ಕೋಟಿ ರೂಪಾಯಿ ಕೊಟ್ಟಿದ್ದರೆ ಈ ವರ್ಷ ೮೦ ಕೋಟಿ ರೂಪಾಯಿಗಳನ್ನು ನಾವು ಕೊಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪದೇ ಪದೇ ಪ್ಲಾನ್ ಔಟ್‌ಲೇ ಓದುತ್ತಿದ್ದೀರಿ, ಎಷ್ಟು ರೋಡ್‌ಗಳನ್ನು ಕೊಟ್ಟಿದ್ದೀರಿ ? ಎಷ್ಟು ಬ್ರಿಡ್ಜ್‌ಗಳನ್ನು ಕೊಟ್ಟಿದ್ದೀರಿ ? ಬೀದರ್‌ನಿಂದ ಹಿರಿಯೂರಿಗೆ ಬರುವುದಕ್ಕೆ ರಸ್ತೆಯಿಲ್ಲ. ನಾವು ಶಾಸಕರುಗಳೆಲ್ಲಾ ರಿಕ್ವೆಸ್ಟ್ ಮಾಡಿಕೊಂಡಿದ್ದೇವೆ. ನ್ಯಾಷನಲ್ ಹೈವೇಯನ್ನು ಬೀದರ್‌ನಿಂದ ಹಿರಿಯೂರುವರೆಗೆ ಮಾಡಿ ಕೊಡಿಯೆಂದು ಕೇಳಿದ್ದೇವೆ.

ಶ್ರೀ ರಾಮಕೃಷ್ಣ ಹೆಗಡೆ.—ಆ ಬಗ್ಗೆ ಡಿಮ್ಯಾಂಡ್ ಬಂದಾಗ ಚರ್ಚೆ ಮಾಡಿ.

ಶ್ರೀ ಧರ್ಮಸಿಂಗ್.—ರೀಜನಲ್ ಇಂಬ್ಯಾಲೆನ್ಸ್ ಸರಿಯಾಗಿ ಇರಬೇಕು. ಆ ಬಗ್ಗೆ ಹಣವನ್ನು ನಿಮ್ಮ ಮನಸ್ಸಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ಕೊಡಿ. ಕೂಲಂಕುಷವಾಗಿ ವಿಚಾರಮಾಡಿ. ಹೈದರಾಬಾದ್ ಕರ್ನಾಟಕಕ್ಕೆ ಹೆಚ್ಚು ಹಣವನ್ನು ಕೊಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಇನ್ನೊಂದು ಅಂಕಿಅಂಶಗಳನ್ನು ನಾನು ಇಲ್ಲಿಟ್ಟರೆ ಮಾನ್ಯ ಸದಸ್ಯರಿಗೆ ಇಲ್ಲಿಯವರೆಗೆ ಆದದ್ದಕ್ಕಿಂತಲೂ ಹೆಚ್ಚು ಭರವಸೆ ಆಗಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಈಗ ಗ್ರೋತ್ ರೇಟ್ ತೆಗೆದುಕೊಳ್ಳಿ, ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಗ್ರೋತ್‌ರೇಟ್ ೨೨ ಪರ್ಸೆಂಟ್ ಇದ್ದರೆ ಇಡೀ ರಾಜ್ಯ ಒಂದಕ್ಕೆ ತೆಗೆದುಕೊಂಡರೆ ಕೇವಲ ೮ ಪರ್ಸೆಂಟ್.

ಶ್ರೀ ಧರ್ಮಸಿಂಗ್.—ಯಾವ ಗ್ರೋತ್‌ರೇಟ್ ?

ಶ್ರೀ ರಾಮಕೃಷ್ಣ ಹೆಗಡೆ.—ಎಲ್ಲಾ ಗ್ರೋತ್‌ರೇಟ್ ಕಳೆದ ೫ ವರ್ಷದಲ್ಲಿ ಸರ್ಕಾರದ ಬೇರೆ ಬೇರೆ ಭಾಗಗಳಲ್ಲಿ ಸರ್ಕಾರದ ಮೇಲೆ ಬಿದ್ದ ಖರ್ಚಿನ ಭಾರ ಎಷ್ಟು ಎನ್ನುವ ಬಗ್ಗೆ ತಮಗೆ ಸ್ವಲ್ಪ ಐಡಿಯಾ ಕೊಡುವುದು ಒಳ್ಳೆಯದು. ೧೯೮೨–೮೩ ರಲ್ಲಿ ಪೋಲೀಸ್ ಇಲಾಖೆಗೆ ೫೨ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದರೆ ೧೯೮೭–೮೮ ರಲ್ಲಿ ಅದು ೧೧೧ ಕೋಟಿ ಖರ್ಚಾಗಿದೆ. ಅಂದರೆ ಎರಡಕ್ಕಿಂತ ಹೆಚ್ಚಾಯಿತು. ಪೆನ್‌ಷನ್‌ಗೆ ನಾವು ಆಗ ೭೦ ಕೋಟಿ ಖರ್ಚು ಮಾಡುತ್ತಿದ್ದರೆ ಕಳೆದ ವರ್ಷ ೧೩೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವಂತಹ ಪ್ರಸಂಗ ಬಂತು. ಶಿಕ್ಷಣಕ್ಕೆ ೧೯೮೨–೮೩ ರಲ್ಲಿ ೨೨೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ಕಳೆದ ವರ್ಷ ೫೦೫ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಖರ್ಚನ್ನು ನಾವು ಮಾಡಿದ್ದೇವೆ. ಪಬ್ಲಿಕ್ ಹೆಲ್ತಿಗೆ ೧೯೮೨–೮೩ರಲ್ಲಿ ೬೯ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ೧೯೮೭–೮೮ರಲ್ಲಿ ೧೩೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅದೇರೀತಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ೧೯೮೨–೮೩ರಲ್ಲಿ ೫೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ ೧೯೮೭–೮೮ರಲ್ಲಿ ೧೫೩ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಮೇಂಟೇನೆನ್ಸ್ ಆಫ್ ರೋಡ್ಸ್ ಅಂಡ್ ಬ್ರಿಡ್ಜಸ್‌ಗೆ ೨೯ ಕೋಟಿ ರೂಪಾಯಿಗಳು ಮೊದಲು ಇದ್ದರೆ ಈಗ ನಾವು ೫೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ.

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಅನೇಕ ಬಾಬುಗಳಲ್ಲಿ ನಮ್ಮ ರಾಜ್ಯದ ರೈತರಿಗೆ ಅನೇಕ ರೀತಿಯ ರಿಯಾಯಿತಿಗಳನ್ನು ಕನ್ಸೆಷನ್‌ಗಳನ್ನು ಕೊಡುತ್ತಾ ಬಂದಿದ್ದೇವೆ. ಮಾನ್ಯ ಸದಸ್ಯರುಗಳಿಗೆ ಈ ವಿಚಾರ ಗೊತ್ತಿರಬಹುದು ಫೇಲ್ಡ್ ವೆಲ್‌ಗಳಿಗೆ ಸಬ್ಸಿಡಿ ಬಾಕಿ ಇರತಕ್ಕದ್ದು, ಸಾಲಗಳ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಸಬ್ಸಿಡಿಗಳನ್ನು ಈ ರೀತಿ ಅನೇಕ ಬಾಬುಗಳಲ್ಲಿ ರಿಯಾಯಿತಿಯನ್ನು ಕೊಟ್ಟಿದ್ದೇವೆ.

ಈಗ ಕೆಲವು ದಿವಸಗಳ ಹಿಂದೆ, ಕಳೆದ ಐದು ವರ್ಷದಲ್ಲಿ ನಮ್ಮ ರಾಜ್ಯದಲ್ಲಿ ಸತತವಾಗಿ ಬಂದಂಥ ಬರಗಾಲವನ್ನು ಅನುಲಕ್ಷಿಸಿ ಅನೇಕ ರೈತರಿಗೆ ಸಾಲ ತೆಗೆದುಕೊಂಡಿದ್ದನ್ನು ವಾಪಸ್ಸು ಕೊಡತಕ್ಕದ್ದು ಸಾಧ್ಯವಾಗಲಾರದು ಎಂದು ಪುನಃ ಒಂದಾವರ್ತಿ ಅವರು ಕೊಡಬೇಕಾದಂಥ ಬಡ್ಡಿ ಮತ್ತು ಚಕ್ರಬಡ್ಡಿ ಏನಿದೆ ಅದನ್ನು ಸರ್ಕಾರವೇ ಕೊಡಬೇಕೆನ್ನುವ ತೀರ್ಮಾನವನ್ನು ನಾವು ಮಾಡಿದ್ದೇವೆ. ಇದು ಮಾನ್ಯ ಸದಸ್ಯರಿಗೆ ಗೊತ್ತುಂಟು. ಈ ತಿಂಗಳ ಒಳಗೆ ಯಾರು ಅಸಲನ್ನು ಕೊಡುತ್ತಾರೆ ಅವರಿಗೆ ಈ ರಿಯಾಯಿತಿ ಸಿಗುತ್ತದೆ ಎಂದು ನಾವು ಘೋಷಣೆಯನ್ನು ಮಾಡಿದ್ದೆವು. ಈ ಘೋಷಣೆ ಮಾಡುವುದು ಸ್ವಲ್ಪ ತಡವಾಯಿತು. ಮತ್ತು ರಬಿ ಬೆಳೆ ಇನ್ನೂ ರೈತರ ಕೈಗೆ ಬಂದಿಲ್ಲ. ಆದ್ದರಿಂದ ಈ ಒಂದು ಉದ್ದೇಶದಿಂದ ಸರ್ಕಾರ ಏನು ರಿಯಾಯಿತಿ ಕೊಟ್ಟರೂ ಕೂಡ ಅದರ ಸಂಪೂರ್ಣ ಪ್ರಯೋಜನ ಎಲ್ಲಾ ರೈತರಿಗೆ ಸಿಗುವುದು ಸಾಧ್ಯವಿಲ್ಲ ಎನ್ನತಕ್ಕಂಥ ಒಂದು ಸೂಚನೆಯನ್ನು ನಮ್ಮ ಸದಸ್ಯರನೇಕರು ನಮ್ಮ ಹತ್ತಿರ ಮಾಡಿದರು, ರೈತಸಂಘದ ಪ್ರತಿನಿಧಿಗಳು ನನ್ನನ್ನು ಭೇಟಿಯಾಗಿ ಈ ವಿಚಾರವನ್ನು ಹೇಳಿದರು ಆದುದರಿಂದ ಅದನ್ನು ೩೧-೩-೧೯೮೮ಕ್ಕೆ ಗಡವುಯನ್ನು ಹಾಕಿದ್ದೆವು ಅದನ್ನು ಒಂದು ತಿಂಗಳ ನಂತರ ಅಂದರೆ ಏಪ್ರಿಲ್ ಕೊನೆಯವರೆಗೆ ಎಂದು ಈ ಒಂದು ಅವಕಾಶವನ್ನು ಕೊಡಬೇಕೆಂದು ತೀರ್ಮಾನವನ್ನು ನಾವು ಮಾಡಿದ್ದೇವೆ. ಈ ಸಂದರ್ಭದಲ್ಲಿ ಎಲ್ಲಾ ರೈತಬಾಂಧವರಿಗೆ ನನ್ನ ಅತ್ಯಂತ ಕಳಕಳಿಯ ಮನವಿ ಏನು ಎಂದರೆ ಪುನಃ ಪುನಃ ಈ ರೀತಿಯ ಮನವಿಗಳನ್ನು ಮಾಡದೆ ರೈತ ಬಾಂಧವರಿಗೆ ಇದರ ಪ್ರಯೋಜನವನ್ನು ಪಡೆಯುವಂತೆ ತಿಳಿಸಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ರಾಜ್ಯಪಾಲರ ಭಾಷಣದಲ್ಲಿಯೂ ಇದರ ಬಗ್ಗೆ ಅವರ ಬಾಯಿಯಿಂದ ಹೇಳಿಸಿದ್ದೀರಿ. ಅದಕ್ಕೆ ನೀವು ಸ್ಟಿಕ್‌ಆನ್ ಆಗಿರಿ. ತಾವು ಹೇಳಿದ ಮಾತಲ್ಲ ಅದು.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಪುನಃ ಪುನಃ ಈ ತರಹದ ಸವಲತ್ತನ್ನು ಕೊಡತಕ್ಕಂಥಾದ್ದು ಸಾಧ್ಯವಾಗುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಅವರು ಹೇಳಿದ್ದಾರೆ. ಸ್ವಾಮಿ, ಶಾಸಕರು ಯಾರೂ ಕೇಳಲಿಲ್ಲ ಅದಕ್ಕಿಂತ ಹಿಂದೆ ಹೇಗೆ ಹೋಗುತ್ತೀರಿ ?

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ ಸಾಧ್ಯವಾಗುವುದಿಲ್ಲ. ನಮಗೆ ರಿಸರ್ವ್‌ಬ್ಯಾಂಕ್, ನಬಾರ್ಡ್‌ನವರಿಂದ ಆದೇಶ ಇರುತ್ತದೆ. ಅನೇಕ ರೀತಿಯ ತೊಂದರೆಗಳು ಇರುತ್ತವೆ. ಆದರೂ ಕೂಡಾ ಇದನ್ನು ಮಾಡುತ್ತೇವೆ. ಎಷ್ಟು ಮಾಡುವುದಕ್ಕೆ ಸಾಧ್ಯವೋ ಅಷ್ಟು ಮಾಡುತ್ತೇವೆ. ಇದರ ಬಗ್ಗೆ ಆಗ್ರಹ ಮಾಡುವುದು ಅಗತ್ಯವಿಲ್ಲವೆಂದು ಹೇಳುತ್ತೇನೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ರಾಜ್ಯಪಾಲರ ಭಾಷಣದಲ್ಲಿ ಅವರು ಹೇಳಿಲ್ಲವೇನು ?

ಶ್ರೀ ರಾಮಕೃಷ್ಣ ಹೆಗಡೆ.—ಅದು ಮುದ್ರಾರಾಕ್ಷಸನಿಂದ ಆದದ್ದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇದು ಮಾನ್ಯ ರಾಜ್ಯಪಾಲರಿಗೆ ಅವಮಾನ ಮಾಡಿದ ಹಾಗೆ. ಹಾಗಾದರೆ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಏನೇನೋ ತಪ್ಪು ಬರೆಯಿಸಿ ಅವರಿಂದ ಓದಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆಯವರು......

ಅಧ್ಯಕ್ಷರು.—ನೀವು ಈ ರೀತಿ ಮಾತನಾಡಬೇಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮುದ್ರಾರಾಕ್ಷಸ ಎನ್ನುವಂಥ ಪದ ನಿಮ್ಮ ಬಾಯಿಯಿಂದ ಬರಬಾರದು.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಜೂನ್ ಮುಂಚಿತವಾಗಿ ಎಲ್ಲಾ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡಲಾಗುವುದು ಎಂದು ಹೇಳಿದ್ದಾರೆ. ದಯವಿಟ್ಟು ಹಾಗೆ ಆಜ್ಞೆಯನ್ನು ಹೊರಡಿಸಿ.

ಅಧ್ಯಕ್ಷರು.—ಶ್ರೀ ವೆಂಕಟರಾಮಯ್ಯನವರೇ ನೀವು ಏಕೆ ಅಡ್ಡ ಬರುವುದು ? ಕೋರ್ಟಿನಲ್ಲೂ ಹೀಗೆ ಮಾಡುತ್ತೀರೇನು ?

ಶ್ರೀ ರಾಮಕೃಷ್ಣ ಹೆಗಡೆ.—ನನ್ನ ಭಾಷಣ ಮುಗಿದಮೇಲೆ ತಾವು ಪ್ರಶ್ನೆ ಕೇಳಿ. ಈಗ ನಾನು ನಮ್ಮ ರಾಜ್ಯದ ರೈತರಿಗೆ ಪುನಃ ಕಳಕಳಿಯಿಂದ ಮನವಿಯನ್ನು ಈ ಮನೆಯ ಮುಖಾಂತರ ಮಾಡಲಿಕ್ಕೆ ಬಯಸುತ್ತೇನೆ. ಹೊಸ ನೀರಾವರಿ ಯೋಜನೆಗಳಿಗೆ ಹಣ ಒದಗಿಸಿದ್ದು, ನಾವು ಎಷ್ಟೇ ಪ್ರಯತ್ನ ಮಾಡಲಿ, ಎಲ್ಲಿಯವರೆಗೆ ನೀರಾವರಿಯ ಲಾಭವನ್ನು ಪಡೆದುಕೊಂಡಂಥ ರೈತರು ಸ್ವಲ್ಪಮಟ್ಟಿಗೆ ತ್ಯಾಗ ಮಾಡಲಿಕ್ಕೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ನಾವು ಬಯಸಿದಂಥ ರೀತಿಯಲ್ಲಿ ನೀರಾವರಿ ಕೆಲಸ ಮಾಡತಕ್ಕಂಥಾದ್ದು ಸಾಧ್ಯ ಆಗಲಿಕ್ಕಿಲ್ಲ ನಾವು ಬಯಸುವಂಥ ರೀತಿಯಲ್ಲಿ ನೀರಾವರಿ ಕೆಲಸ ಮಾಡತಕ್ಕಂತಾದ್ದು ಸಾಧ್ಯವಾಗಲಿಕ್ಕಿಲ್ಲ. ಮೊನ್ನೆತಾನೆ ಕೆಲವು ಕಡೆ ಕೆನಾಲ್ ಬ್ರೀಚ್ ಆಗಿ ದುಡ್ಡನ್ನು ಖರ್ಚು ಮಾಡಬೇಕಾಗಿದೆ. ಇದಕ್ಕೂ ಕೂಡ ಬೇರೆ ಕಡೆಯಿಂದ ತಂದು ಹಾಕುವುದಕ್ಕೆ ಸಾಧ್ಯವಿಲ್ಲ. ಎಲ್ಲೆಲ್ಲಿ ನೀರಾವರಿ ಲಾಭವನ್ನು ರೈತರು ಪಡೆದುಕೊಂಡಿದ್ದಾರೆ, ಅವರು ಉಪಯೋಗಿಸಿಕೊಂಡ ನೀರಿಗೆ ತೆರಿಗೆಯನ್ನು ಕೊಡಲೇಬೇಕಾಗುತ್ತದೆ. ಅದಕ್ಕಾಗಿ ನಾನು ಮತ್ತೊಂದು ಸಲ ಮನವಿ ಮಾಡಿ ಕೊಳ್ಳುತ್ತೇನೆ, ಈ ನೀರಾವರಿ ಕರ, ಬೇರೆ ರಾಜ್ಯಗಳ ಜೊತೆ ಹೋಲಿಸಿ ನೋಡಿದಾಗ ನಮ್ಮದು ಅತ್ಯಂತ ಕಡಿಮೆ ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ....

ಶ್ರೀ ಹೆಚ್. ಕೆ. ಪಾಟೀಲ್.—ನನಗೆ ತಮ್ಮ ಕಡೆಯಿಂದ ಒಂದು ಕ್ಲಾರಿಫಿಕೇಷನ್ ಬೇಕಾಗಿದೆ: ರೈತರ ಸಾಲದ ಬಡ್ಡಿ, ಚಕ್ರಬಡ್ಡಿ ವಿನಾಯಿತಿ ಏಪ್ರಿಲ್ ೩೦ರ ವರೆಗೆ ಎಂದು ಹೇಳಿದ್ದೀರಿ, ಯೋಗ್ಯವಾದುದು ಇದನ್ನು ನಾನು ಒಪ್ಪುತ್ತೇನೆ. ಆದರೆ ಮಾನ್ಯ ಸಹಕಾರ ಸಚಿವರಾದ ಏಕಾಂತಯ್ಯನವರು ಪತ್ರಿಕೆಯಲ್ಲಿ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಈ ಚಕ್ರಬಡ್ಡಿಯನ್ನು ಸೊಸೈಟಿಯವರು ಕೊಡಬೇಕೆಂದು ಹೇಳಿದ್ದಾರೆ, ಇವತ್ತು ಸೊಸೈಟಿಗಳವರ ಸ್ಥಿತಿ ಚೆನ್ನಾಗಿಲ್ಲ. ಆದುದರಿಂದ, ತಾವು ಸೊಸೈಟಿಗಳವರ ಸ್ಥಿತಿ ನೋಡಿಕೊಂಡು ತಮ್ಮ ನಿರ್ಧಾರ ಹೇಳಬೇಕು......

ಶ್ರೀ ಬಿ. ಬಸವಲಿಂಗಪ್ಪ.—ರೈತರ ಬಗ್ಗೆ ರಿಯಾಯಿತಿಗಳನ್ನು ಮಾಡಿದ್ದೇವೆಂದು ಹೇಳಿದ್ದೀರಿ. ಆದರೆ ರೈತರು ರಾಜಕೀಯ ಪಕ್ಷವನ್ನು ಮಾಡಿಕೊಂಡು, ತಾವು ಏನೂ ಮಾಡಿಲ್ಲವೆಂದು ಹೇಳುತ್ತಿದ್ದಾರೆ, ಇದರ ಬಗ್ಗೆ ತಮ್ಮ ಅಭಿಪ್ರಾಯ ಹೇಳಿ. ...

ಶ್ರೀ ಬಿ. ಎಸ್, ಯಡಿಯೂರಪ್ಪ.—ಈ ರೀತಿ ರೈತರಿಂದ ವಸೂಲ್ಮಾಡುವಂಥ ಸಮಯದಲ್ಲಿ, ಸೊಸೈಟಿಗಳವರು ಕೋರ್ಟಿಗೆ ಏನು ದುಡ್ಡು ಕಟ್ಟಿದ್ದಾರೆ, ಎಷ್ಟು ಖರ್ಚಾಗಿದೆ ಅದನ್ನೂ ಕೂಡ ರೈತರಿಂದಲೇ ವಸೂಲ್ಮಾಡುತ್ತಿದ್ದಾರೆ......

ಶ್ರೀ ರಾಮಕೃಷ್ಣ ಹೆಗಡೆ.—ಈ ವಿಚಾರವನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಬಿಡುತ್ತೇನೆ, ಅವರು ತೀರ್ಮಾನ ಮಾಡುತ್ತಾರೆ......

ಒಬ್ಬ ಮಾನ್ಯ ಸದಸ್ಯರು.—ಈ ರಿಯಾಯಿತಿಯನ್ನು ಕೃಷಿ ಕಾರ್ಮಿಕರಿಗೂ ಅಳವಡಿಸಿಕೊಂಡು ಬರಬೇಕು.

ಶ್ರೀ ಹೆಚ್. ಏಕಾಂತಯ್ಯ.—ಅಧ್ಯಕ್ಷರೇ, ನಾವು ರೈತರಿಂದ ಸುಸ್ತಿಬಡ್ಡಿಯನ್ನು ವಸೂಲ್ಮಾಡು ತ್ತಿಲ್ಲ. ರೈತರ ಬಡ್ಡಿ ಜೊತೆಗೆ ಕೇವಲ ದಾವಾ ಖರ್ಚನ್ನು ಮಾತ್ರ ವಸೂಲ್ಮಾಡಿದ್ದೇವೆ. ಬೇರೆ ಯಾವುದೇ ಖರ್ಚು ರೈತರಿಂದ ವಸೂಲ್ಮಾಡಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಸೊಸೈಟಿ ಬೈಲಾದಲ್ಲಿದೆ, ೨೫ ಪರ್ಸೆಂಟ್ ಹೆಚ್ಚಿಗೆ ವಸೂಲ್ಮಾಡು ತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳ ಬಾಯಿಂದ ಬಂದಮೇಲೆ ಅದು ಪೇಪರಿನಲ್ಲಿ ಬರುತ್ತದೆ, ಆದುದರಿಂದ, ಬೈಲಾದಲ್ಲಿರುವುದನ್ನು ತೆಗೆದುಹಾಕಬೇಕು. ಸಹಕಾರ ಸಂಘದಲ್ಲಿ ದಂಡದ ಬಡ್ಡಿ ತೆಗೆದು ಕೊಳ್ಳಬಾರದು......

ಶ್ರೀ ಹೆಚ್. ಏಕಾಂತಯ್ಯ.—ಈಗಾಗಲೇ ಸರ್ಕಾರದಿಂದ ಸೂಚನೆ ನೀಡಿದೆ. ಯಾವುದೇ ರೈತರಿಂದ ಸುಸ್ತಿಬಡ್ಡಿಯನ್ನು ವಸೂಲ್ಮಾಡಕೂಡದು ಎಂದು ಹೇಳಿದೆ....

ಶ್ರೀ ರಾಮಕೃಷ್ಣ ಹೆಗಡೆ.—ಈ ಕಾಂಗ್ರೆಸ್‌ನವರಿಗೂ, ರೈತರಿಗೂ ಏನು ಸಂಬಂಧ. ಪುನಃ ಪುನಃ ಇದೇ ಮಾತನ್ನು ಹೇಳುತ್ತಿದ್ದಾರೆ. ಮತ್ತೊಂದು ವಿಚಾರವನ್ನು ಈ ಸಭೆಯಲ್ಲಿ ಹೇಳುವುದಕ್ಕೆ

ನಾನು ಬಯಸುತ್ತೇನೆ. ನವಲಗುಂದ, ನರಗುಂದ ಸುತ್ತಮುತ್ತಲಿರುವ ಭಾಗದಲ್ಲಿ ಮಲಪ್ರಭಾ ಯೋಜನೆ ಕೆಳಗಡೆ ರೈತರ ಒಂದು ಬೇಡಿಕೆ ಇದೆ. ಅವರು ಹೇಳುತ್ತಾರೆ, ನೀರಾವರಿ ಕರವನ್ನು ಕೊಡುವುದಕ್ಕೆ ಸಿದ್ಧರಿದ್ದೇವೆ, ಆದರೆ ನೀರಾವರಿ ಕರದ ಮೇಲೆ, ಪೆನಾಲ್ಟಿ ಹಾಕಿದ್ದಾರೆ, ಇದನ್ನು ಮಾಫಿ ಮಾಡಿಲ್ಲ ಎಂದು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ಯಾವ ರೈತರ ನೀರಾವರಿ ಕರದ ಬಾಕಿಯನ್ನು ಕೊಡಬೇಕಾಗಿದೆಯೋ, ಅದನ್ನು ಜೂನ್ ೩೦ನೇ ತಾರೀಖಿನ ಒಳಗೆ ಅವರು ಕಟ್ಟಿದರೆ, ಅವರ ಮೇಲೆ ಇರತಕ್ಕಂಥ ಪೆನಾಲ್ಟಿಯನ್ನು ನಾವು ಮಾಫಿ ಮಾಡಲಿಕ್ಕೆ ಸಿದ್ಧರಿದ್ದೇವೆ ಎಂದು ಹೇಳುವುದಕ್ಕೆ ನಾನು ಬಯಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಇನ್ನು ಐದು ವರ್ಷ ಕನ್ಸೆಷನ್ ಕೊಡುತ್ತೇವೆ ಎಂದು ಒಪ್ಪಿಕೊಂಡಿದ್ದೀರಿ. ೫ ವರ್ಷ ಕನ್ಸೆಷನ್ ಕೊಡಿ, ಆಮೇಲೆ ನೀವು ವಸೂಲು ಮಾಡಿ ಸ್ವಾಮಿ.

ಶ್ರೀ ಎನ್. ಎಂ. ಅಡ್ಯಂತಾಯ.—ಮಾನ್ಯ ಮುಖ್ಯಮಂತ್ರಿಗಳ ರಿಪ್ಲೈ ಸಂದರ್ಭದಲ್ಲಿ ಈ ಮನೆಯ ಎಲ್ಲಾ ಸದಸ್ಯರು ಸ್ತಬ್ಧವಾಗಿ ಕುಳಿತುಕೊಂಡಿರುತ್ತಿದ್ದರು. ಸಂಪೂರ್ಣವಾದ ಅಟೆಂಡೆನ್ಸ್ ಇರುತ್ತಿತ್ತು. ಎಲ್ಲರೂ ಹಾಜರಾಗುತ್ತಿದ್ದರು. ಆದರೆ ಇವೊತ್ತಿನ ವಿಶಿಷ್ಟತೆ ಎಂದರೆ, ಆ ಭಾಗದ ಸದಸ್ಯರೆಲ್ಲರೂ ತಿರುಗಾಡುತ್ತಿದ್ದಾರೆ, ಮಾತನಾಡುತ್ತಿದ್ದಾರೆ.

ಅಧ್ಯಕ್ಷರು.—ನಿಮಗೇನು ಉತ್ತರ ಬೇಕಾಗಿಲ್ಲವೇ, ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎನ್. ಎಂ. ಅಡ್ಯಂತಾಯ.—ತಮ್ಮ ಪಕ್ಷದ ಸದಸ್ಯರೇ ಹೊರಗೆ ಹೋಗುತ್ತಿದ್ದಾರೆ ಮಾತನಾಡುತ್ತಿದ್ದಾರೆ, ಓಡಾಡುತ್ತಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ಪಕ್ಷದಲ್ಲಿ ಯಾವ ವಿಚಾರ ಚರ್ಚೆ ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಅವರು ವಿಚಾರ ಮಾಡುವುದು ಬೇಡ, ಆದರೆ ನಾನು ಮಾತನಾಡುವಾಗ ಯಾವಾಗಲೂ ಒಂದು ನಿಮಿಷವೂ ಅಲುಗಾಡದೇ ಕೊಡತಕ್ಕಂಥ ಮಾನ್ಯ ಬಂಗಾರಪ್ಪನವರು ಇವತ್ತು ಇಲ್ಲ, ಇದು ಏತಕ್ಕೆ?

ಒಬ್ಬ ಮಾನ್ಯ ಸದಸ್ಯರು.—ಅವರ ಡೆಲ್ಲಿಗೆ ಹೋಗಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕಾಗಿ ಕೃತಜ್ಞತೆಗಳು. ಕೊನೆಯಲ್ಲಿ ನಾನು ಒಂದು ಮಾತನ್ನು ಹೇಳಿ ನನ್ನ ಉತ್ತರವನ್ನು ಮುಗಿಸುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೇ, ಒಂದು ನಿಮಿಷ...

ಅಧ್ಯಕ್ಷರು, ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡುತ್ತೇನೆ, ಕುಳಿತುಕೊಳ್ಳಿರಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಖರ್ಗೆಯವರು, ಮತ್ತು ಮಾನ್ಯ ಕೆ.ಹೆಚ್. ಪಾಟೀಲರೂ ಒಂದು ಅನ್‌ಚಾರಿಟಬಲ್ ಟೀಕೆಯನ್ನು ಮಾಡಿರುತ್ತಾರೆ. ಇದರಿಂದ ನನಗೆ ಆಶ್ಚರ್ಯವಾಗುತ್ತಿದೆ. ನನ್ನ ಖಾತೆಯ ಅಂದರೆ ಫೈನಾನ್ಸ್ ಖಾತೆಯ ಕಮೀಷನರ್‌ರವರ ವಿಚಾರದಲ್ಲಿ ನನಗೆ ಅತ್ಯಂತ ಶಾಕ್ ಆದುದು ಏನು ಎಂದರೆ ಮಾನ್ಯ ಸದಸ್ಯರುಗಳು ಅವರ ಇಂಟೆಗ್ರಿಟಿ ಬಗ್ಗೆ ಕೊಶ್ಚನ್ ಮಾಡಿದ್ದಾರೆ ಇವತ್ತು ನಾನು ಹೇಳುತ್ತೇನೆ.

ಶ್ರೀ ಕೆ. ಹೆಚ್. ಪಾಟೀಲ್.—ನಾನು ಅವೊತ್ತೇ ಬಂದು ಹೇಳಿದೆ, ಏನು ಹೇಳಿದೆ ಎಂದರೆ, ನನ್ನ ಹತ್ತಿರ, ಎವಿಡೆನ್ಸ್ ಇದೆ ತಂದು ಕೊಡಿ ಎಂದರೆ ತಂದುಕೊಡುತ್ತೇನೆ. ಎಂದು ಹೇಳಿದೆ. ನಾನು ಏನು ಮಾಡಲಿ, ನಿಮ್ಮ ಮಂತ್ರಿಗಳೇ ಹೇಳಿದರು. ಎವಿಡೆನ್ಸ್ ಕೊಡಿ ಎಂದು I have got evidence ನಾನು ಅದನ್ನು ಬಹಿರಂಗಗೊಳಿಸಿಲ್ಲ. ನಾನು ಅನ್‌ಚಾರಿಟಬಲ್ ರಿಮಾರ್ಕ್ಸ್ ಏನೂ ಮಾಡಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಪ್ರತಿಯೊಬ್ಬ ಅಧಿಕಾರಿಗಳ ಇಂಟೆಗ್ರಿಟಿ ವಿಚಾರದಲ್ಲಿ ನಾನು ಸರ್ಟಿಫಿಕೇಟ್ ಕೊಡಲಾರೆ ನಮ್ಮ ಫೈನಾನ್ಸ್ ಕಮೀಷನರ್ ಏನಿದ್ದಾರೆ ಅವರು ಸ್ವಲ್ಪ ನಿಷ್ಠೂರರು ಇರಬಹುದು ಅವರ ಮಾತು ಬಹಳ ಕಠಿಣವಾಗಿ ಇರಬಹುದು, ಅದೂ ಒಂದೊಂದು ಸಲ, ಆದರೆ ಅವರ ಇಂಟೆಗ್ರಿಟಿ ವಿಚಾರದಲ್ಲಿ ನಿಷ್ಠೆಯ ವಿಚಾರದಲ್ಲಿ ಎಫಿಷಿಯೆನ್ಸಿ ವಿಚಾರದಲ್ಲಿ ಯಾರಾದರೂ ಏನಾದರೂ

ಒಂದು ಟೀಕೆ ಮಾಡಿದರೆ, ಪ್ರಶ್ನೆ ಎತ್ತಿದರೆ, ಅದು ಸಂಪೂರ್ಣವಾಗಿ ನಿರಾಧಾರವಾದುದು ಎಂದು ಹೇಳು ವುದಕ್ಕೆ ನಾನು ಬಯಸುತ್ತೇನೆ. ಅವರು ನಮ್ಮ ಅತ್ಯಂತ ದಕ್ಷ, ಪ್ರಾಮಾಣಿಕ ಆಡಳಿತಗಾರರಲ್ಲಿ, ಅಧಿಕಾರಿಗಳಲ್ಲಿ ಒಬ್ಬರು. ಏನಾದರೂ ಒಂದು ತಪ್ಪು ತಿಳುವಳಿಕೆಯಿಂದ ಏನಾದರೂ ಅವರ ಮೇಲೆ ಮಾನ್ಯ ಸದಸ್ಯರು ಆಪಾದನೆ ಮಾಡಿರಬಹುದು ಎಂದು ಹೇಳುತ್ತೇನೆ ಮತ್ತು ಯಾವ ವ್ಯಕ್ತಿ ಈ ಮನೆ ಯಲ್ಲಿ ಇಲ್ಲವೋ ತನ್ನ ಬಗ್ಗೆ ಮಾಡಲಾದಂಥ ಟೀಕೆಗೆ ಉತ್ತರ ಕೊಡುವ ಸ್ಥಿತಿಯಲ್ಲಿ ಇಲ್ಲವೋ, ಅಂತಹ ಮೂಕ ವ್ಯಕ್ತಿಗಳ ಬಗ್ಗೆ ಇಲ್ಲಿ ಅನ್‌ಚಾರಿಟಬಲ್ ರಿಮಾರ್ಕ್ಸ್ ಮಾಡತಕ್ಕದ್ದು ಸರಿಯಲ್ಲವೆಂದು ಹೇಳು ತ್ತೇನೆ, ಮಾನ್ಯ ಪಾಟೀಲರು ಎಲ್ಲಾ ಅನುಭವ ಇರತಕ್ಕಂಥವರು, ಸದಸ್ಯರಾಗಿ, ಮಂತ್ರಿಗಳಾಗಿ, ಧುರೀಣರಾಗಿ ಅನುಭವ ಇರತಕ್ಕಂಥ ಅವರ ಬಾಯಲ್ಲಿ ಈ ಮಾತು ಇನ್ನು ಮುಂದಾದರೂ ಬರಕೂಡದು ಎಂದು ಹೇಳುತ್ತೇನೆ. ಇಷ್ಟು ಹೇಳಿ ಈ ಸಾಮಾನ್ಯ ಚರ್ಚೆ ಮುಕ್ತಾಯಗೊಳ್ಳಲಿ ಎಂದು ಹೇಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಮಾನ್ಯ ಅಧ್ಯಕ್ಷರೇ, ನಾನು ಕೆಲವು ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. ಸಾಧನೆಗಳು ಯಾವ ಯಾವ ತರಹ ನಡೆದಿದೆ, ಆ ಸಾಧನೆಯನ್ನು ಯಾವ ರೀತಿ ಪರಿಗಣಿಸಿದ್ದಾರೆ ಎನ್ನುವ ಬಗ್ಗೆ ಈಗಾಗಲೇ ಹೇಳಿದರು. ಫಲಾನುಭವಿಗಳು ಯಾರಿದ್ದಾರೋ ಅವರಿಗೆ ಈ ಬಜೆಟ್‌ನಿಂದ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಹೇಳಿದರು. ಅನೇಕರು ಕೇಳಿದರು ಎಕ್ಸೈಜ್ ಡಿಪಾರ್ಟ್‌ಮೆಂಟ್ ಬಗ್ಗೆ ಎಷ್ಟು ಹಣ ಬಂತು ? ಎಷ್ಟು ಖರ್ಚು ಆಯಿತು ಎಂದು ಅದಕ್ಕೆ ಉತ್ತರ ಹೇಳುತ್ತಾ ಬಂದರು. ಇವತ್ತು ಎಕ್ಸೈಸ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳು ವುದಾದರೆ ಹಿಂದೆ ೭೫೦ ಬಾರ್‌ಗಳು ಇದ್ದಿದ್ದು ಈಗ ೭ ಸಾವಿರ ಬಾರ್‌ಗಳು ಆಗಿವೆ. ಇದರಲ್ಲಿರತಕ್ಕಂಥ ಫಲಾನುಭವಿಗಳು ಯಾರು ? ಇದರಿಂದ ಯಾರಿಗೆ ಪ್ರಯೋಜನ ? ಎಷ್ಟು ಅಂಗಡಿಗಳನ್ನು ತಾವು ತೆರೆದಿದ್ದೀರಿ ? ಇದನ್ನು ಒಂದು ದೊಡ್ಡ ಸಾಧನೆ ಎಂದು ತಾವು ಪರಿಗಣಿಸುತ್ತೀರಾ ? ಎರಡನೆಯ ದಾಗಿ ದುಡ್ಡು ಖರ್ಚು ಮಾಡುತ್ತಿದ್ದೇವೆಂದು ಹೇಳಿದಿರಿ, ಇದರಲ್ಲಿ ಫಿಜಿಕಲ್ ಅಚೀವ್‌ಮೆಂಟ್ ಎಷ್ಟಾಗಿದೆ ? ಇದರ ಮೌಲ್ಯ ಎಷ್ಟಾಗುತ್ತದೆ? ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು. ಆಮೇಲೆ ಇನ್ನೊಂದು ವಿಚಾರವೆಂದರೆ ನಮ್ಮ ಮಾನ್ಯ ಸದಸ್ಯರಾದಂಥ ಶ್ರೀ ರಮೇಶ್‌ಕುಮಾರ್‌ರವರು ಮಾತನಾಡುತ್ತಾ ಹೇಳಿದರು ''A member of Prime Minister's family was reported to be a CIA agent. ಎಂದು ಇದು ಕಡತದಲ್ಲಿ ಹೋಗಿದೆ. ದಯಮಾಡಿ ಅದನ್ನು ತೆಗೆಸಿ. ಅವರು ಆ ರೀತಿ ಮಾತನಾಡುವುದು ಸರಿಯೇ ? ಇಂಥವರು ಪ್ರಧಾನ ಮಂತ್ರಿಗಳ ಮನೆಯಿಂದ ಬಂದವರೆಂದು ಹೇಳಿಕೊಳ್ಳುವುದಕ್ಕೆ ಸಾಧ್ಯವಿದೆಯೇ ? ಅವರು ಮಾತನಾಡುವಾಗ ಮಂತ್ರಿಗಳು ಸಹ ಸುಮ್ಮನೆ ಇದ್ದರು. ಮಾನ್ಯ ಮಂತ್ರಿಗಳು ಸಹ ಆ ರೀತಿ ಮಾತನಾಡಬೇಡಿ ಎಂದು ಹೇಳಲಿಲ್ಲ...

ಶ್ರೀ ಜೆ. ಹೆಚ್. ಪಟೇಲ್.— ಮಾನ್ಯ ಸಭಾಧ್ಯಕ್ಷರೇ, ಕಡತದಿಂದ ಅದನ್ನು ತೆಗೆದು ಹಾಕು ವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ, ಆದರೆ ಮಾನ್ಯ ವೀರಪ್ಪಮೊಯಿಲಿಯವರು ಜೇಠ್‌ಮಲಾ ನಿಯವರನ್ನು ಸಿ. ಐ.ಎ ಏಜೆಂಟ್ ಎಂದು ಕರೆದರೆಂದು ಅವರು ಅದಕ್ಕೆ ಆ ಮಾತು ಹೇಳಬೇಕಾಯಿತು. ಅದಕ್ಕೆ ಆ ಎರಡು ವಿಷಯಗಳನ್ನು ಕಡತದಿಂದ ತೆಗೆಸಿ ಹಾಕಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಎರಡನ್ನು ಕಡತದಿಂದ ತೆಗೆಸಿ ಹಾಕಿ. ಇದು ಸರಿಯಲ್ಲ.

ಶ್ರೀ ರಾಮಕೃಷ್ಣ ಹೆಗಡೆ — ಮಾನ್ಯ ಅಧ್ಯಕ್ಷರೇ, ಮಾನ್ಯ ನಾಗರತ್ನಮ್ಮನವರಿಗೆ ಎಲ್ಲಾ ವಿಚಾರ ಗೊತ್ತಿದೆ. ಅವರು ಸುಮ್ಮ ಸುಮ್ಮನೆ ಕೇಳುತ್ತಾರೆ. ನೀವು ಹಣ ಖರ್ಚು ಮಾಡಿದ್ದೀರೆಂದು ಹೇಳುತ್ತೀರಿ ಆದರೆ ಫಿಜಿಕಲಿಯಾಗಿ ಏನು ಸಾಧನೆಯಾಗಿದೆ ಎಂದು ಕೇಳಿದರು. ಇವತ್ತು ಅನೇಕ ವಿಚಾರಗಳಲ್ಲಿ ಕರ್ನಾಟಕ ರಾಜ್ಯ ಇಡೀ ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. ಉದಾಹರಣೆಗೆ ಆಯಿಲ್ ಸೀಡ್ಸ್ ಪ್ರೊಡಕ್ಷನ್ ಅಭಿವೃದ್ಧಿ ಬಗ್ಗೆ, ಲಾಂಗ್ ಸ್ಟೇಪಲ್ ಕಾಟನ್ ಅನ್ನು ನಾವು ಸುಮಾರು ೬೦ ಪರ್ಸೆಂಟ್ ನಷ್ಟು ನಮ್ಮ ದೇಶದಲ್ಲಿ ಬೆಳೆಯುತ್ತೇವೆ ಕುಡಿಯುವ ನೀರಿನ ವಿಚಾರದಲ್ಲಿ ಮೊದಲನೆಯ ಸ್ಥಾನವನ್ನು ಪಡೆದಿದ್ದೇವೆ. ಅದೇ ರೀತಿಯಲ್ಲಿ ಸೋಷಿಯಲ್ ಅಫಾರ್‌ಸ್ಟೇಷನ ವಿಷಯದಲ್ಲಿ ಪ್ರಥಮ ಸ್ಥಾನದಲ್ಲಿ ದ್ದೇವೆ ನಮ್ಮ ಇದೇ ರಾಜ್ಯ ದೇಶದಲ್ಲಿಯೇ ಮಾದರಿಯಾಗಿದೆ. ಅದೇ ರೀತಿ ಡ್ರೈಲಾಂಡ್ ಡೆವಲಪ್ ಮೆಂಟ್ ಕಲ್ಟಿವೇಶನ್ ತೆಗೆದುಕೊಳ್ಳಿ, ವಾಟರ್ ಷೆಡ್ ಡೆವಲಪ್‌ಮೆಂಟ್ ಬಗ್ಗೆ ಆಗಲಿ ನಾವು ಬೇರೆ ರಾಜ್ಯಗಳಿಗೆ ಮಾದರಿ ಯಾಗಿದ್ದೇವೆ. ನಿಮ್ಮ ತಾಲ್ಲೂಕಿನಲ್ಲಿ ಮಾಡಿರುವುದನ್ನು ನೀವು ನೋಡಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಮಾನ್ಯ ಮುಖ್ಯ ಮಂತ್ರಿಗಳು ರಿಸೋರ್ಸ್ ಮೊಬಿಲೈಜೇಷನ್ಸ್ ಬಗ್ಗೆ ಮಾತನಾಡುತ್ತಾ ಹೇಳಿದರು ರೆಸೋರ್ಸ್ ಮೊಬಿಲೈಜೇಷನ್ ಕಲೆಕ್ಟ್ ಮಾಡುವಲ್ಲಿ ಹಿಂದೆ ಬಿದ್ದಿಲ್ಲ ಎಂದು ಅಂಕಿ ಅಂಶಗಳನ್ನು ಕೊಟ್ಟು ಹೇಳಿದರು. ಆದರೆ ಅವರೇ ನಮಗೆ ಕೊಟ್ಟಿರತಕ್ಕಂಥ ಅಂಕಿ ಅಂಶಗಳ ಆಧಾರದ ಮೇಲೆ ನಾವು ಮಾತನಾಡಿರುವುದು. ಕಳೆದ ೫ ವರ್ಷಗಳಲ್ಲಿ ಸುಮಾರು ೮೦೦ ಕೋಟಿ ರೂಪಾಯಿಗಳು ಡಿಫಿಸಿಟ್ ಆಗಿದೆ.

೧-೦೦ ಪಿ. ಎಂ.

ಬೇರೆಬೇರೆ ಇಲಾಖೆಗಳಿಂದ ಅಂದರೆ, ಎಕ್ಸೈಸ್ ಇರಬಹುದು, ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಇರಬಹುದು, ರೆವಿನ್ಯೂ ಇರಬಹುದು, ಫಾರೆಸ್ಟ್ ಇರಬಹುದು. ಈ ಎಲ್ಲಾ ಇಲಾಖೆಗಳಿಂದ ಪ್ರತಿವರ್ಷ ಎಷ್ಟೆಷ್ಟು ಹಣವನ್ನು ಕಲೆಕ್ಟ್ ಮಾಡುತ್ತೇವೆಂದು ನೀವು ಆಶ್ವಾಸನೆ ಕೊಟ್ಟು ತಾವು ಹೇಳಿದಿರೋ ಅದರಲ್ಲಿ ಏಳುನೂರು ಕೋಟಿ. ಎಂಟು ನೂರು ಕೋಟಿ ರೂಪಾಯಿಗಳು ಶಾರ್ಟ್‌ಫಾಲ್ ಬರುತ್ತದೆ. ಇನ್ನು ಎರಡನೆಯದಾಗಿ ರೀಜನಲ್ ಇಂಬ್ಯಾಲೆನ್ಸ್ ಬಗ್ಗೆ ಮಾತನಾಡುವುದಕ್ಕೆ ನಾನು ಹೋದರೆ, ಪಿ. ಡಬ್ಲ್ಯೂ. ಡಿ. ಇಲಾಖೆಯ ವಿಷಯ ಬಂದಾಗ ಮಾತನಾಡಿ ಎಂದು ಹೇಳಿದ್ದೀರಿ, ಇರಿಗೇಷನ್‌ನಲ್ಲಿ ಏನೇನು ಸಾಧನೆಯಾಗಿದೆ ಎಂಬುದರ ಬಗ್ಗೆ ನೋಡುವುದಾದರೆ, ೧೯೭೮ ರಿಂದ ೮೩ರವರೆಗೆ ನಾವು ಇರಿಗೇಷನ್‌ಗೆ ಎಷ್ಟು ಖರ್ಚು ಮಾಡಿ, ಎಷ್ಟು ಕೆಲಸ ಮಾಡಿದ್ದೇವೆಂದು ನೋಡಿದರೆ ಗೊತ್ತಾಗುತ್ತದೆ. ೧೯೮೩ರಿಂದ ೧೯೮೮ರವರೆಗೆ ಈ ೫ ವರ್ಷದಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿ ಎಷ್ಟು ಕೆಲಸ ಮಾಡಿದ್ದೀರಿ ಎಂದು ನೋಡಿದರೆ ನಾವು ಮಾಡಿದ್ದ ಕೆಲಸಕ್ಕಿಂತ ಬಹಳ ಕಡಿಮೆ ಮಾಡಿದ್ದೀರಿ. ಈ ೫ ವರ್ಷದಲ್ಲಿ ನೀವು ಇರಿಗೇಷನ್ ಪೊಟೆನ್‌ಷಿಯಾಲಿಟಿ ಕ್ರಿಯೇಟ್ ಮಾಡಿರುವುದು ಕೇವಲ ೬ ಲಕ್ಷ ಎಕರೆ ಮಾತ್ರ. ಅಂದರೆ ನೀವು ಇರಿಗೇಷನ್‌ಗೆ ಹೆಚ್ಚಿನ ಹಣವನ್ನು ಖರ್ಚು ಮಾಡಿರಬಹುದು ಆದರೆ, ಇರಿಗೇಷನ್ ಟಾರ್ಗೆಟ್ ಮಾತ್ರ ನೀವು ರೀಚ್ ಆಗಲಿಲ್ಲ. ಅದೇ ನಮ್ಮ ಕಾಲದಲ್ಲಿ ೫ ವರ್ಷಗಳಲ್ಲಿ ೧೩ ಲಕ್ಷ ಎಕರೆಗೆ ನೀರಾವರಿ ಸೌಕರ್ಯವನ್ನು ಒದಗಿಸಿಕೊಟ್ಟಿದ್ದೆವು. ಹಣ ಮಾತ್ರ ಜಾಸ್ತಿ ಖರ್ಚು ಮಾಡಿದ್ದೇವೆಂದು ತಾವು ಹೇಳುತ್ತೀರಿ ಇನ್ನು ಎರಡನೆಯದಾಗಿ ಹೈದರಬಾದ್ ಕರ್ನಾಟಕ ಪ್ರದೇಶಕ್ಕೆ ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೂ ಕಡಿಮೆ ಹಣವನ್ನು ನೀವು ಕೊಟ್ಟಿದ್ದೀರಿ. ರೋಡ್ ಕೆಲಸ ಮಾಡಿಸುವುದಕ್ಕೆ ಇರಬಹುದು, ಮೈನರ್ ಇರಿಗೇಷನ್ ಕೆಲಸಕ್ಕೆ ಇರಬಹುದು, ಮೀಡಿಯಂ ಇರಿಗೇಷನ್ ಕೆಲಸಕ್ಕೆ ಇರಬಹುದು, ಹೆಲ್ತ್ ಡಿಪಾರ್ಟ್‌ಮೆಂಟ್‌ಗೆ ಇರಬಹುದು, ಎಜುಕೇಷನ್ ಡಿಪಾರ್ಟ್‌ಮೆಂಟ್‌ಗೆ ಇರಬಹುದು ಎಲ್ಲಾ ಇಲಾಖೆಗಳಿಗೂ ಕಡಿಮೆ ಹಣವನ್ನು ಕೊಟ್ಟಿದ್ದೀರಿ. ನಮ್ಮ ಹೈದರಾಬಾದ್ ಕರ್ನಾಟಕ ಪ್ರದೇಶಗಳಿಗೆ ಹೆಚ್ಚಿನ ರೀತಿಯಲ್ಲಿ ಹಣವನ್ನು ಬಿಡುಗಡೆ ಮಾಡಬೇಕೆಂದು ನಾವುಗಳು ಅನೇಕ ಸಾರಿ ಮನವಿಗಳನ್ನು ಮಾಡಿಕೊಂಡಿದ್ದೇವೆ. ಈ ವರ್ಷ ಹೆಚ್ಚು ಹಣವನ್ನು ಬಿಡುಗಡೆ ಮಾಡಲಾಗುತ್ತದೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದರು. ಆದರೆ, ಈ ವರ್ಷದ ಬಜೆಟ್‌ನಲ್ಲಿ ನೋಡಿದರೆ, ಹೈದರಾಬಾದ್ ಕರ್ನಾಟಕ ಪ್ರದೇಶಗಳಿಗೆ ಯಾವುದೇ ಕೆಲಸಕ್ಕೂ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿಲ್ಲ. ನೀರಾವರಿ ಮಂತ್ರಿಗಳಾದ ಶ್ರೀಮಾನ್ ದೇವೇಗೌಡರು ನಮ್ಮ ಹೈದರಾಬಾದ್ ಏಕೆ ಕರ್ನಾಟಕವನ್ನು ಪೂರ್ಣವಾಗಿ ನೆಗ್ಲೆಕ್ಟ್ ಮಾಡಿದ್ದಾರೆ. ನೀವು ಕೂಡ ಹೈದರಾಬಾದ್ ಕರ್ನಾಟಕವನ್ನು ನೆಗ್ಲೆಕ್ಟ್ ಏಕೆ ಮಾಡುತ್ತೀರೆಂದು ನಾನು ಕೇಳುತ್ತೇನೆ. ಇದರ ಬಗ್ಗೆ ತಾವು ಸ್ಪಷ್ಟವಾಗಿ ಹೇಳಬೇಕು. ಡಿಸ್ಟ್ರಿಕ್ಟ್ ಪ್ಲಾನ್ ಅಲೋಕೇಷನ್ ಬಗ್ಗೆ ನಮಗೆ ಹೇಳಿ ಸಮಾಧಾನಪಡಿಸುವುದು ಬೇಡ.

ಶ್ರೀ ರಾಮಕೃಷ್ಣ ಹೆಗಡೆ —ನಾನು ನೀರಾವರಿ ವಿಚಾರದಲ್ಲಿ ಎಷ್ಟು ಹಣವನ್ನು ಹೈದರಾಬಾದ್ ಕರ್ನಾಟಕಕ್ಕೆ ಕೊಡಲಾಗಿದೆ ಎಂಬುದನ್ನು ಹೇಳುತ್ತೇನೆ. ೧೯೮೦-೮೧ರಲ್ಲಿ ೩೨ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ೧೯೮೧-೮೨ರಲ್ಲಿ ೩೫ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ೧೯೮೨-೮೩ರಲ್ಲಿ ೩೧ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ೧೯೮೩-೮೪ರಲ್ಲಿ ೩೨ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ೧೯೮೪-೮೫ರಲ್ಲಿ ೩೬ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ೧೯೮೫-೮೬ರಲ್ಲಿ ೩೦ ಕೋಟಿ ರೂಪಾಯಿಗಳನ್ನು ಕೊಡಲಾಗಿತ್ತು, ಅದರಲ್ಲಿ ೨೦ ಕೋಟಿ ರೂಪಾಯಿಗಳು ಖರ್ಚಾಗಲಿಲ್ಲ. ೧೯೮೬-೮೭ರಲ್ಲಿ ೪೬ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ಪ್ರತಿ ವರ್ಷವೂ ವರ್ಷದಿಂದ ವರ್ಷಕ್ಕೆ ಹೆಚ್ಚಿಗೆ ಹಣವನ್ನು ಕೊಡಲಾಗಿದೆ. ಮಾನ್ಯ ಖರ್ಗೆಯವರು ನಮ್ಮ ಕಾಲದಲ್ಲಿ ನೀರಾವರಿ ಪೊಟೆನ್‌ಷಿಯಲ್ ಕ್ರಿಯೇಟ್ ಆಗಿಲ್ಲವೆಂದು ಹೇಳುತ್ತಾರೆ. ಅವರ ವಾದವನ್ನು

ಪುರಸ್ಕರಿಸುವುದಕ್ಕೆ ಆಗುವುದಿಲ್ಲ. ನಾನು ಹೇಳುತ್ತಿರುವುದು ಅಧಿಕೃತ ಅಂಕಿ ಅಂಶಗಳನ್ನು ಮಾತ್ರ. ೧೯೮೦-೮೧ರಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ೨ ಲಕ್ಷ ಹೆಕ್ಟೇರ್ ಜಮೀನಿಗೆ ಪೊಟೆನ್‌ಷಿಯಲ್ ಕ್ರಿಯೇಟ್ ಆಗಿದೆ. ಮೂರನೆಯ ವರ್ಷ ೨ ಲಕ್ಷದ ೮೭ ಸಾವಿರ ಹೆಕ್ಟೇರ್‌ಗೆ ನೀರಾವರಿ ಸೌಕರ್ಯ ಸಿಕ್ಕಿದೆ. ನಾವು ಬಂದ ಮೇಲೆ ೧೯೮೩-೮೪ರಲ್ಲಿ ೩ ಲಕ್ಷ ೪೩ ಸಾವಿರ ಹೆಕ್ಟೇರ್ ಜಮೀನಿಗೆ ನೀರಾವರಿ ಸೌಕರ್ಯ ಸಿಕ್ಕಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಟೋಟಲ್ ಆಗಿ ನೀವು ಮಾಡಿರುವುದೇ ೨ ಲಕ್ಷದ ೯ ಸಾವಿರ ಹೆಕ್ಟೇರ್ ಮಾತ್ರ. ನಮಗೆ ನೀವು ಕೊಟ್ಟಿದ್ದು ಡಾಕ್ಯುಮೆಂಟ್ಸ್ ಚೆನ್ನಾಗಿ ಬಾಯಿಪಾಠ ಆಗಿದೆ. ನಮ್ಮ ಕಾಲದಲ್ಲಿ ಆಗಿದ್ದುದು ೩.೭೫ ಲಕ್ಷ ಹೆಕ್ಟೇರ್ಸ್ ಮತ್ತು ನಿಮ್ಮ ಕಾಲದಲ್ಲಿ ಆಗಿದ್ದು ೨.೯ ಲಕ್ಷ ಹೆಕ್ಟೇರ್ಸ್ ಮಾತ್ರ

SRI RAMAKRISHNA HEGDE.—That is not correct.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಫೈಲ್ ತರಿಸಿನೋಡಿ. ವೇರಿಯಸ್ ಸೆಕ್ಟರ್ಸ್‌ನಲ್ಲಿ ಅದು ಹೆಲ್ತ್ ಆಗಲಿ, ರೋಡ್ಸ್ ಮತ್ತು ಬ್ರಿಡ್ಜ್‌ಸ್ ಆಗಲಿ, ಎಜುಕೇಷನ್ ಆಗಲಿ, ಮೈನರ್ ಇರಿಗೇಶನ್ ಆಗಲಿ ಯಾವುದರ ಬಗ್ಗೆ ತಾವು ಏನನ್ನೂ ಹೇಳಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅದರ ಬಗ್ಗೆ ನಾವು ಏನು ಮಾಡತಕ್ಕಂಥಾದ್ದರ ಅವಶ್ಯಕತೆ ಇದೆಯೋ ಆ ಕಾರ್ಯಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೆ, ನಾನು ಅನೇಕ ಪ್ರಶ್ನೆಗಳನ್ನು ಎತ್ತಿದ್ದೇನೆ. ಅದಕ್ಕೆ ಕೆಲವು ವಿಚಾರಗಳನ್ನು ಮಾತ್ರ ಹೇಳಿದ್ದಾರೆ. ಈಗ ನಾನು ಅವರು ಹೇಳಿದ ವಿಚಾರಗಳಿಗೆ ಮಾತ್ರ ಕ್ಲಾರಿಫಿಕೇಶನ್ ಕೇಳುತ್ತಿದ್ದೇನೆ. ಈಗ ಪ್ರಮುಖವಾಗಿ ಮಾನ್ಯ ಮುಖ್ಯಮಂತ್ರಿಗಳು ಭಾಷಣವನ್ನು ಮಾಡುತ್ತಾ ಯೋಜನಾ ಗಾತ್ರದ ಬಗ್ಗೆ ಹೇಳಿದರು. ಕೆಲವು ವಿಚಾರಗಳನ್ನು ಅವರು ಹೇಳಿದ್ದುದು ಪೂರ್ತಿಯಾಗಿ ಸರಿಯಾಗಿಲ್ಲ. ಏಕೆಂದರೆ ತಾವು ದಯಮಾಡಿ ತಮ್ಮ ರಿಕಾರ್ಡ್ಸ್‌ನ್ನು ನೋಡಿ. ಏಕೆಂದರೆ the report of the Comptroller and Auditor General is an authentic document. ಅದನ್ನು ನಾವಾಗಲೀ, ತಾವಾಗಲೀ ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ಅದರಲ್ಲಿ ಪೇಜ್ ೧೪೮ದಲ್ಲಿ ಇದೆ. The capital expenditure shortfall is 236 7. crore for 1985-86 itself. Revenue expenditure short fall was 126.04 crore. Overall slippage in 1985-86 was 252.58 crore. At least you should release that amount so that you can give a direction to the Government and Officers. ಆದರೆ ತಾವು ಏನು ಮಾಡುತ್ತೀರಿ ? ನಿಮ್ಮ ಯೋಜನಾಗಾತ್ರ ಬಹಳ ಜಾಸ್ತಿಯಾಗಿದೆ ಎಂದು ಹೇಳುತ್ತೀರಿ, ಅವರಿಗೆ ಶಹಬಾಸ್‌ಗಿರಿಯನ್ನು ಕೊಡುತ್ತೀರಿ, ಹಾಗಾಗಿ ಅವರು ಅದೇ ರೀತಿಯಲ್ಲಿ ಪ್ಲಾನ್ ಮಾಡಿಕೊಂಡು ಹೋಗುತ್ತಾರೆ. ಆದರೆ ಇದರಿಂದ ಕರ್ನಾಟಕದ ಪ್ರಗತಿ ಕುಂಠಿತವಾಗಿದೆ ಎಂದು ನಾನು ಹೇಳುವುದು. ನಿಮ್ಮ ಸೆವೆಂಥ್ ಫೈವ್ ಇಯರ್ ಪ್ಲಾನ್ ರೂಪಿಸುವಾಗಲೇ ಅದು ಹೆಚ್ಚಿಗೆ ಆಗಿದೆ ಎಂದು ತಿಳಿದುಕೊಂಡು, ಅರ್ಥೈಸಿಕೊಂಡು ಮಾತನಾಡಿದ್ದರೆ ಒಳ್ಳೆಯದಾಗಿತ್ತು. ಏಕೆಂದರೆ ಎಕ್ಸ್‌ಪೆಂಡೀಚರ್ ಪ್ಲಾನ್ ವ್ಯತ್ಯಾಸ ರೂಪಾಯಿಗಳಲ್ಲಿ ಪರ್ಸಂಟೇಜ್ ಆಗಿದೆ ಎಂಬುದನ್ನು ತಾವು ಒಪ್ಪುವುದಿಲ್ಲ. ಈ ವ್ಯತ್ಯಾಸವು ೧೯೮೧-೮೨ರಲ್ಲಿ ೬೭ ಕೋಟಿ, ೧೯೮೨-೮೩ರಲ್ಲಿ ೬೯ ಕೋಟಿ, ೧೯೮೩-೮೪ರಲ್ಲಿ ೬೬ ಕೋಟಿ, ಇವೆ. ಒಂದು ವರ್ಷದ ಪ್ಲಾನ್‌ಗೆ ಇರುವ ವ್ಯತ್ಯಾಸದ ಬಗ್ಗೆ ತಾವು ಏನು ಮಾಡುತ್ತೀರಿ ? ಅದಕ್ಕಾಗಿ ಪ್ಲಾನ್ ಗಾತ್ರವನ್ನು ಕಡಿಮೆ ಮಾಡುತ್ತಾ ಇದ್ದೀರಿ. ನಾವು ಹಿಂದೆ ಪ್ಲಾನ್ ಗಾತ್ರವನ್ನು ಹೆಚ್ಚು ಮಾಡುತ್ತಿದ್ದರೂ, ನಿಮ್ಮ ಪ್ಲಾನ್ ಔಟ್‌ಲೇ ನೋಡಿದರೆ ಅದರ ಕಡಿತವಾಗಿದೆ. It has beceme below average. The national average is 1010. Whereas it is 893 in case of Karnataka which means it has dipped below the national average. In the 6th Plan ours was above national average. All India average was 665. Karnataka was 726. In the 5th Plan we were above national average, ಇದರ ಚೌಕಟ್ಟಿನಲ್ಲಿ ತಾವು ಪ್ಲಾನ್ ಮಾಡಬೇಕಾಗುತ್ತದೆ. ದಯವಿಟ್ಟು ತಾವು ಇದನ್ನು ವಿಮರ್ಶಿಸಿ ನೋಡಬೇಕು. ಏಕೆಂದರೆ ೧೯೮೨-೮೩, ೧೯೮೪-೮೫ ಇದರಲ್ಲಿ ವ್ಯತ್ಯಾಸವನ್ನು ತೋರಿಸುತ್ತದೆ.

In percapita outlay Karnataka was in the 6th place in the 6th five year plan. Now it has dipped down to the 9th place. ೧೯೮೩-೮೪, ೧೯೮೪-೮೫ರಲ್ಲಿ ಬರೀ ೪೬ ಕೋಟಿ ರೂಪಾಯಿಗಳ ವ್ಯತ್ಯಾಸ ಬಂತು. ೧೯೮೪-೮೫, ೧೯೮೫-೮೬ರಲ್ಲಿ ಮೈನಸ್ ೧೪ ಕೋಟಿ ಬಂತು ಅಂದರೆ ಒಂದು ವರ್ಷದಿಂದ ಮತ್ತೊಂದು ವರ್ಷಕ್ಕೆ ವ್ಯತ್ಯಾಸ ಬರುತ್ತಿದೆ, ಈಗ ೩೦೦ ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದೀರಿ. ಒಟ್ಟು ಪ್ಲಾನ್‌ನಲ್ಲಿ ನಮ್ಮ ಸ್ಥಾನ ಈಗ ಕಡಿಮೆ ಬಂದಿದೆ. ವರ್ಷ ವರ್ಷ ಕೂಡ ವ್ಯತ್ಯಾಸ ಕಡಿಮೆ ಬಂದಿದೆ. ಇದರ ಒಟ್ಟು ಪರಿಣಾಮ ಒಂದೂವರೆ ಎರಡು ಸಾವಿರ ಕೋಟಿ ರೂಪಾಯಿ. ೭ನೇ ಯೋಜನೆಯಲ್ಲಿ ಒಟ್ಟು ಕಡಿಮೆಯಾಗುತ್ತದೆ. ತಾವು ನೀರಾವರಿ ಯೋಜನೆಯಲ್ಲಿ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಹೆಚ್ಚು ಹಣವನ್ನು ಒದಗಿಸಬೇಕಾಗುತ್ತದೆ. ಕೋರ್ ಸೆಕ್ಟರ್‌ನಲ್ಲಿ ತಾವು ದಯವಿಟ್ಟು ನೋಡಿ ತಮ್ಮ ಕರ್ನಾಟಕ ಪಿಕ್ಚರ್ ಆಫ್ ಬಡ್ಜೆಟ್ ಅನ್ನು ನೋಡಿ. ಇದನ್ನೇ ತಾವು ರಿಯಲೈಸ್ ಮಾಡಿಕೊಂಡು ಮುಂದುವರೆದರೆ ಆಗುವುದಿಲ್ಲ ಅದನ್ನು ರಿಯಲೈಸ್ ಮಾಡದೇ ತಾವು ಮಾಡಿದ್ದೇ ಸರಿ ಎಂದು ಕುರುಡ ಹಿಡಿದದ್ದೆ ಬಡಿಗೆ ಎಂದು ಹೋಗುವುದಾದರೆ ಅದು ಸರಿಯಾಗಲಿಕ್ಕಿಲ್ಲ. ನಿಮ್ಮ ಪ್ರಾವಿಜನ್ ಅನ್ನು ನೋಡಿಕೊಳ್ಳಿ ಮೇಜರ್ ಅಂಡ್ ಮೀಡಿಯಮ್ ಇರಿಗೇಷನ್ ೧೯೮೧-೮೯ರಲ್ಲಿ ೬೧.೫೩ ಪರ್ಸೆಂಟ್ ಇದೆ ಪೇಜ್ ೩೨ ಕರ್ನಾಟಕ ಪಿಕ್ಚರ್ ಆಫ್ ಬಡ್ಜೆಟ್‌ನಲ್ಲಿ ಇದೆ. ಆಮೇಲೆ ಕಡಿಮೆಯಾಗುತ್ತಾ ಬಂತು ೧೯೮೩-೮೪ರಲ್ಲಿ ೫೨.೬೮ ಪರ್ಸೆಂಟ್ ಇದೆ ಪ್ರಾಕ್ಟಿಕಲ್ ಆಗಿ ಹತ್ತು ಪರ್ಸೆಂಟ್ ಅಂದರೆ ೫೫ ಪರ್ಸೆಂಟ್‌ಗೆ ಬಂತು. ಮಾನ್ಯ ದೇವೇಗೌಡರ ವಿಚಾರದಲ್ಲಿ ತಮ್ಮ ವೈಯಕ್ತಿಕ ಅಭಿಪ್ರಾಯವಿದ್ದರೆ ಅದು ಬೇರೆ. ಈಗಲೂ ಹೇಳಿ ಮೇಜರ್ ಇರಿಗೇಷನ್‌ಗೆ ಅಲೊಕೇಷನ್ ಜಾಸ್ತಿ ಕೊಡುತ್ತೇವೆಂದು, ಇದರಲ್ಲಿ ಪ್ರತಿಷ್ಠೆ ಬೇಡ ರಾಜ್ಯಕ್ಕೋಸ್ಕರ ಏನಾದರೂ ಮಾಡಿ. ಆದರೆ ಅಂತಹ ದೃಷ್ಟಿಕೋನ ನಮಗೆ ಇವತ್ತಿನವರೆಗೂ ಕಾಣಲಿಲ್ಲ, ನಾನು ಬಡ್ಜೆಟ್ ಭಾಷಣದಲ್ಲಿ ಕೇಳಿದೆ ತಾವು ಯಾವ ರೀತಿ ಕೋರ್ ಸೆಕ್ಟರ್‌ನಲ್ಲಿ ಪ್ರಾವಿಜನ್ ಮಾಡಿದ್ದೀರಿ ಎಂದು. ಮಾನ್ಯ ಜೆ. ಹೆಚ್. ಪಟೇಲ್‌ರವರೂ ಕೂಡ ಆಗ ಇದ್ದರು. ಈ ರೀತಿ ಯೋಜನಾ ಗಾತ್ರವನ್ನು ಕಡಿಮೆ ಇಟ್ಟುಕೊಂಡು ೧೧೦ ಪರ್ಸೆಂಟ್ ಸಾಧಿಸಿದ್ದೇವೆ ೧೨೦ ಪರ್ಸೆಂಟ್ ಸಾಧಿಸಿದ್ದೇವೆಂದು ಫಿಗರ್ಸ್‌ನಲ್ಲಿ ಜಗ್ಲರಿ ಮಾಡಿ ತೋರಿಸಿದರೆ ಆಗುವುದಿಲ್ಲ. Whatever figures you have now provided, it is quite Contrary to the actuals which are incurred. This is even according to the Accountant Generals's report. ಯಾವ ಅಧಿಕಾರಿಗಳು ಈ ಫಿಗರ್ಸ್ ಅನ್ನು ಕೊಟ್ಟರೋ ಗೊತ್ತಿಲ್ಲ. Better you go back to the base figure which is provided by the Accountant General. That is authenic and that is the constitutional agency. It has got to be given a legal sanctity. ಅದನ್ನು ಬಿಟ್ಟು ಯಾವುದೋ ಫಿಗರ್ಸ್ ಅನ್ನು ಇಟ್ಟುಕೊಂಡು ಹಿಂದೆ ಮಾಡಿದ್ದೇವೆ ಹಿಂದೆ ವ್ಯತ್ಯಾಸವಿದೆ ಎಂದು ಹೇಳುವುದು ಸರಿಯಲ್ಲ ಹಿಂದಿನಿಂದ ವರ್ಷದಿಂದ ವರ್ಷಕ್ಕೆ ಯೋಜನಾ ಗಾತ್ರವನ್ನು ಹೆಚ್ಚುಹೆಚ್ಚು ಮಾಡುತ್ತಿದ್ದೇವೆ ಹೆಚ್ಚು ಹೆಚ್ಚು ಹಣವನ್ನು ಕೊಡುತ್ತಿದ್ದೇವೆ. The tempo of development was kept up. Now the tempo of development has dipped down. ಇದನ್ನು ದಯಮಾಡಿ ವಿಚಾರ ಮಾಡಿ ಮುಂದುವರಿಸಿದರೆ ಒಳ್ಳೆಯದೆಂದು ನಮ್ಮ ಇಷ್ಟ.

ಶ್ರೀ ರಾಮಕೃಷ್ಣ ಹೆಗಡೆ.— ಈ ವಿಚಾರದಲ್ಲಿ ನಾನು ವಾದಕ್ಕೆ ಇಳಿಯುವುದಕ್ಕೆ ಬಯಸುವುದಿಲ್ಲ ವಾದಕ್ಕೆ ಇಳಿದರೆ ಬಹಳ ಸಮಯಬೇಕಾಗುತ್ತದೆ, ಮಾನ್ಯ ಮೊಯಿಲಿಯವರು ಯಾವ ಆಧಾರದ ಮೇಲೆ ಈ ಅಂಕಿಸಂಖ್ಯೆಗಳನ್ನು ಕೊಡುತ್ತಾರೆಯೋ ನನಗೆ ಗೊತ್ತಿಲ್ಲ. ನಾನು ಕೊಟ್ಟಂತಹ ಅಂಕಿ ಸಂಖ್ಯೆ ಎ.ಜಿ. ಕೊಟ್ಟದ್ದು, ಮತ್ತು ಆಲ್ ಇಂಡಿಯಾ ಇಂಡಿಕೇಟರ್‌ನಿಂದ ಬಂದಿರತಕ್ಕಂಥಾದ್ದು, ಪ್ಲಾನಿಂಗ್ ಕಮಿಷನ್‌ನವರು ಕೊಟ್ಟಿರತಕ್ಕಂಥಾದ್ದು. ಪುಸ್ತಕದಲ್ಲಿ ನೋಡಿ ೫ ವರ್ಷ ಹಿಂದಿನದು, ೫ ವರ್ಷ ನಮ್ಮದು.

SRI M. VEERAPPA MOILY —Better you go through Comptroller and auditer General's report for the year 1985-86. page No. 10.

ಶ್ರೀ ರಾಮಕೃಷ್ಣ ಹೆಗಡೆ.—ಇವತ್ತು ಯಾವುದೇ ಕ್ಷೇತ್ರವನ್ನು ತೆಗೆದುಕೊಳ್ಳಿ ೧೯೮೦ ರಿಂದ ೮೩, ೮೩ ರಿಂದ ೮೮ನ್ನು ತುಲನೆ ಮಾಡಿ ನೋಡಿ ಇಲ್ಲವೇ ೧೯೭೯ ರಿಂದ ೮೩, ೮೩ ರಿಂದ ೮೮ ತುಲನೆ

ಮಾಡಿ ನೋಡಿ ಯಾವುದೇ ಕ್ಷೇತ್ರದಲ್ಲಿ there has not been any slippage, there has not been any lapse and there has not been any retreat.

SRI M. VEERAPPA MOILY.—God alone should save you and your Government.

ಶ್ರೀ ರಾಮಕೃಷ್ಣ ಹೆಗಡೆ.—ಕರ್ನಾಟಕದ ಬಗ್ಗೆ ಹೊಸ ಪುಸ್ತಕವನ್ನು ಏನು ತಂದಿದ್ದೇವೆ ಅದರಲ್ಲಿ ಪೇಜ್ ೧೭ ಅನ್ನು ತೆಗೆದುಕೊಂಡು ನೋಡಿ. ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಬಗ್ಗೆ ಕೊಟ್ಟಿರ ತಕ್ಕಂಥ ಪುಸ್ತಕದಲ್ಲಿ ೧೯೭೮ ರಿಂದ ೧೯೮೮ ರವರೆಗೆ ೧೦ ವರ್ಷದ್ದು ಕೊಟ್ಟಿದ್ದೇವೆ. ೧೦ ವರ್ಷದಲ್ಲಿ ೭೮ ರಿಂದ ೮೩ ರವರೆಗೆ ಐದು ವರ್ಷದ್ದು. ಆ ನಂತರ ೫ ವರ್ಷದ್ದು ಕೊಟ್ಟಿದ್ದೇವೆ. ಅದರಲ್ಲಿ ಕನ್ನಡಿ ಹಾಗೆ ಕಾಣುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದರಲ್ಲಿ ಹೌಸಿಂಗ್ ಬಗ್ಗೆ ಏನಾದರೂ ಇದೆಯೋ ? ತೆಗೆಯಿರಿ

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುವಾಗ ಬಹಳ ಜಾಣ್ಮೆಯಿಂದ ಉತ್ತರವನ್ನು ಕೊಡುತ್ತಾರೆ. ಆ ರೀತಿಯಲ್ಲಿ ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ತಮ್ಮ ಮೈಮೇಲೆ ಬರುವಂಥವುಗಳನ್ನು ಬಿಟ್ಟುಬಿಡುತ್ತಾರೆ. ಸರ್ಕಾರದ ಒಂದು ಅಂಕಿ ಸಂಖ್ಯೆಗಳನ್ನು ಮಾತ್ರ ಕೊಡುತ್ತಾರೆ. ಅಲ್ಲಿ ಇಷ್ಟು ಆಯಿತು, ಇಲ್ಲಿ ಇಷ್ಟು ಆಯಿತು ಎಂದು ಹೇಳುತ್ತಾರೆ. ಈ ರಾಜ್ಯದ ಜನತೆಗೆ ಈ ವರ್ಷದಲ್ಲಿ ನೀವು ಏನೇನು ಡೆವಲಪ್‌ಮೆಂಟ್ಸ್ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎನ್ನುವುದನ್ನು ಹೇಳಬೇಕು. ಇದರ ಬಗ್ಗೆ ತಮ್ಮಂಥವರು ಬಹಳಷ್ಟು ಹೇಳಬೇಕಾಗುತ್ತದೆ. ಏಕೆಂದರೆ ತಾವು ಎಲ್ಲರಿಗೂ ಮಾದರಿಯಾಗಿರುವವರು ರಚನಾತ್ಮಕ ಕಾರ್ಯಕ್ರಮಗಳನ್ನು ಜನತೆಯು ಹಾಗೂ ಸಾಮಾನ್ಯ ಜನತೆಯು ಹಿತದೃಷ್ಟಿಯಿಂದ ಏನೇನು ಕಾರ್ಯಕ್ರಮಗಳನ್ನು ಮಾಡುತ್ತೀರೆಂದು ತಾವು ಹೇಳಬೇಕು. ಅನೇಕ ಆಯೋಗಗಳನ್ನು ನೇಮಿಸಿದಿರಿ ಜಿಲ್ಲೆಗಳನ್ನು ಮಾಡಲಿಕ್ಕೆ ನೇಮಿಸಿದಿರಿ. ಬ್ಯಾಕ್‌ವಾರ್ಡ್ ಕ್ಲಾಸ್‌ಗೆ ನೇಮಿಸಿದಿರಿ, ಮೈನಾರಿಟೀಸ್ ಬಗ್ಗೆ ನೇಮಿಸಿದಿರಿ. ಮೈನಾರಿಟೀಸ್ ಕಾರ್ಪೊರೇಷನ್ ಆಯಿತು. ಇವೆಲ್ಲವುಗಳ ಕಾರ್ಯಾಚರಣೆ ಏನು ಇದೆ. ಅದು ಜೀರೋ ಇದೆ ಎಂದು ನಮಗನಿಸುತ್ತದೆ. ಇದಕ್ಕೆ ಯಾರು ಕಾರಣ ? ಇವತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಕಾರ್ಪೊರೇಷನನ್ನು ಮಾಡಿದ್ದೀರಿ, ಅಲ್ಲ ಅರ್ಜಿಯನ್ನು ತೆಗೆದುಕೊಳ್ಳಲಿಕ್ಕೆ ಎಷ್ಟು ಹಣ ಜಮಾ ಮಾಡಿದರೋ ಅಷ್ಟು ಹಣ ಸಾಲ ರಹಿತ ಅವರಿಗೆ ಕೊಡಿ. ಇದಕ್ಕೆ ತಾವು ಏನು ಹೇಳುತ್ತೀರಿ ? ನಾವು ಯಾರ ಹತ್ತಿರ ಈ ಸಮಸ್ಯೆಗಳನ್ನೆಲ್ಲಾ ಹೇಳಿಕೊಳ್ಳಬೇಕು. ಈ ಸಮಸ್ಯೆಗಳನ್ನು ನಿಮ್ಮ ಹತ್ತಿರ ಹೇಳಿದರೆ ನಿಮ್ಮ ಮನಸ್ಸಿಗೆ ಸಮಾಧಾನ ಇದ್ದರೆ ಕೇಳುತ್ತೀರಿ, ಇಲ್ಲದಿದ್ದರೆ, ಕೇಳುವುದಿಲ್ಲ. ಮೈನಾರಿಟೀಸ್ ಕಮಿಷನ್‌ಗೆ ಅಲ್ಲಿ ದೊಡ್ಡ ವಕೀಲರನ್ನು ನೇಮಿಸಿ ಅವರು ವರದಿ ಕೊಟ್ಟು ಎಷ್ಟು ವರ್ಷ ಆಯಿತು ? ಆ ವರದಿ ಸರಿ ಇಲ್ಲದಿದ್ದರೆ you can tell this House that this is a useless report, therefore we are not recognising. If it is useful then you implement it.

ಇವುಗಳನ್ನು ಯಾವ ದೃಷ್ಟಿಯಿಂದಲೂ ತಾವು ಆಚರಣೆಗೆ ತರಲಿಲ್ಲ ಎನ್ನುವುದನ್ನು ಹೇಳಬೇಕಾಗುತ್ತದೆ. ಜಿಲ್ಲಾವಾರು ಸಮಿತಿಗಳನ್ನು ಮಾಡಿ ಅದರ ಬಗ್ಗೆಯೂ ಹೇಳಲಿಲ್ಲ. ಇದೇ ರೀತಿಯಲ್ಲಿ ನೀವೇ ಮಾಡುತ್ತೇವೆಂದಾದರೆ ಏತಕ್ಕೆ ಈ ಸದನ ಬರಬೇಕು ? ಅಂಕಿಅಂಶಗಳನ್ನು ಪ್ರಿಂಟ್ ಮಾಡಿ ಕಳಿಹಿಸಿ ಕೊಟ್ಟರೆ ನಾವು ಓದಿಕೊಳ್ಳಬಹುದು. ಕೇಂದ್ರದವರು ಅನೇಕ ಕಾರ್ಯಕ್ರಮಗಳನ್ನು ಮಾಡಿದ್ದಾರೆ ನೀವು ಅಷ್ಟು ದೊಡ್ಡ ಪ್ರಮಾಣದಲ್ಲಿ ಅಲ್ಲವಾದರೂ ಸಣ್ಣ ಪ್ರಮಾಣದಲ್ಲಿ ಒಂದು ಪರ್‌ಸೆಂಟ್ ಆದರೂ ಮಾಡಿ ತೋರಿಸಿ. ಏಕೆಂದರೆ ನೀವು ವಿರೋಧ ಪಕ್ಷದಲ್ಲಿರತಕ್ಕಂಥವರು ಟೀಕೆ ಮಾಡಬೇಕಾಗುತ್ತದೆ. ಅವರು ಕೇಂದ್ರ ಸರ್ಕಾರದವರು ಮಾಡತಕ್ಕಂಥ ಕೆಲಸಗಳನ್ನು ನೋಡಿ, ಉತ್ತಮವಾದ ಕೆಲಸಗಳನ್ನು ನೋಡಿ ಪ್ರಶಂಸೆ ಮಾಡಬೇಕಾಗುತ್ತದೆ. ಕೇಂದ್ರದವರು ರೈತಾಪಿ ಜನಗಳಿಗಾಗಿ ಅನೇಕ ಕಾರ್ಯಗಳನ್ನು ಮಾಡಿದ್ದಾರೆ ನೀವು ಚಿಕ್ಕ ಪ್ರಮಾಣದಲ್ಲಿ ಮಾಡಿದರೂ ಕೂಡಾ ಅವುಗಳನ್ನು ಅಮಲಿನಲ್ಲಿ ತಂದರೆ ಜನರು ಸಂತೋಷಪಡುತ್ತಾರೆ ಮತ್ತು ಜನರು ಸೌಮ್ಯವೂ ಆಗುತ್ತಾರೆ. ಇನ್ನೊಂದು ಮಾತನ್ನು ತಾವು ಹೇಳಿದಿರಿ. ಅಧಿಕಾರಸ್ಥರ ವಿರುದ್ಧ ನಾವು ಮಾತನಾಡುವುದಕ್ಕೆ ಅಧಿಕಾರವೇ ಇಲ್ಲ ಎಂದು ಆದರೆ ಈ

ರೀತಿ ಅವರು ಹೇಳಿರುವುದನ್ನು ನೋಡಿದರೆ ಚೆನ್ನಾಗಿ ಕಾಣುವುದಿಲ್ಲ. ಚೆನ್ನಾಗಿ ಕೆಲಸ ಮಾಡುವವರನ್ನು ಚಲೋ ಅಧಿಕಾರಿ ಎಂದು ನಾವು ಹೇಳಲೇ ಬೇಕಾಗುತ್ತದೆ ಹಾಗೆಯೇ ಯಾರು ಚೆನ್ನಾಗಿ ಕೆಲಸ ಮಾಡುವುದಿಲ್ಲವೋ ಅವರನ್ನು ಸ್ವಲ್ಪ ನಿಂದಿಸಿ ಹೇಳಿದರೆ ಅವರು ಸರಿಹೋಗುತ್ತಾರೆ. ನಿಮ್ಮ ಮುಖ್ಯಕಾರ್ಯದರ್ಶಿಯವರ ಬಗ್ಗೆ ನಾನು ಹಾಗೆ ಹೇಳಲಿಲ್ಲ. ಅವರ ಕಾಲುಗುಣ ಚೆನ್ನಾಗಿದೆ, ಅದರಂತೆಯೇ ಅವರು ಬಂದ ಮೇಲೆ ಅಲ್ಲಿ ಸಕ್ಕರೆ ಕಾರ್ಖಾನೆ ಮಂಗಳೂರು ಕಾರ್ಖಾನೆ ಕೆಲಸ ಚಲೋ ಆಯಿತು ಹಾಗೆ ಎಲ್ಲಾ ಅಧಿಕಾರಿಗಳ ಮೇಲೆಯೂ ನಾನು ಹೇಳಲಿಲ್ಲ. ನಾವು ಸ್ಪೀಕರ್‌ರವರಿಗೆ ಮಾತನಾಡುವುದಕ್ಕೆ ಮೊದಲು ರಿಪೋರ್ಟನ್ನು ಕೊಡದೇ ಏನು ಮಾತನಾಡುವುದಕ್ಕೂ ಬರುವುದಿಲ್ಲ. ಮತ್ತು ಯಾವುದೇ ಭ್ರಷ್ಟಾಚಾರದ ಆರೋಪವನ್ನು ಮಾಡುವುದಾದರೂ ವಿವರಗಳನ್ನು ಕೊಡಬೇಕಾಗುತ್ತದೆ. ನಾವು ಯಾವ ಭ್ರಷ್ಟಾಚಾರವನ್ನು ಹೇಳಿಲ್ಲ. ಮಾನ್ಯ ಲಾ ಮಿನಿಸ್ಟರ್ ಅವರ ಬಗ್ಗೆ ಏನಾದರೂ ವಿವರವನ್ನು ಕೊಡಿ ಎಂದು ಕೇಳಿದರೆ ಕೊಡಬೇಕೋ ಇಲ್ಲ ಎಂದು ಹೇಳಬೇಕೋ ಇದನ್ನು ನೀವೇ ಹೇಳಿ, ಒಂದಲ್ಲ ಎರಡು ಮನೆಯನ್ನು ಕಟ್ಟಿದ್ದಾರೆ ಎಂದು ಇಷ್ಟೇ ಮಾತ್ರ ಅಲ್ಲಿ ಹೇಳಿದ್ದೇನೆ,ನನ್ನ ಹತ್ತಿರ ಇನ್ನು ಕಾಗದಗಳು ಇದ್ದಾವೆ, ನೀವು ಕೊಡಬೇಕು ಎಂದು ಹೇಳಿದರೆ ಕೊಡುತ್ತೇನೆ ಅದೇ ರೀತಿ ಬೇರೆ ಅಧಿಕಾರಿಗಳು ಚಲೋ ಇದ್ದರೆ ಅವರನ್ನು ಚಲೋ ಎಂದು ಹೇಳುತ್ತೇನೆ ಎಲ್ಲದಕ್ಕೂ ಅವರನ್ನು ಮೇಲೆಎತ್ತಬೇಡಿ,ಸ್ವಲ್ಪ ತಗ್ಗಿಸಿರಿ ಯಾರೇನು ಹರಿಶ್ಚಂದ್ರ ಏನಲ್ಲ, ತಮಗೆ ಗೊತ್ತಿಲ್ಲ. ನೀವು ಕರ್ನಾಟಕ ಭವನದಲ್ಲಿ ಇಳಿದರೆ ಅವರು ಅಶೋಕಾದಲ್ಲಿ ಇಳಿದು ಬಂದಿರುತ್ತಾರೆ. ಇದು ಏತರ ಸಲುವಾಗಿ ? ಕರ್ನಾಟಕ ಭವನದಲ್ಲಿ ಖಾಲಿ ಇದ್ದರೂ ಆ ರೀತಿ ಮಾಡಿರುತ್ತಾರೆ. ಕರ್ನಾಟಕ ಭವನದಲ್ಲಿ ಖಾಲಿ ಇದ್ದಾಗ ನನ್ನ ಸೆಕ್ರೆಟರಿಯವರು ಅಶೋಕಾದಲ್ಲಿರುತ್ತಾರೆ.ನಾನು ಕರ್ನಾಟಕ ಭವನದಲ್ಲಿಯೇ ಬೀಳಬೇಕೇ ? ಅದನ್ನು ಸ್ವಲ್ಪ ದಯವಿಟ್ಟು ತಿಳಿದ್ದಿದರೆ ನೀವು ಮೂಗುದಾಣ ತೆಗೆದುಕೊಳ್ಳದೇ ಹೋದರೆ ಅವರು ಮೇಲಕ್ಕೆ ಹೋಗುತ್ತಾರೆ. ಅವರನ್ನು ಹಿಡಿದು ತಡೆಯಬೇಕು ಎಂದು ಹೇಳುತ್ತೇನೆ ಮತ್ತು ಯಾವ ಅಧಿಕಾರಿ ವಿಷಯಗಳಿಗೆ ನಾನು ಹೋಗುವುದಿಲ್ಲ. ಬಜೆಟ್ ಮೇಲೆ ವಿಷಯ ಬಂದಾಗ ಹೇಳಲಿಕ್ಕೆ ಹೋಗಿಲ್ಲ ಅವರು ಅನೇಕ ಸಂಗತಿಗಳನ್ನು ಮುಚ್ಚಿಬಿಟ್ಟು ಇವರು ಮಾಡುವ ವ್ಯವಹಾರಗಳು ನಜರಿಗೆ ಬಂದಿದ್ದರಿಂದ ಹೇಳಿದ್ದೇನೆ.

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೇ ಕೇಳಿ ಹೇಳುತ್ತಾರೆ.

ಶ್ರೀ ಜಿ, ಬಸವಣ್ಣಪ್ಪ.—ಮಾನ್ಯ ಕೆ.ಹೆಚ್. ಪಾಟೀಲ್‌ರವರು ಮೈನಾರಿಟೀಸ್ ಕಮೀಷನ್ ಅಪಾಯಿಂಟ್ ಮಾಡಿದ್ದೀರಿ, ಅದು ಕಾರ್ಯರೂಪಕ್ಕೆ ಬರಲಿಲ್ಲ ಎಂದು ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಮೈನಾರಿಟೀಸ್ ಕಮೀಷನ್‌ನವರು ೩೧ ರೆಕಮೆಂಡೇಷನ್ಸ್ ಮಾಡಿದ್ದರು. ಅದರಲ್ಲಿ ೧೪ ರೆಕಮಂಡೇಷನ್ಸ್ ಈಗ ಕಾರ್ಯಗತವಾಗಿ ಆಜ್ಞೆಯನ್ನು ಹೊರಡಿಸಿದ್ದೇವೆ ಮೈನಾರಿಟಿ ಡೆವಲೆಪ್‌ಮೆಂಟ್ ಕಾರ್ಪೊರೇಷನ್, ಉರ್ದು ಡೈರೆಕ್ಟೊರೇಟ್ ಮಾಡಿದ್ದೇವೆ. ಅದೇ ರೀತಿ ಎಸ್.ಸಿ.ಎಸ್.ಟಿ. ಡೆವಲಪ್‌ಮೆಂಟ್ ಕಾರ್ಪೊರೇಷನ್ ಮಾಡಿದ್ದೇವೆ. ಪರಿಶಿಷ್ಟ ಜಾತಿ ಹಾಗೂ ಜನಾಂಗದವರಿಗೆ ಅವರನ್ನು ಬಡತನ ರೇಖೆಯಿಂದ ಮೇಲೆತ್ತಬೇಕೆಂದು ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದೇವೆ. It is not that easy to eradicate pover y all of a sudden. We are doing it systematicelly

ಅಧ್ಯಕ್ಷರು.—ಮಾನ್ಯ ಬಸಲಿಂಗಪ್ಪನವರೇ ತಾವು ಕ್ಲಾರಿಫಿಕೇಶನ್ ಕೇಳಿ.

ಶ್ರೀ ಬಿ, ಬಸವಲಿಂಗಪ್ಪ.—ಮಾನ್ಯ ಮುಖ್ಯಮಂತ್ರಿಗಳೇ ಈಗ ಮಾನ್ಯ ಸದಸ್ಯರಾದ ಮೊಯಿಲಿಯವರು ಕಂಟ್ರೋಲರ್ ಆಫ್ ಆಡಿಟ್ ಅಂಡ್ ಎ.ಜಿ. ಸಿವಿಲ್ ಆಡಿಟ್ ಬಗ್ಗೆ ಪ್ರಶ್ನೆ ಕೇಳಿದ್ದಾರೆ ಇದರ ಬಗ್ಗೆ ಉತ್ತರ ಕೊಡುವುದನ್ನು ಬಿಟ್ಟು ಪ್ರಿಂಟ್ ಮಾಡಿದ್ದನ್ನು ಓದಿದರು ತಾವು ಮಾಡಿದ್ದು ಸರಿಯೇ. ಕಂಟ್ರೋಲರ್ ಮಾಡಿದ್ದು ಸರಿಯಲ್ಲ ಎಂದು ತಾವು ಈ ಕಮೀಷನರ್ ಆಫ್ ಆಡಿಟ್ ಎಂದು ಮಾಡಿದ್ದೀರಿ ನಿನ್ನೆ ನಾನು ಮಾತನಾಡುವಾಗ ಹೇಳಿದ್ದೇನೆ ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಡೆವಲಪ್‌ಮೆಂಟ್ ಬಗ್ಗೆ ದೊಡ್ಡ ದೊಡ್ಡ ೯-೧೦ ಇಂಡಸ್ಟ್ರಿಗಳ ಬಗ್ಗೆ ಹೇಳಿದ್ದೇನೆ. ಎ ಜಿ.ಯವರು ಹೇಳಿರತಕ್ಕದ್ದರ ಬಗ್ಗೆ ತಾವು ಸಮಂಜಸವಾದ ಉತ್ತರ ಕೊಡಬೇಕು ಸರ್ಕಾರ ತಿದ್ದುಪಡಿ ಮಾಡಿಕೊಳ್ಳಬೇಕು ಅವರು ಹೇಳಿದಂತೆ ನಡೆದುಕೊಳ್ಳುವುದಿಲ್ಲ, ಅಧಿಕಾರಿಗಳು ಹೇಳಿದಂತೆ ಕೇಳುವುದಾದರೆ ಹೇಗೆ ? ಕಂಟ್ರೋಲರ್ ಮಾಡಿರತಕ್ಕ ಪಾಯಿಂಟ್‌ಗಳ ಬಗ್ಗೆ ಸಮಂಜಸ ಉತ್ತರ ಕೊಡಬೇಕು. ಇಲ್ಲದೇ ಹೋದರೆ ಏನು ನಿಮ್ಮ ನೀತಿ ಇಟ್ಟುಕೊಂಡಿದ್ದೀರಿ ಎಂದು ಕೇಳುತ್ತೇನೆ ನೀವು ನೀತಿ ನಿಯಮದಂತೆ ನಡೆಯುವುದಿಲ್ಲ ಎಂದರೆ

ನಡೆದುಕೊಂಡು ಹೋಗಿ, ನಮ್ಮ ಕರ್ತವ್ಯ, ನಾವು ಹೇಳಿದ್ದೇವೆ. ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ, ನಿರುದ್ಯೋಗದ ಬಗ್ಗೆ ತಾವು ಉತ್ತರ ಹೇಳಿಲ್ಲ: ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಲ್ಲಿ ೧೦ ಲಕ್ಷ ಜನರನ್ನು ನೊಂದಾಯಿಸಿಕೊಂಡಿದ್ದಾರೆ. ಅವರಿಗೆ ತಾವು ಏನಾದರೂ ಕೆಲಸಕ್ಕೋಸ್ಕರ ಮಾರ್ಗ ದರ್ಶನ ಮಾಡುತ್ತೀರಾ? ಮಾನ್ಯ ಕೋಳಿವಾಡ ಅವರ ಪ್ರಶ್ನೆಗೆ ಉತ್ತರಿಸುತ್ತಾ ಏಳ ಸಾವಿರ ಹುದ್ದೆಗಳು ಖಾಲಿ ಇವೆಯೆಂದು ತಾವು ಉತ್ತರ ಕೊಟ್ಟಿದ್ದೀರಿ ಅದನ್ನು ತುಂಬಲಿಕ್ಕೆ ಏನು ಮಾಡಿದ್ದೀರಿ ? ಇದುವರೆಗೆ ರಿಕ್ರೂಟ್‌ಮೆಂಟ್ ಕಮಿಟಿ ಪ್ರಾರಂಭ ಮಾಡಿಯೇ ಇಲ್ಲ. ಐದು ವರ್ಷಗಳಿಂದಲೂ ನಿರುದ್ಯೋಗವನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ನಿಮ್ಮ ಸರ್ಕಾರದ ಪಾಲಿಸಿ ಏನು ಎಂದು ಕೇಳುತ್ತಿದ್ದೇನೆ. ಎರಡನೆಯದಾಗಿ ಸ್ಪೆಷಲ್ ಕಾಂಪೋನೆಂಟ್ ಪ್ಲಾನ್‌ನಲ್ಲಿ ಕೇಂದ್ರಸರ್ಕಾರದವರು ನಿಮ್ಮ ವರ್ಗದವರಿಗೆ ವಿಶೇಷ ಘಟಕಗಳ ಯೋಜನೆಯಲ್ಲಿ ಹಣವನ್ನು ಕೊಟ್ಟಿದ್ದಾರೆ ತಾವು ಏನು ಮಾಡುತ್ತಿದ್ದೀರಿ ಅದನ್ನೆಲ್ಲಾ ಜಿಲ್ಲಾ ಪರಿಷತ್‌ಗೆ ಕಳಿಸಿದ್ದೀರಿ. ಜಿಲ್ಲಾ ಪರಿಷತ್‌ನಲ್ಲಿ ಮೊನ್ನೆ ಮೊನ್ನೆ ತಾನೇ ಮಾರ್ಚ್ ತಿಂಗಳವರೆಗೆ ಅದನ್ನು ಖರ್ಚು ಮಾಡಲಿಲ್ಲ. ಅದನ್ನು ಅಧಿಕಾರಿಗಳು ಕೊಟ್ಟೇ ಇಲ್ಲ. ಇವರು ಏನು ಕ್ರಮ ತೆಗೆದುಕೊಂಡಿಲ್ಲ ಎಂದು ಕಾಗದ ಬರೆದಿದ್ದಾರೆ ಪಾಪ ಇವರ ಮಾತು ಅಲ್ಲಿ ಯಾರು ಕೇಳುವುದಿಲ್ಲ ಎಂದು ಕಾಣಿಸುತ್ತದೆ. ಬೆಂಗಳೂರು ಅರ್ಬನ್ ಡಿಸ್ಟ್ರಿಕ್ಟ್ ತೆಗೆದುಕೊಂಡರೆ ಮೊನ್ನೆ, ಮೊನ್ನೆಯವರೆಗೂ ಕೂಡ ೬೯ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ ಇವರು ೨೨ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಖರ್ಚು ಮಾಡಿಲ್ಲವೆಂದು ತಗಾದೆ ಮಾಡಿದ್ದೇವೆ. ೩-೪ ಮೀಟಿಂಗ್ ಮಾಡಿ ಹಣವನ್ನು ಖರ್ಚುಮಾಡಿದ್ದಾರೆ ಈಗ ಸ್ಪೆಷಲ್ ಕಾಂಪೋನೆಂಟ್ ಪ್ರಕಾರ ಜಿಲ್ಲಾ ಪರಿಷತ್‌ಗೆ ಅಧಿಕಾರವನ್ನು ಕೊಟ್ಟಿದೆ ಡಿ.ಸಿ. ಅವರು ವಸೂಲಿ ಮಾಡುವುದನ್ನು ಬಿಟ್ಟು ಬಿಡಬೇಕು. ನಿಮ್ಮ ವರ್ಗದವರ ಬಗ್ಗೆ ತಾವು ಒಂದು ಹೇಳಿಕೆ ಕೊಟ್ಟಿದ್ದೀರಿ ಡಿ.ಸಿ ಯವರಿಗೆ ವಸೂಲಿ ಮಾಡುವುದನ್ನು ಬಿಟ್ಟು ಬಿಟ್ಟು ನೀವೇ ಹಣವನ್ನು ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯು ಇದೆ. ಅದರಲ್ಲಿ ನಮ್ಮ ಲೆಜಿಸ್ಲೇಟೀವ್ ಅಸೆಂಬ್ಲಿ ಮೆಂಬರ್ಸ್ ಇದ್ದಾರೆ ಆ ಕಮಿಟಿಯಲ್ಲಿ ಏನು ಶಿಫಾರಸ್ಸು ಮಾಡಿರುತ್ತಾರೆ ಎಂದರೆ ಯಾರಾದರೂ ಅಧಿಕಾರಿಗಳು, ಆ ಅಧಿಕಾರಿಗಳು ಏನಾದರೂ ಲೋಪಗಳನ್ನು ಮಾಡಿದ್ದರೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ತಾವು ಪ್ರಯತ್ನ ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ —ಮಾನ್ಯ ಅಧ್ಯಕ್ಷರೇ, ಮಾನ್ಯ ಬಸವಲಿಂಗಪ್ಪನವರು ವಿಶೇಷ ಘಟಕ ಯೋಜನೆಯ ಬಗ್ಗೆ ಪ್ರಸ್ತಾಪ ಮಾಡಿದರು ಈ ವಿಶೇಷ ಘಟಕ ಯೋಜನೆ ಬಹಳ ಪ್ರಾಮುಖ್ಯವಾದ ಯೋಜನೆ. ಇದು ಪರಿಶಿಷ್ಟ ಜಾತಿಯ ಜನರನ್ನು ಬಡತನದ ರೇಖೆಯಿಂದ ಮೇಲೆ ಎತ್ತುವಂತಹ ಒಂದು ಕಾರ್ಯಕ್ರಮ. ಇದರ ಅಡಿಯಲ್ಲಿ ನಾವು ೧೯೮೭-೮೮ರಲ್ಲಿ ೮೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ, ಈ ಸಲ ಒಂದು ಲಕ್ಷ ಜನರನ್ನು ಬಡತನದ ರೇಖೆಯಿಂದ ಮೇಲೆ ಎತ್ತಲು ನಾವು ಕ್ರಮ ತೆಗೆದುಕೊಂಡಿದ್ದೇವೆ ಈಗ ಈ ಅಧಿಕಾರ ಜಿಲ್ಲಾ ಪರಿಷತ್ತುಗಳಿಗೆ ಹೋಗಿದೆ. ಈ ದಿಶೆಯಲ್ಲಿ ಎಲ್ಲಾ ಮಂಡಲ ಪಂಚಾಯಿತಿಗಳು ಗ್ರಾಮ ಸಭೆಗಳನ್ನು ಕರೆದು ಫಲಾನುಭವಿಗಳನ್ನು ಗುರುತು ಮಾಡುವುದು ತಡವಾಗಿದೆ ಈಗ ಇದನ್ನು ರಿವ್ಯೂ ಮಾಡಲು ನಾವು ನಮ್ಮ ಅಧಿಕಾರಿಗಳನ್ನು ಕಳುಹಿಸಿಕೊಟ್ಟಿದ್ದೇವೆ. ಈಗ ಇದಕ್ಕೆ ಸಂಬಂಧಪಟ್ಟ ನಿಯಮವನ್ನು ರಿಲ್ಯಾಕ್ಸ್ ಮಾಡಿದ್ದೇವೆ. ನಾವು ಈಗ ಪ್ರಗತಿಯ ಹಂತದಲ್ಲಿದ್ದೇವೆ. ಈ ವರ್ಷದಲ್ಲಿ ಶೇಕಡ ೬೯ರಷ್ಟು ಗುರಿಯನ್ನು ಸಾಧಿಸಲಾಗುವುದು. ಇಲ್ಲಿ ೫ ಪರ್ಸೆಂಟ್ ಇಲ್ಲವೇ ಹತ್ತು ಪರ್ಸೆಂಟ್ ಹಣ ಲ್ಯಾಪ್ಸ್ ಆಗಬಹುದು. ಆದರೆ ನಾವು ಶೇಕಡಾ ೯೦ರಷ್ಟು ಹಣವನ್ನು ಉಪಯೋಗ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇದು ಕೇಂದ್ರ ಸರ್ಕಾರದ ಹಣ ಎಂದು ಮಾನ್ಯ ಬಸವಲಿಂಗಪ್ಪನವರು ಹೇಳಿದರು. ಆದರೆ ಇದರಲ್ಲಿ ಕೇಂದ್ರ ಸರ್ಕಾರದ್ದು ಹತ್ತು ಪರ್ಸೆಂಟ್ ಮಾತ್ರ. ಉಳಿದ ೯೦ ಪರ್ಸೆಂಟ್ ಹಣ ರಾಜ್ಯ ಸರ್ಕಾರದ್ದು. ೮೮ ಕೋಟಿ ರೂಪಾಯಿಗಳ ಪೈಕಿ ಕೇಂದ್ರದ್ದು ೮.೮ ಕೋಟಿ ರೂಪಾಯಿಗಳು ಮಾತ್ರ,

ಶ್ರೀ ಬಿ. ಬಸವಲಿಂಗಪ್ಪ.—ಇದರ ಬಗ್ಗೆ ನನ್ನ ಮನಸ್ಸಿನ ಹಿನ್ನೆಲೆ ಏನಿದೆ ಎಂಬುದನ್ನು ಮಾತ್ರ ಹೇಳಿದೆ ಇದರ ಅಧಿಕಾರವನ್ನು ಜಿಲ್ಲಾ ಪರಿಷತ್‌ಗಳಿಗೆ ಕೊಟ್ಟರೆ ಏನಾಗುತ್ತದೆಂದರೆ, ಜಿಲ್ಲಾ ಪರಿಷತ್‌ಗಳಲ್ಲಿರುವ ಪಟ್ಟಭದ್ರ ಹಿತಾಸಕ್ತಿಗಳಿಗೆ ಬಡವರ ಬಗ್ಗೆ ಕನಿಕರ ಇರುವುದಿಲ್ಲ. ಆದ್ದರಿಂದ ಇವರ ಅಧಿಕಾರವನ್ನು ಡಿ.ಸಿ.ಗಳಿಗೆ ಕೊಟ್ಟರೆ ಈ ಹಣ ಸರಿಯಾಗಿ ವ್ಯಯ ಆಗುತ್ತದೆಂದು ನನ್ನ ಅಭಿಪ್ರಾಯ. ಎಷ್ಟು ಹಣ ಖರ್ಚು ಮಾಡುತ್ತೀರಿ ಎಂಬುದು ಇಲ್ಲಿ ಮುಖ್ಯವಲ್ಲ. ಅದು ಸರಿಯಾದ ಫಲಾನುಭವಿಗಳಿಗೆ

ಮುಟ್ಟುವುದು ಮುಖ್ಯ. ಬೆಂಗಳೂರು ಜಿಲ್ಲೆಯಲ್ಲಿ ಮೊನ್ನೆಯವರೆಗೆ ಈ ಹಣವನ್ನು ಚಾರ್ಜ್ ಮಾಡಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದರಲ್ಲಿ ರಾಜ್ಯ ಸರ್ಕಾರದ್ದು ೯೦ ಪರ್ಸೆಂಟ್ ಹಣ ಇದೆ, ಕೇಂದ್ರ ಸರ್ಕಾರದ್ದು ಹತ್ತು ಪರ್ಸೆಂಟ್ ಹಣ ಇದೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. In South Kanara District under the Social Security and Welfare item the contribution of the Centre is Rs. 40.33 lakhs and the contribution of the State is Rs. 5.50 lakhs, now can you say what is the percentage of the State as well as the Centre ?

SRI G. BASAVANNAPPA.—It is a different one. Regarding Special Component plan I am fully aware as a Social Welfare Minister.

SRI M. VEERAPPA MOILY.—Special Component plan also comes under this. I will send it to you. If you want to rebut, you can. But, plase do not mislead the House.

SRI G. BASAVANNAPPA.—I am not misleading the house. Now question of misleading. I have reviewed this on several occassions.

SRI M. VEERAPPA MOILY.—Please don't mislead the House.

SRI G. BASAVANNAPPA.—If I have mislead the House I will take back my words. But it is a fact.

ಶ್ರೀ ಆರ್. ವೆಂಕಟರಾಮಯ್ಯ.—ಕೆಲವರು ಕೋರ್ಟಿನಲ್ಲಿ ಸ್ಟೇ ತೆಗೆದುಕೊಂಡಿರುವ ಕಾರಣ ಸುಮಾರು ೩೨ ಕೋಟಿ ರೂಪಾಯಿಗಳಷ್ಟು ಬಾಕಿ ಇದೆ ಎಂದು ಹೇಳಿದರು. ಈ ಬಗ್ಗೆ ಅಡ್ವೊಕೇಟ್ ಜನರಲ್ ಅವರ ಮೂಲಕ ಹೈಕೋರ್ಟಿನಲ್ಲಿ ಮೂವ್ ಮಾಡಿಸಿ ಇದಕ್ಕಾಗಿ ಒಂದು ಸ್ಪೆಷಲ್ ಬೆಂಚನ್ನು ಏತಕ್ಕೆ ಸ್ಥಾಪನೆ ಮಾಡಿಸಬಾರದು ? ಈ ಸ್ಪೆಷಲ್ ಬೆಂಚ್ ಮೂಲಕ ಇಂತಹ ಕೇಸ್‌ಗಳನ್ನು ಒಂದೆರಡು ತಿಂಗಳಲ್ಲಿಯೇ ತೀರ್ಮಾನ ಮಾಡಿಸುವುದಕ್ಕೆ ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು ?

ಇನ್ನು ನೀರನ್ನು ಯಾರು ತೆಗೆದುಕೊಳ್ಳುತ್ತಾರೆ. ಅವರು ಕಂದಾಯ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಅವೊತ್ತು ಇದೇ ಪ್ರಶ್ನೆಯನ್ನು ನಾನು ಇಲ್ಲಿ ಪ್ರಸ್ತಾಪ ಮಾಡಿದಾಗ ಸಭೆಯಲ್ಲಿ ಮುಖ್ಯಮಂತ್ರಿಗಳು ಇರಲಿಲ್ಲ. ಸಭೆಯಲ್ಲಿ ಆ ದಿನ ಹಾಜರಿದ್ದ ಶ್ರೀ ಬೊಮ್ಮಾಯಿ ಅವರು 'ಗೌಡರು ಬುಕ್ ಮಾಡುತ್ತಾರೆ, ಅದನ್ನು ಶಾನುಭೋಗರು ವಸೂಲಿ ಮಾಡುತ್ತಾರೆ ಎಂದು ಹೇಳಿದರು. ಆದರೆ ನಮ್ಮ ಕಡೆ ನೀರನ್ನು ಕೊಡದಿದ್ದರೂ ಸಹ ನೀರಿನ ಕಂದಾಯವನ್ನು ವಸೂಲಿ ಮಾಡುತ್ತಿದ್ದಾರೆ. ಆದ್ದರಿಂದ ಇದನ್ನು ನಿಲ್ಲಿಸುವುದಕ್ಕೆ ತಾವು ತಕ್ಷಣ ಆರ್ಡರ್ ಮಾಡುತ್ತೀರಾ ?

ಇನ್ನು ಹರಿಯಾಣ ರಾಜ್ಯದ ಮುಖ್ಯಮಂತ್ರಿಗಳು ಇವರ ಸ್ನೇಹಿತರು. ಅವರು ಆ ರಾಜ್ಯದಲ್ಲಿ ರೈತರ ಸಾಲವನ್ನು ರದ್ದು ಮಾಡುವುದಾಗಿ ಹೇಳಿದರು. ಆದರೆ ನೀವು ಇಲ್ಲಿ ನಮ್ಮ ರೈತರಿಗೆ ಸಾಲ ವಾಪಸ್ ಮಾಡಲು ಜೂನ್ ತಿಂಗಳವರೆಗಾದರೂ ಕಾಲವಕಾಶ ಮಾಡಿ ಕೊಡಿ ಎಂದು ಕೇಳಿಕೊಳ್ಳುತ್ತೇನೆ.

೧–೩೦ ಪಿ. ಎಂ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಮೊಯ್ಲಿಯವರು ಕರ್ನಾಟಕ ಪರ್‌ಕ್ಯಾಪಿಟ ಔಟ್ಲೇ-ಪ್ಲಾನ್ ಔಟ್ಲೇ ಆಲ್ ಇಂಡಿಯಾ ಆವರೇಜ್‌ಗಿಂತ ಮೊದಲು ಹೆಚ್ಚು ಇತ್ತು, ಈಗ ಕಡಿಮೆಯಾಗಿದೆ ಎಂದು ಹೇಳಿದರು. ಅವರು ಯಾವ ಆಧಾರದ ಮೇಲೆ ಅಂಕಿ ಸಂಖ್ಯೆ ತೆಗೆದುಕೊಂಡರೋ ಗೊತ್ತಿಲ್ಲ. ಅದನ್ನು ಹೇಳಿಬಿಡುತ್ತೇನೆ.

ಪ್ಲಾನ್	ಆಲ್ ಇಂಡಿಯಾ ಅವರೇಜ್	ಕರ್ನಾಟಕ
ಫಸ್ಟ್ ಪ್ಲಾನ್	ರೂ. ೫೮	ರೂ. ೬
ಸೆಕೆಂಡ್ ಪ್ಲಾನ್	ರೂ. ೭೪	ರೂ. ೬೨
ಥರ್ಡ್ ಪ್ಲಾನ್	ರೂ. ೧೦೭	ರೂ. ೧೦೦
ಅನ್ಯುವಲ್ ಪ್ಲಾನ್ (೧೯೬೬ ರಿಂದ ೬೯ರವರೆಗೆ)	ರೂ. ೮೪	ರೂ. ೭೦
ಫೋರ್ತ್ ಪ್ಲಾನ್	ರೂ. ೧೭೯	ರೂ ೧೪೬
ಫಿಫ್ತ್ ಪ್ಲಾನ್	ರೂ. ೪೫೬	ರೂ. ೩೮೨
ಅನ್ಯುವಲ್ ಪ್ಲಾನ್ಸ್-೧೯೭೯-೮೦	ರೂ. ೧೪೨	ರೂ. ೧೨೧
ಸಿಕ್ಸ್ತ್ ಪ್ಲಾನ್	ರೂ. ೯೪	ರೂ. ೬೪೭

ಸೆವೆನ್ತ್ ಪ್ಲಾನ್ ೧೯೮೫-೯೦ ಅದು ಹೆಚ್ಚು ಕಡಿಮೆಯಾಗಿದೆ ಒಪ್ಪುತ್ತೇನೆ. ಆಲ್ ಇಂಡಿಯಾ ಅವರೇಜಿಗಿಂತ ಕರ್ನಾಟಕದ ಪರ್ ಕ್ಯಾಪಿಟ ಔಟ್ಲೇ ಹೆಚ್ಚು ಆಗಲಿಲ್ಲ, ಆದರೆ ಇದಕ್ಕೆ ನಾವು ನಿರಾಶೆಯಾಗಬೇಕಾದ್ದಿಲ್ಲ. ಆಲ್ ಇಂಡಿಯಾ ಅವರೇಜ್ ಎಂದು ಯಾವಾಗ ಹೇಳುತ್ತೇವೆ ಅಂದರೆ ಡೆವಲಪ್ಡ್ ಸ್ಟೇಟ್ಸ್‌ಗೆ ಸಂಬಂಧಪಟ್ಟಿದಾಗ ಹೇಳುತ್ತೇವೆ. ಬ್ಯಾಕ್‌ವರ್ಡ್ ಸ್ಟೇಟ್ಸ್ ಆಂಧ್ರ, ಬಿಹಾರ, ಕೇರಳ, ಮಧ್ಯ ಪ್ರದೇಶ, ಒರಿಸ್ಸ, ರಾಜಸ್ಥಾನ, ತಮಿಳುನಾಡು ಮತ್ತು ಉತ್ತರ ಪ್ರದೇಶ. ಈ ರಾಜ್ಯಗಳನ್ನು ಬ್ಯಾಕ ವರ್ಡ್ ರಾಜ್ಯಗಳು ಎಂದು ಕ್ಯಾಟಗರೈಸ್ ಮಾಡಿದ್ದಾರೆ. ಡವಲಪ್ಡ್ ಸ್ಟೇಟ್ಸ್.—ಗುಜರಾತ್. ಹರಿಯಾಣ ಕರ್ನಾಟಕ ಮಹಾರಾಷ್ಟ್ರ, ಪಂಜಾಬ್ ಮತ್ತು ವೆಸ್ಟ್ ಬೆಂಗಾಲ್ ಬರುತ್ತದೆ, ಇವುಗಳ ಹೊರತಾಗಿ ಸ್ಪೆಷಲ್ ಕ್ಯಾಟಗರಿ ಸ್ಟೇಟ್ಸ್ ಅದರಲ್ಲಿ ಅಸ್ಸಾಂ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಮಣಿಪುರ, ಮೇಘಾಲಯ ನಾಗಾಲ್ಯಾಂಡ್, ಸಿಕ್ಕಿಂ ಮತ್ತು ತ್ರಿಪುರ. ಇದರ ಜೊತೆಗೆ ನಾವು ಹೋಲಿಸಿದರೆ ನಮ್ಮದು ಬಹಳ ಮೇಲಿನ ಸ್ಥಾನದಲ್ಲಿದೆ. ಅಭಿವೃದ್ಧಿ ಹೊಂದಿದಂಥ ರಾಜ್ಯಗಳ ಪಟ್ಟಿಯಲ್ಲಿದೆ ನಮ್ಮದು ಇದೆ. ಬಾಕಿ ಎಲ್ಲ ಒಟ್ಟಿಗೆ ನೋಡಿದಾಗ ನಮ್ಮದು ಕಡಿಮೆಯಾಗುತ್ತದೆ ಇದು ನಿಜ ಆಮೇಲೆ ಮಾನ್ಯ ಖರ್ಗೆಯವರು ಕೇಳಿದರು. ಈಗ ನೀರಾವರಿ ವಿಚಾರದಲ್ಲಿ ನಾನು ಕರೆಕ್ಟ್ ಫಿಗರನ್ನು ಕೊಡಲಿಕ್ಕೆ ಬಯಸುತ್ತೇನೆ. ೧೯೭೮-೭೯ರಲ್ಲಿ ೫೩ ಕೋರ್ಸ್ ಹೆಕ್ಟೇರ್ಸ್ ಪೊಟೆನ್‌ಷಿಯಲ್ ಕ್ರಿಯೇಟ್ ಆಗಿರತಕ್ಕದ್ದು. ಒಟ್ಟು ೧೯೭೮-೭೯ ರಿಂದ ೧೯೮೨-೮೩ರವರೆಗೆ ಪೊಟೆನ್‌ಷಿಯಲ್ ಕ್ರಿಯೇಟ್ ಆಗಿರತಕ್ಕದ್ದು ೨ ೬೧.೦೦೦ ಹೆಕ್ಟೇರ್ಸ್. ೧೯೮೩-೮೪ ರಿಂದ ೧೯೮೭-೮೮ವರೆಗೆ ೨ ೫೨,೦೦೦ ಹೆಕ್ಟೇರ್ಸ್ ಹೆಚ್ಚು ಕಡಿಮೆ ಇಷ್ಟೇ ಆಗಿದೆ ಎಂದು ಹೇಳುತ್ತೇನೆ ಆಮೇಲೆ ಮಾನ್ಯ ಬಸವಲಿಂಗಪ್ಪನವರು, ನೀವು ಉದ್ಯೋಗದ ವಿಚಾರದಲ್ಲಿ ಏನು ಹೇಳಿದ್ದೀರಿ ಎಂದು ಕೇಳಿದರು ಇದು ಅತ್ಯಂತ ಮಹತ್ವವಾದಂಥ ಪ್ರಶ್ನೆ ಈ ಪ್ರಶ್ನೆಗೆ ನಾನು ಹಿಂದೆ ಕೂಡ ಒಂದೆರಡು ಸಲ ಉತ್ತರ ಕೊಟ್ಟಿದ್ದೇನೆ. ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಒಂದು ಕುಟುಂಬಕ್ಕೆ ಕನಿಷ್ಟ ಒಂದು ಉದ್ಯೋಗವನ್ನು ಕೊಡುತ್ತೇವೆ ಎಂದು ಹೇಳಿದ್ದೇವೆ. ಈಗ ಅದರ ಬಗ್ಗೆ ಸರ್ವೆ ಮಾಡಿಸಬೇಕು ಎಂದು ತೀರ್ಮಾನ ಮಾಡಿದ್ದೇನೆ. ಒಬ್ಬರಾದರೂ ಉದ್ಯೋಗಸ್ಥರು ಇಲ್ಲದೇ ಇರುವ ಕುಟುಂಬವನ್ನು ಹುಡುಕಿ ತೆಗೆಯಲಿ ಎಂದು. ಈಗಲೂ ಕೂಡ ಸರ್ಕಾರದಲ್ಲಿ ಹುದ್ದೆಗಳು ಖಾಲಿ ಇವೆ. ಅವುಗಳನ್ನು ತುಂಬಲಿಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರೆಂದು ಕೇಳಿದ್ದಾರೆ,

ಶ್ರೀ ಎಂ. ವೀರಪ್ಪಮೊಯಿಲಿ.—ಇದರ ಬಗ್ಗೆ ಬ್ಯಾನ್ ಆರ್ಡರ್ ಇದೆ.

ಶ್ರೀ ರಾಮಕೃಷ್ಣ ಹೆಗಡೆ.–೮೬ನೇ ಇಸವಿಯಿಂದಲೂ ಬ್ಯಾನ್ ಆರ್ಡರ್ ಇದೆ. ಕಳೆದ ೫ ವರ್ಷಗಳ ಅವಧಿಯಲ್ಲಿ ಸುಮಾರು ೬೦,೬೩೭ ಹುದ್ದೆಗಳನ್ನು ತುಂಬಿದ್ದೇವೆ. ನಾವು ಅಧಿಕಾರಕ್ಕೆ ಬರುವಾಗ ಸುಮಾರು ೫೫,೦೦೦ ಹುದ್ದೆಗಳು ಖಾಲಿ ಇದ್ದವು ಅಂದರೆ, ಅದಕ್ಕೂ ಹೆಚ್ಚು ಹುದ್ದೆಗಳನ್ನು ತುಂಬಿದ್ದೇವೆ. ನಾಲ್ಕೂವರೆ ಲಕ್ಷ, ೫ ಲಕ್ಷ ಸರ್ಕಾರಿ ನೌಕರರು ಇರುವಾಗ ತುಸು ಹೆಚ್ಚು ಕಡಿಮೆ ಶೇ. ೧೦ರಷ್ಟು ಹುದ್ದೆಗಳು ಖಾಲಿ ಇರುವಂಥಾದ್ದು ಸ್ವಾಭಾವಿಕ. ಇದು ಎಲ್ಲಾ ಕಡೆ ಇರುತ್ತದೆ. ಅಂದರೆ ೪೦-೪೫ ಸಾವಿರ ಹುದ್ದೆಗಳು ಖಾಲಿ ಇರುತ್ತವೆ. ನಿವೃತ್ತಿ ಹೊಂದುವವರು, ಪ್ರೊಮೋಷನ್ ಕೊಟ್ಟಾಗ ಬೇರೆ ಬೇರೆ ಯೋಜನೆಗಳನ್ನು ತಂದಾಗ ಹೊಸ ಹುದ್ದೆಗಳು ನಿರ್ಮಾಣವಾಗುತ್ತವೆ. ಇಲಾಖೆಯನ್ನು ವಿಸ್ತರಣೆ ಮಾಡಿದಾಗ ಹೊಸ ಹುದ್ದೆಗಳು ನಿರ್ಮಾಣವಾಗುತ್ತವೆ.

ಶ್ರೀ ಬಿ. ಬಸವಲಿಂಗಪ್ಪ.—ಸುಮಾರು ೪೪ ಸಾವಿರ ಹುದ್ದೆಗಳು ಖಾಲಿ ಇರುವ ವಿಚಾರವನ್ನು ಹೇಳಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ —ಖಾಲಿ ಇರುವಂಥ ಹುದ್ದೆಗಳನ್ನು ತುಂಬಲಿಕ್ಕೆ ಪ್ರಯತ್ನ ಮಾಡಿದ್ದೇವೆ, ಅದು ನಿರಂತರವಾಗಿ ನಡೆಯುತಕ್ಕ ಕ್ರಮ.

ಶ್ರೀ ಎಂ. ವೀರಪ್ಪಮೊಯಿಲಿ —ಎಕಾನಮಿ ಆರ್ಡರ್ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನು ರಿಲೇಕ್ಸ್ ಮಾಡಿದ್ದೇವೆ.

SRI M. VEERAPPA MOILY.—There was a GO dated 10th November 1987. As per that, no posts should be created in the remaining period of the Seventh Plan and Vacant posts should not be filled up.

SRI RAMAKRISHNA HEGDE. -That is out of date. I will show you right now. In January 1988, it has been issued. ಇಂಥ ವಿಚಾರದಲ್ಲಿ ಮೊಯಿಲಿಯವರು ಬಹಳ ಹುಷಾರಾಗಿರುತ್ತಾರೆ. ತಮಗೆ ಅನುಕೂಲವಾಗಿರತಕ್ಕ ಆರ್ಡರ್ ಕಾಪಿ ಇಟ್ಟುಕೊಂಡುಬಂದು ಬರುತ್ತಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಹಣಕಾಸಿನ ಇಲಾಖೆಯ ಒಪ್ಪಿಗೆ ಪಡೆಯಬೇಕೆಂದು ಇದೆ

ಶ್ರೀ ರಾಮಕೃಷ್ಣ ಹೆಗಡೆ.—ಅದು ಯಾವಾಗಲೂ ಇರುತ್ತದೆ

ಶ್ರೀ ಎಂ. ವೀರಪ್ಪಮೊಯಿಲಿ,—ಜನವರಿ ೮೮ರ ಆರ್ಡರ್‌ಗೆ ಸಂಬಂಧಪಟ್ಟಂತೆ ಮಾಡಿಫಿಕೇಷನ್ ಆರ್ಡರ್ ಇಷ್ಯೂ ಮಾಡಲಾಗಿದೆಯೆ ?

ಶ್ರೀ ರಾಮಕೃಷ್ಣ ಹೆಗಡೆ.—ಅದರ ಕಾಪಿಯನ್ನು ಅವರಿಗೆ ಕಳುಹಿಸಿಕೊಡುತ್ತೇನೆ. I will send you a copy in about an hour.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾಳಿ ಭಾಗ್ಯದಂತ ಒಳ್ಳೆಯ ಯೋಜನೆಯನ್ನು ಸರ್ಕಾರದವರು ನಿಲ್ಲಿಸುವುದಕ್ಕೆ ಕಾರಣವೇನು ? ಹಣಕಾಸಿನ ತೊಂದರೆಯಿಂದ ನಿಲ್ಲಿಸಲಾಗಿದೆಯೆ ? ಅಲ್ಪಸಂಖ್ಯಾತರಿಗೆ ಈ ಸೌಲಭ್ಯ ಸಿಗುವುದಿಲ್ಲ, ಅವರ ಮನಸ್ಸಿಗೆ ನೋವಾಗುತ್ತದೆಂಬ ಕಾರಣಕ್ಕಾಗಿ ನಿಲ್ಲಿಸಲಾಗಿದೆಯೆ ? ಬೇರೆ ಯೋಜನೆ ಮಾಡುತ್ತೇವೆಂದು ಹೇಳಿದ್ದೀರಿ, ಯಾವ ಯೋಜನೆ ಮಾಡುತ್ತೀರೆಂಬುದನ್ನು ಸ್ಪಷ್ಟವಾಗಿ ಹೇಳಬೇಕು ತಾಳಿ ಭಾಗ್ಯ ಯೋಜನೆಯನ್ನು ಜನಹಿತದೃಷ್ಟಿಯಿಂದ ಮುಂದುವರಿಸುವುದು ಒಳ್ಳೆಯದು ಸಿ.ಐ.ಟಿ.ಬಿ., ಎಪಿಎಂಸಿ, ಮುಂಜರಾಯಿ ಇಲಾಖೆಗಳಲ್ಲಿ ಡಿಪಾಸಿಟ್ ಇಟ್ಟಿದ್ದ ೫೦ ಕೋಟಿ ರೂಪಾಯಿಗಳನ್ನು ಬಡ್ಡಿ ಮೇಲೆ ತೆಗೆದುಕೊಂಡಿದ್ದ ಹಣವನ್ನು ಎಷ್ಟು ವಾಪಸ್ಸು ಮಾಡಲಾಗಿದೆ ? ಕಳೆದ ನಾಲ್ಕು ವರ್ಷದಿಂದ ಭೀಕರ ಬರಗಾಲಕ್ಕೆ ತುತ್ತಾಗಿರುವ ರೈತರ ಸಾಲದ ವಸೂಲಿಯನ್ನು ೩೦-೬-೮೮ರವರೆಗೆ ವಿಸ್ತರಣೆ ಮಾಡಲೇಬೇಕೆಂದು ಕೇಳಿಕೊಳ್ಳುತ್ತೇನೆ. ಅನುಕೂಲ ಇರುವ ರೈತರು ಹಣ ಕಟ್ಟುತ್ತಾರೆ.

ಶ್ರೀಮತಿ ಮೆಹರುನ್ನಿಸಾ.—ಸನ್ಮಾನ್ಯ ಅಧ್ಯಕ್ಷರೆ, I would like to know what are all the measures taken by the Government for the welfare of the women. ಇಲ್ಲಿ ೧೦ ಜನ ವುಮೆನ್ಸ್ ಇದ್ದಾರೆ ಅವರ ಬಗ್ಗೆ ಏನು ಒಂದು ಮಾತು ಹೇಳಲಿಲ್ಲ. There was a proposal to set up separate Women Finance Development Corporation. That has not been materialised. ಅದು ಆಗಲಿಲ್ಲ. There was a proposal to set up women Courts to deal with the offences of dowry deaths. ತಾಳಿ ಭಾಗ್ಯದ ಬಗ್ಗೆ You have given up that scheme. I compliment. ಇದರ ಬದಲು ಏನು ಬೆನಿಫಿಟ್, ಏನು ಸ್ಕೀಮುಗಳನ್ನು ಮಾಡಿದ್ದಾರೆಂದು ಹೇಳಲಿಲ್ಲ." Child is very important. Children are employed in factories. It is against the laws of the Labour Department. ಚೈಲ್ಡ್ ಬಗ್ಗೆ ತಾವು ಏನನ್ನೂ ಹೇಳಲಿಲ್ಲ. Minority Development Corporation and ವುಮೆನ್ಸ್ ಡೆವಲಪ್‌ಮೆಂಟ್ ಕಾರ್ಪೊರ

ರೇಷನ್ ಇದೆ ಅದು ಏನು ಡೆವಲಪ್‌ಮೆಂಟ್ ಆಗುತ್ತಿದೆಯೋ ಗೊತ್ತಿಲ್ಲ. ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಬಗ್ಗೆ ಏನೂ ಹೇಳಲಿಲ್ಲ. ಮೈನಾರಿಟಿ ಕಮೀಷನ್ ಬಗ್ಗೆ ೫ ವರ್ಷದಿಂದ ರಿಪೋರ್ಟ್ ಪ್ರಿಂಟ್ ಆಗುತ್ತದೆ, ಅದರ ರಿಪೋರ್ಟ್ ಹೌಸ್‌ಗೂ ಸಬ್‌ಮಿಟ್ ಮಾಡಲಿಲ್ಲ. ೫ ವರ್ಷದಿಂದ ನಮಗೆ ರಿಪೋರ್ಟ್ ಸಿಕ್ಕಿಲ್ಲ. Then rehabilitation of sick industries, I would like to know the measures taken by you. ಸಿಕ್ ಇಂಡಸ್ಟ್ರೀಸ್, ಅದು ಬಹಳ ಮುಖ್ಯ ಇದೆ ಇವತ್ತು ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುತ್ತಿದ್ದ ವರ್ಕರ್ಸ್ ಬೀದಿ ಪಾಲು ಏನಾಗಿದ್ದಾರೆ ಅವರ ಬಗ್ಗೆ ಏನು ಮಾಡುತ್ತೀರಿ? ಇನು ಮಾಸ್ ಕಮ್ಯುನಿಕೇಷನ್ ಎಂದು ಹಾಕಿದ್ದೀರಿ ಮಾಸ್ ಕಮ್ಯುನಿಕೇಷನ್‌ನಲ್ಲಿ ಅರ್ಜೆಂಟ್ ಮೆಜರ್ ಏನು ತೆಗೆದುಕೊಳ್ಳುತ್ತೀರಿ ಎಂದು ಹೇಳಬೇಕು, ನಾವು ಮಾನ್ಯ ಮುಖ್ಯಮಂತ್ರಿಗಳಿಗೆ ಫೋನ್ ಮಾಡಬೇಕೆಂದರೆ ಫೋನ್‌ನಲ್ಲಿ ಸಿಕ್ಕುವುದಿಲ್ಲ, ನಾವು ಏನು ಮಾಡಬೇಕು?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಮುಖ್ಯಮಂತ್ರಿಗಳು ಕಳೆದ ವರ್ಷದ ಆಯವ್ಯಯದ ಭಾಷಣದಲ್ಲಿ ಈ ವರ್ಷದ ಆಯವ್ಯಯದ ಭಾಷಣದಲ್ಲಿ ಶೂನ್ಯಾಧಾರಿತ ಬಡಜೆಟ್ಟಿನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಅದರ ಕಡಿತಕ್ಕೊಳಗಾದ ಸ್ಕೀಮುಗಳು ಯಾವುವು? ಈ ಜೀರೋ ಬೇಸಡ್ ಬಡ್ಜೆಟ್ ನಿಂದ ಸೇವಿಂಗ್ಸ್ ಮಾಡುತ್ತೇವೆಂದು ಈ ಸಾರಿ ಹೇಳಿದ್ದೀರಿ. ಹೋದವರ್ಷ ತಾವು ಯಾವ ಯಾವ ಸೇವಿಂಗ್ಸ್ ಮಾಡಿದ್ದೀರಿ. ಅದರ ವಿವರಗಳು ಏನು, ಇದರಿಂದ ಯಾವ ಯೋಜನೆಗಳು ಕಡಿತಕ್ಕೆ ಒಳಗಾಗಿವೆ. ಅದರಿಂದಾಗಿ ಸರ್ಕಾರ ಉಳಿತಾಯ ಮಾಡಿರತಕ್ಕ ಹಣ ಎಷ್ಟು ಎಂದು ತಿಳಿದುಕೊಳ್ಳುವುದಕ್ಕೆ ನಾನು ಬಯಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನಾವು ಕಳೆದ ವರ್ಷ ಜೀರೋ ಬಡ್ಜೆಟ್ ಅನ್ವಯಿಸಬೇಕೆಂದು ಹೇಳಿ ಜೀರೋ ಬೇಸಡ್ ಬಡ್ಜೆಟ್ ಮಾಡಬೇಕೆಂದು ಮಾಡಿದ್ದುದು ನಿಜ. ಇದರಿಂದ ಸುಮಾರು ೩೦ ಕೋಟಿ ರೂಪಾಯಿಂಗಳಷ್ಟು ಹಣವನ್ನು ಉಳಿಸಬಹುದೆಂದು ಯೋಚನೆಯನ್ನು ಮಾಡಿದ್ದೆವು. ಕೇವಲ ೪ ಕೋಟಿ ರೂಪಾಯಿಗಳಷ್ಟು ಈಗ ಉಳಿತಾಯವಾಗಿದೆ. ಪ್ರತಿಯೊಂದು ಡಿಪಾರ್ಟ್‌ಮೆಂಟಿನವರು ಇದೊಂದು ಮಹತ್ವವಾದುದು ಇದನ್ನು ತೆಗೆದುಹಾಕುವುದಕ್ಕೆ ಬರುವುದಿಲ್ಲ ಎಂದು ಆರ್ಗ್ಯುಮೆಂಟ್ ಮಾಡಿದರು. ಆದ್ದರಿಂದ ಅದರ ಬಗ್ಗೆ ಇನ್ನೂ ಪೆರೂಸ್ ಮಾಡುತ್ತಿದ್ದೇವೆ ಇನ್ನು ಶ್ರೀಮತಿ ಮುಕ್ತರುನ್ನಿಸಾ ಬೇಗಂ ಅವರು ನಾಲ್ಕಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಭಾಷಣ ಮಾಡಿದ್ದರೆ ಚೆನ್ನಾಗಿತ್ತು. ಅವರು ಕನ್ನಡದಲ್ಲಿಯೇ ಸುಂದರವಾಗಿ ಮಾತನಾಡಿರುವುದರಿಂದ ಅದಕ್ಕೆ ನಾನು ಕಾಂಪ್ಲಿಮೆಂಟ್ಸ್ ಕೊಡುತ್ತೇನೆ. ಅವರು ಮಾತನಾಡುವಾಗ ಚೈಲ್ಡ್ ಲೇಬರ್ ಪದ್ಧತಿ ಏನು ಇದೆ ಅದನ್ನು ನಿಲ್ಲಿಸಲಿಕ್ಕೆ ಏನು ಮಾಡಿದ್ದೀರಿ ಎಂದು ಕೇಳಿದರು ಅದರ ಬಗ್ಗೆ ಒಂದು ಕಮಿಟಿ ಮಾಡಿದ್ದೇವೆ. ಅವರ ರೆಕಮೆಂಡೇಷನ್ ಬಂದಿದೆ, ಅದನ್ನು ಎಷ್ಟರಮಟ್ಟಿಗೆ ಜಾರಿಯಲ್ಲಿ ತರಬಹುದು. ಯಾವುದನ್ನು ಒಪ್ಪಬಹುದು ಯಾವುದನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ ಎನ್ನುವ ಬಗ್ಗೆ ಸಂಬಂಧಪಟ್ಟ ಖಾತೆಯವರು ನೋಡುತ್ತಿದ್ದಾರೆ.

ಇನು ಇಲ್ಲಿ ೧೦ ಜನ ಮಹಿಳಾ ಸದಸ್ಯರು ಇದ್ದಾರೆ ಇವರ ಬಗ್ಗೆ ಏನೂ ಹೇಳಲಿಲ್ಲ, ಅಂದರೆ ಸ್ತ್ರೀಯರ ಬಗ್ಗೆ ಏನೂ ಹೇಳಲಿಲ್ಲ ತಾಳಿಭಾಗ್ಯದ ಯೋಜನೆಯ ಬಗ್ಗೆ ಏನು ಮಾಡುತ್ತೀರಿ ಎಂದು ಮಾನ್ಯ ಸದಸ್ಯರು ಕೇಳಿದರು. ಇದೇ ವಿಚಾರವನ್ನು ಮಾನ್ಯ ಸದಸ್ಯರಾದ ಯಡಿಯೂರಪ್ಪನವರೂ ಕೂಡ ಕೇಳಿದರು. ಇದಕ್ಕೆ ನಾನಾದರೂ ಹೇಳಬಯಸುತ್ತೇನೆ, ಹೆಣ್ಣು ಮಕ್ಕಳ ಅಭಿವೃದ್ಧಿ ನಿಗಮ ಎಂದು ಇದೆ. ಇದಕ್ಕೆ ಒಬ್ಬರನ್ನು ಅಧ್ಯಕ್ಷರನ್ನಾಗಿ ನಾವು ನೇಮಿಸಿದ್ದೇವೆ, ತಾಳಿಭಾಗ್ಯದ ಯೋಜನೆಯಲ್ಲಿ ನಾವು ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದೆವು ಅದೇ ಹಣವನ್ನು ಈ ನಿಗಮದ ಮುಖಾಂತರ ಬೇರೆ ಬೇರೆ ಉದ್ದೇಶಗಳಿಗೆ ವಿನಿಯೋಗಿಸಬೇಕೆಂದಿದ್ದೇವೆ. ಈ ದಿಸೆಯಲ್ಲಿ ಯಾವ ಯಾವ ಹೊಸ ಸ್ಕೀಂಗಳನ್ನು ತೆಗೆದುಕೊಳ್ಳಬಹುದೆಂಬುದನ್ನು ಸೂಚಿಸಿ ಎಂದು ಅವರನ್ನು ಕೇಳಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ —ತಾಳಿಭಾಗ್ಯ ಯೋಜನೆಯನ್ನು ನೀವು ಕೈಬಿಟ್ಟಿದ್ದಕ್ಕೆ ಕಾರಣ ವೇನು? ಎಂಬುದನ್ನು ಹೇಳುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಇದೇ ಕಾರಣ. ನಮ್ಮ ಈ ಯೋಜನೆ ರಾಜ್ಯದ ಎಲ್ಲಾ ಜನರಿಗೂ ಸಾರ್ವತ್ರಿಕವಾಗಿ ಉಪಯೋಗವಾಗುವುದಿಲ್ಲ. ನಮ್ಮ ಕರ್ನಾಟಕದಲ್ಲಿ ಅನೇಕ ಜಾತಿಯ ಜನರಿದ್ದಾರೆ.

ಅವುಗಳ ಪೈಕಿ ಕೆಲವು ಜಾತಿಯವರು ಆ ತಾಳಿಯನ್ನು ಉಪಯೋಗ ಮಾಡುತ್ತಾರೆ, ಮತ್ತೆ ಹಲವಾರು ಜಾತಿಯವರು ಈ ತಾಳಿಯನ್ನು ಉಪಯೋಗ ಮಾಡಿಕೊಳ್ಳುವುದಿಲ್ಲ ಈ ನಮ್ಮ ಯೋಜನೆಯ ಉಪಯೋಗ ಎಲ್ಲಾ ಜನರಿಗೂ ಆಗದೇ ಇದ್ದುದರಿಂದ ನಾವು ಇದನ್ನು ನಿಲ್ಲಿಸಬೇಕಾಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಈ ರಾಜ್ಯದ ಮಹಿಳೆಯರ ಬಗ್ಗೆ ಚಿಂತನೆಯನ್ನು ಮಾಡಿ ಬಡವರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಈ ತಾಳೀಭಾಗ್ಯದ ಯೋಜನೆಯನ್ನು ತಂದಿರಿ. ಯಾರು ತಾಳಿಯನ್ನು ಕಟ್ಟಿಕೊಳ್ಳುತ್ತಾರೆ ಅವರಿಗೆ ಅನುಕೂಲವಾಗುತ್ತಿದೆ ಯಾರು ತಾಳಿಯನ್ನು ಕಟ್ಟಿಕೊಳ್ಳುವುದಿಲ್ಲ ಅವರಿಗೆ ಕೊಡಬೇಡಿ. ಪವಿತ್ರವಾದ ಭಾವನೆಯನ್ನು ಯಾರು ತಾಳಿಯ ಬಗ್ಗೆ ಇಟ್ಟು ಕೊಂಡಿದ್ದಾರೆ ಅವರು ಕಟ್ಟಿಕೊಳ್ಳುತ್ತಾರೆ, ಆದರೆ ಯಾರೋ ಕೆಲವರು ಕಟ್ಟಿಕೊಳ್ಳುವುದಿಲ್ಲವೆಂದು ಈ ಯೋಜನೆಯನ್ನೇ ನಿಲ್ಲಿಸಿದ್ದುದು ಸರಿಯೆ?

ಶ್ರೀ ರಾಮಕೃಷ್ಣ ಹೆಗಡೆ.—ಇದು ಸಾರ್ವಜನಿಕರ ದುಡ್ಡು. ಆದ್ದರಿಂದ ಈ ಹಣದ ಉಪಯೋಗ ರಾಜ್ಯದ ಎಲ್ಲಾ ಜಾತಿಯ ಜನರಿಗೂ ಅನುಕೂಲ ಆಗಬೇಕೆಂಬ ಉದ್ದೇಶದಿಂದ ನಾವು ಈ ಯೋಜನೆಯನ್ನು ಮಾಡಿದ್ದೇವೆ ನಾವು ಕೈಗೊಳ್ಳುವ ಯಾವುದೇ ಯೋಜನೆ ಆಗಲಿ ಅದು ರಾಜ್ಯದ ಎಲ್ಲಾ ವರ್ಗದ ಜನರಿಗೂ, ಎಲ್ಲಾ ಜಾತಿಯ ಜನರಿಗೂ ಉಪಯೋಗ ಆಗಬೇಕು. ನಮಗೆ ಆ ಧರ್ಮ ಈ ಧರ್ಮ ಎಂದು ಏನೂ ಇಲ್ಲ, ನಮ್ಮ ಉದ್ದೇಶ ಎಲ್ಲರಿಗೂ ಅನುಕೂಲವಾಗಬೇಕೆಂಬುದು. ಉದಾಹರಣೆಗೆ ಹೇಳುವುದಾದರೆ ಶಾಲಾ ಮಕ್ಕಳಿಗೆ ಸಮವಸ್ತ್ರವನ್ನು ಕೊಡತಕ್ಕ ಯೋಜನೆ ಮಾಡಿದ್ದೇವೆ, ಅದೇ ರೀತಿ ಪುಸ್ತಕಗಳನ್ನು ಹಂಚತಕ್ಕ ಯೋಜನೆ ಇದೆ ವಿಧವಾ ವೇತನ ಏನಿದೆ ಇದೂ ಕೂಡ ಎಲ್ಲಾ ಜಾತಿಯವರಿಗೂ ಅನ್ವಯಿಸುತ್ತದೆ ಇದೇ ರೀತಿ ಹೆರಿಗೆ ಭತ್ಯೆ ಕೂಡ. ಇವೂ ಸಹ ಎಲ್ಲಾ ಜಾತಿಯವರಿಗೂ ಅನ್ವಯಿಸುತ್ತದೆ. ಸರ್ಕಾರ ಇದನ್ನೆಲ್ಲಾ ಯೋಚನೆ ಮಾಡಿ ಸಾರ್ವಜನಿಕರ ಹಣ ಸಾರ್ವಜನಿಕರ ಉಪಯೋಗಕ್ಕೆ ವಿನಿಯೋಗವಾಗಲೆಂದು ಮಾಡಿದ್ದೇವೆ.

ಶ್ರೀ ಬಿ. ಎಸ್ ಯಡಿಯೂರಪ್ಪ.—ಹಾಗಾದರೆ ಅಲ್ಪಸಂಖ್ಯಾತರಿಗೋಸ್ಕರ ಈ ಯೋಜನೆಯನ್ನು ಬದಲಾವಣೆ ಮಾಡಿದಿರಾ? ಈ ಯೋಜನೆಯನ್ನು ಮೊದಲು ಜಾರಿಗೆ ತರುವಾಗಲೇ ಏತಕ್ಕೆ ಈ ಯೋಚನೆ ಮಾಡಲಿಲ್ಲ? ಅವರನ್ನು ತೃಪ್ತಿಪಡಿಸುವುದಕ್ಕೆ ಬೇರೆ ಯಾವುದಾದರೂ ಯೋಜನೆಯನ್ನು ಜಾರಿಗೆ ತರಬಹುದಿತ್ತು.

ಶ್ರೀ ರಾಮಕೃಷ್ಣ ಹೆಗಡೆ.—ಮಹಿಳೆಯರ ಅಭಿವೃದ್ಧಿ ನಿಗಮ ಏನಿದೆ ಅದರ ಮುಖಾಂತರ ಎಲ್ಲಾ ಮಹಿಳೆಯರಿಗೂ ಅನುಕೂಲವಾಗುವಂಥ ಯೋಜನೆಗಳನ್ನು ಕೈಗೊಳ್ಳಬೇಕೆಂದು ಮಾಡಿದ್ದೇವೆ. ಇನ್ನು ಅಲ್ಪಸಂಖ್ಯಾತರ ವರದಿಯ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಅವರು ವರದಿಯನ್ನು ಕೊಟ್ಟಿದ್ದಾರೆ ಆ ವರದಿಯ ಪ್ರಕಾರ ಶಾಶ್ವತವಾಗಿ ಅಲ್ಪಸಂಖ್ಯಾತರ ಒಂದು ಅಭಿವೃದ್ಧಿ ನಿಗಮವನ್ನು ಮಾಡಬೇಕೆಂದು ಸರ್ಕಾರ ತೀರ್ಮಾನ ಮಾಡಿದೆ. ಮಹಿಳೆಯರ ಅಭಿವೃದ್ಧಿ ನಿಗಮ ಇರುವಂತೆಯೇ ಅಲ್ಪಸಂಖ್ಯಾತರಿಗೂ ಒಂದು ಅಭಿವೃದ್ಧಿ ನಿಗಮ ಇದೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರವನ್ನು ನಾನು ನನ್ನ ಬಜೆಟ್ ಭಾಷಣದಲ್ಲಿ ಹೇಳಬೇಕಾಗಿತ್ತು. ಆದರೆ ಹೇಳುವುದು ಬಿಟ್ಟಿದ್ದೆ, ಹಜ್ ಹೌಸ್ ಎಂದು ಏನಿದೆ ಅದಕ್ಕೆ ಈ ವರ್ಷದಲ್ಲಿ ನಾವು ೩೦ ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಇನ್ನು ಸಿಕ್ ಇಂಡಸ್ಟ್ರೀಸ್ ವಿಚಾರದಲ್ಲಿ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇದು ನಮ್ಮ ಸರ್ಕಾರಕ್ಕೆ ಒಂದು ದೊಡ್ಡ ಚಿಂತೆಯನ್ನು ಉಂಟುಮಾಡಿದೆ ಕೃಷ್ಣರಾಜೇಂದ್ರ ಮಿಲ್ ಏನಿದೆ ಇದು ಈಗ ಮುಚ್ಚಲ್ಪಟ್ಟಿದೆ. ಕಳೆದ ೩ ಮೂರು ವರ್ಷಗಳಿಂದಲೂ ಕೂಡ ನಾವು ಹಲವಾರು ರೀತಿಯಲ್ಲಿ ಪ್ರಯತ್ನ ಮಾಡಿದರೂ ಈ ಮುಚ್ಚಿರತಕ್ಕ ಕೆ. ಆರ್. ಮಿಲ್‌ನ್ನು ಓಪನ್ ಮಾಡುವುದಕ್ಕೆ ಸಾಧ್ಯವಾಗಿಲ್ಲ ಮತ್ತೆ ಬೇರೆ ಟೆಕ್ಸ್‌ಟೈಲ್ ಮಿಲ್‌ಗಳನ್ನು ನಡೆಸತಕ್ಕಂಥವರು ಇದನ್ನು ನೋಡಿಕೊಂಡು ಹೋಗಿದ್ದಾರೆ. ಬಹುಶಃ ಪುನಃ ಇದನ್ನು ಓಪನ್ ಮಾಡಬಹುದೆಂದು ಕಾಣುತ್ತದೆ ಅದೇ ರೀತಿಯಲ್ಲಿ ದಾವಣಗೆರೆಯಲ್ಲಿ ಎರಡು ಮಿಲ್‌ಗಳು, ಇವುಗಳ ಬಗ್ಗೆ ಮಾನ್ಯ ನಮ್ಮ ಸದಸ್ಯರಾದ ಪಂಪಾಪತಿಯವರು ರಿ ಓಪನ್ ಮಾಡಿಸಬೇಕೆಂದು ಉಪವಾಸ ಕುಳಿತಿದ್ದರು, ಆಮೇಲೆ ಜೈಲಿಗೆ ಹೋದರು. ನನಗೆ ಸಂತೋಷವೇನೆಂದರೆ ಕೇಂದ್ರ ಸರ್ಕಾರದ ರಿಹ್ಯಾಬಿಲಿಟೇಷನ್ ಕಮಿಟಿಯವರು ನಮ್ಮ ಪ್ರಸ್ತಾವವನ್ನು ಒಪ್ಪಿಕೊಂಡಿದ್ದಾರೆ. ಎರಡು ಮಿಲ್‌ಗಳನ್ನು ಕೆಲವೇ ದಿವಸಗಳಲ್ಲಿ ಅಂದರೆ ಇನ್ನು ಎರಡು ವಾರಗಳಲ್ಲಿ

ಪುನಃ ಓಪನ್ ಮಾಡುತ್ತಾರೆನ್ನುವ ವಿಶ್ವಾಸ ನನಗಿದೆ. ಆ ಕೆಲಸ ಆಗುತ್ತದೆ. ನಂತರ ಅಲೆಂಬಿಕ ಕಾರ್ಖಾನೆ ಮುಚ್ಚಿಹೋಗಿ ೨-೩ ವರ್ಷಗಳೇ ಆಯಿತು. ಅದನ್ನು ರಿ-ಓಪನ್ ಮಾಡಿಸಲು ಪ್ರಯತ್ನ ಮಾಡುತ್ತಿದ್ದೇವೆ. ಬೇರೆ ಉದ್ದಿಮೆದಾರರು ಅದನ್ನು ನೋಡಿಕೊಂಡು ಹೋಗಿದ್ದಾರೆ. ಅದನ್ನು ತೆಗೆದುಕೊಂಡು ನಡೆಸುವುದಾದರೆ ಅವರಿಗೆ ಕೊಡಲಿಕ್ಕೆ ಸಾಧ್ಯವಾಗುತ್ತದೆ. ಅದೇ ರೀತಿಯಲ್ಲಿ ಯಾವುದೇ ಕಾರ್ಖಾನೆಗಳು ಬಂದ್ ಆಗಿದ್ದರೆ ಅವುಗಳನ್ನು ತೆರೆಯುವ ವಿಚಾರದಲ್ಲಿ ನಾವು ಯಾವುದೇ ರೀತಿಯ ತಾತ್ಸಾರ ಮಾಡಿಲ್ಲ. ಮಾನ್ಯ ಸದಸ್ಯರು ಹೇಳಿದರು ಯಾವುದೇ ಉದ್ಯಮ ಬಂದ್ ಆದಾಗ ಕಾರ್ಮಿಕರು ರಸ್ತೆಪಾಲಾಗುತ್ತಾರೆ ಬೇರೆ ಉದ್ಯೋಗ ದೊರಕದ ಕಾರ್ಮಿಕರಿಗೆ ಉದ್ಯೋಗ ಕೊಡತಕ್ಕಂಥ ಯೋಚನೆ ಮಾಡಿ ಎಂದು ಹೇಳಿದರು. ಅದು ಅಷ್ಟು ಸುಲಭವಲ್ಲ. ಹೊಸದಾಗಿ ಉದ್ಯೋಗ ಹುಡುಕ ತಕ್ಕಂಥ ಯುವಕರ ಸಂಖ್ಯೆ ದಿನೇ ದಿನೇ ಜಾಸ್ತಿಯಾಗುತ್ತಿದೆ. ಹಿಂದೆ ಕೆಲಸಮಾಡಿರುವವರಿಗೆ, ಕಾರ್ಖಾನೆಯಲ್ಲಿಯೇ ಇದ್ದು ಕೆಲಸ ಹೋದರೆ ಅವರಿಗೆ ಕೆಲಸ ಪ್ರತ್ಯೇಕವಾಗಿ ಮಾಡಿಕೊಡುವುದು ಕಷ್ಟವಾಗುತ್ತದೆ, ಅದನ್ನು ಕಾರ್ಮಿಕ ಕಮಿಷನರ್‌ರವರೇ ಹೇಳಿದ್ದಾರೆ.

ಇನ್ನು ಮಾಸ್ ಕಮ್ಯುನಿಕೇಷನ್ ಬಗ್ಗೆ ಹೇಳಿದರು, ಇದರ ಉದ್ದೇಶವೇನೆಂದರೆ ನಮ್ಮ ಯುವಕರಿಗೆ, ಅದರಲ್ಲೂ ಕಮ್ಯುನಿಕೇಷನ್ ವಿಚಾರದಲ್ಲಿ, ಸಂಪರ್ಕ ವಿಚಾರದಲ್ಲಿ ಟ್ರೈನಿಂಗ್ ಕೊಡುವಂಥದ್ದು. ಬಹುಶಃ ಮಾನ್ಯ ಸದಸ್ಯರಿಗೆ ಗೊತ್ತಿದೆಯೋ ಇಲ್ಲವೋ ತಿಳಿದಿಲ್ಲ. ದೆಹಲಿಯಲ್ಲಿ ಜಾಮಿಯ ಮಿಲಿಯದಲ್ಲಿ ಒಂದು ಸಂಸ್ಥೆ ಇದೆ. ಅಲ್ಲಿ ವೈಸ್‌ಚಾನ್ಸಲರ್ ಯಾರು ಇದ್ದಾರೆ. ಹಿಂದೆ ಐ. ಬಿ. ಪಿ. ಇನ್‌ಫರ್ಮೇಷನ್ ಬ್ರಾಡ್‌ಕ್ಯಾಸ್ಟಿಂಗ್ ಮಿನಿಸ್ಟರ್‌ರವರ ಸೆಕ್ರೆಟರಿಯಾದ ಕಿದ್ವಾಯ್ ಅವರು ಅದನ್ನು ನಡೆಸುತ್ತಿದ್ದರು. ಅವರನ್ನು ಕರೆಸಿ ಕೇಳಿರುತ್ತೇನೆ. ನಮ್ಮಲ್ಲೂ ಕೂಡ ಉದ್ಯೋಗ ಸಿಕ್ಕಲಿಕ್ಕೆ ಉತ್ತಮವಾದ ಅವಕಾಶವಿದೆ. ಒಂದೂವರೆ ವರ್ಷ ಎರಡು ವರ್ಷದ ಟ್ರೈನಿಂಗ್ ತೆಗೆದುಕೊಂಡವರಿಗೆ, ಉದ್ಯೋಗ ಸಿಗುವಂಥ ಉದ್ದೇಶದಿಂದ ಅವರನ್ನು ಕರೆಸಿದ್ದೆ. ಅವರು ಬಂದು ಚರ್ಚೆಮಾಡಿಕೊಂಡು ಹೋಗಿದ್ದಾರೆ. ಇಲ್ಲೂ ಅಂಥ ಸಂಸ್ಥೆಯನ್ನು ಸ್ಥಾಪನೆ ಮಾಡುತ್ತೇವೆ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ ಕರ್ನಾಟಕ ಭೂ ಸುಧಾರಣೆ ಕಾಯಿದೆ ಪ್ರಕಾರ ಯಾರು ಗೇಣಿದಾರರು ಭೂಮಿಯನ್ನು...

ಶ್ರೀ ರಾಮಕೃಷ್ಣ ಹೆಗಡೆ.—ಮತ್ತೆ ಮಾನ್ಯ ಅಧ್ಯಕ್ಷರೇ, ಮಾನ್ಯ ಮೊಯಿಲಿಯವರು ಸರ್ಕಾರಿ ಆಜ್ಞೆಯನ್ನು ಯಾವಾಗ ಹೊರಡಿಸಿದಿರಿ ಎಂದು ಕೇಳಿದರು. ದಿನಾಂಕ ೪-೧-೧೯೮೮ರಲ್ಲಿ ಅದನ್ನು ಕಳುಹಿಸಿಕೊಡಲೇ ಅಥವಾ ಹೇಳಿಬಿಡಲೇ.

> "Item No. 7 and 8 of the Economy Measures introduced in Government Order No....... dated November 10th, 1987 are substituted as follows :
>
> a) New posts under the plan as well as non-plan shall be created when they are considered necessary for the implementation of programmes with the prior concurrence of the Finance Department.
>
> b) Vacant posts both under the plan as well as non-plan shall be filled with the prior concurrence of Finance Department Vacancies in such cases shall be notified to the recruiting agencies like the KPSC, Recruitment Committees etc., with the prior concurrence of the Finance Department."

SRI. M. VEERAPPA MOILY.—So, again it is economy. It is as as the former economy order.

SRI RAMAKRISHNA HEGDE.—He has been the Finance Minister. He knows it that during his time also Government orders were issued like this.

ಶ್ರೀ ಬಿ. ಸಾ ಮಿಂಲಾವ್.—ಭೂ ಸುಧಾರಣೆಯಲ್ಲಿ ಭೂಮಿಯನ್ನು ಪಡೆದ ಗೇಣಿದಾರರು ಪ್ರೀಮಿಯಂ ಕಟ್ಟಬೇಕಾಗಿಲ್ಲವೆಂದು ಸರ್ಕಾರ ಒಂದು ಹೇಳಿಕೆಯನ್ನು ಕೊಟ್ಟಿತ್ತು ಮತ್ತು ಆದೇಶವನ್ನು ಹೊರಡಿಸಿತ್ತು. ಆದರೆ ಈಗ ರೈತರ ಮನೆಗಳನ್ನು ಅಧಿಕಾರಿಗಳು ಜಪ್ತಿ ಮಾಡುತ್ತಿದ್ದಾರೆ, ಮತ್ತು ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದಾರೆ ಈ ಬಗ್ಗೆ ಸರ್ಕಾರ ಏನು ಹೇಳುತ್ತದೆಂದು ಕೇಳುತ್ತೇನೆ. ರಾಜ್ಯದಲ್ಲಿ ಗೋಬರ್‌ಗ್ಯಾಸ್ ಮಾಡಿದವರಿಗೆ ೬೦-೬೫ ಪರ್ಸೆಂಟ್ ಸಬ್ಸಿಡಿ ಕೊಡುತ್ತೇವೆಂದು ಘೋಷಿಸಿದ ಪ್ರಕಾರ ಅನೇಕ ರೈತರು, ಫಲಾನುಭವಿಗಳು ಹೆಚ್ಚು ಗೋಬರ್‌ಗ್ಯಾಸ್‌ಗಳನ್ನು ಮಾಡಿ ತೊಂದರೆಪಡತಕ್ಕ ಪರಿಸ್ಥಿತಿ ಬಂದಿದೆ. ಸಾಗರ, ಶಿವಮೊಗ್ಗ ಮತ್ತು ಹೊಸನಗರ ತಾಲ್ಲೂಕುಗಳಲ್ಲಿ ಸಬ್ಸಿಡಿ ಕೊಟ್ಟಿಲ್ಲವೆಂದು ಚಳುವಳಿ ಮಾಡುತ್ತಿದ್ದಾರೆ.

ಶ್ರೀ ಎ. ಎಂ. ಹಿಂಡಸಗೇರಿ.—ಅಲ್ಪ ಸಂಖ್ಯಾತರ ಆಯೋಗ ರಚನೆ ಆಗಿ ಒಂದು ವರ್ಷ ವಾಯಿತು. ಅವರು ೩೧ ಅಥವಾ ೩೪ ಶಿಫಾರಸ್ಸುಗಳನ್ನು ಮಾಡಿದ್ದಾರೆ. ಅದಕ್ಕೆ ಸರ್ಕಾರ ೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. ಈಗ ಮತ್ತೊಂದು ಆಯೋಗವನ್ನು ಮಾಡುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅಲ್ಪ ಸಂಖ್ಯಾತರ ಆಯೋಗದ ಹಿಂದಿನ ಶಿಫಾರಸ್ಸುಗಳು ಏನಿವೆ ಅವನ್ನು ಸಭೆಯ ಮುಂದೆ ಮಂಡಿಸಿ ಅಮಲಿನಲ್ಲಿ ತರಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ. ನಮ್ಮ ಭಾಗದಲ್ಲಿ ಮಲಪ್ರಭಾ ೨ನೇ ಯೋಜನೆಗೆ ೩ ಕೋಟಿ ೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಮಾನ್ಯ ಬೊಮ್ಮಾಯಿಯವರು ೨೬ನೇ ತಾರೀಖು ಹುಬ್ಬಳಿಯಲ್ಲಿ ಈಗಾಗಲೇ ಹಣ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದು ನಿಜವೇ ಎಂದು ಕೇಳುತ್ತೇನೆ. ನಮ್ಮ ಭಾಗದಲ್ಲಿ ಕಳೆದ ೨-೩ ವರ್ಷಗಳಿಂದ ಒಂದು ನಿವೇಶನವನ್ನೂ ಸಹ ಹಿಐಟಿಬಿ. ವತಿಯಿಂದ ಒದಗಿಸಲಿಲ್ಲ. ಬಡವರಿಗೆ ಮತ್ತು ಹಿಂದುಳಿದವರಿಗೆ ಸೈಟು ಕೊಡುವ ಬಗ್ಗೆ ಭರವಸೆ ನೀಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಕರಾವಳಿ ಪ್ರದೇಶದ ಮೀನುಗಾರರ ಬಗ್ಗೆ ವಿಷೆಯ ವಿಚಾರವನ್ನು ಮಾತ್ರ ಹೇಳಿದ್ದಾರೆ. ಪರ್ಷ ವರ್ಷ ಕಡಲ ಕೊರೆತದಿಂದ ಭಾರೀ ನಷ್ಟವಾಗುತ್ತಿದೆ. ಮೀನುಗಾರರು ಸಂಪೂರ್ಣ ಸೋತು ಹೋಗಿದ್ದಾರೆ. ಅವರಿಗಾಗಿ ತಡೆಗೋಡೆ ಕಟ್ಟುವ ಬಗ್ಗೆ ಒಂದು ಮಾತೂ ಕೂಡ ಮಾನ್ಯ ಮುಖ್ಯ ಮಂತ್ರಿಗಳ ಬಾಯಿಂದ ಬರಲಿಲ್ಲ. ಈ ವರ್ಷವೇ ಅದನ್ನು ಕಟ್ಟುವುದು ಅಗತ್ಯವಿದೆ. ಈಗ ಮನರಂಜನೆಗೆ ರಿಯಾಯಿತಿ ಕೊಡುವುದರಿಂದ ಬೇಕಾದಷ್ಟು ಸಿನೇಮಾಗಳನ್ನು ತೆಗೆಯುವುದಕ್ಕೆ ಅವಕಾಶವಾಗುತ್ತಿದೆ. ಕನ್ನಡ, ಕೊಡವ, ಅಥವಾ ಯಾವುದೇ ಚಿತ್ರವಾಗಲಿ ಅದರಿಂದ ನಮ್ಮ ದೇಶದ ಅಥವಾ ನಾಡಿನ ಸಂಪತ್ತು ಹೆಚ್ಚಾಗ ಬೇಕೆಂಬುದಲ್ಲ. ಜನರ ನಡೆ, ನುಡಿ, ಮೌಲ್ಯ ಎಲ್ಲವೂ ಹೆಚ್ಚು ಮಂತಾಗಬೇಕು. ಅಶ್ಲೀಲ ಕಲ್ಪನೆಯ ಹಾಗೂ ಏತಕ್ಕೂ ಬೇಡದ ಚಿತ್ರಗಳನ್ನು ತಿಂಗಳಿಗೊಂದರಂತೆ ಪ್ರದರ್ಶಿಸುತ್ತಾರೆ. ಏಕೆಂದರೆ ಸಬ್ಸಿಡಿ ಅಥವಾ ಕರ ರಿಯಾಯಿತಿ ಸಿಗುತ್ತದೆಂದು. ದೇಶಾಭಿಮಾನ, ನೈತಿಕ ಮಟ್ಟ ಹಾಗೂ ಜನರ ಹೃದಯವನ್ನು ಸೀಮಂತಗೊಳಿಸುವ ಚಿತ್ರಗಳನ್ನು ಮಾತ್ರ ತಯಾರಿಸುವಂತೆ ಮಾಡಿದರೆ ತುಂಬಾ ಉಪಕಾರ ಮಾಡಿದಂತಾಗುತ್ತದೆ.

ಶ್ರೀ ಜಿ. ಎಂ. ಕಾನಡೆ.—ತಾಳಿಭಾಗ್ಯದ ವಿಚಾರವಾಗಿ ಒಂದು ಸಲಹೆ ಇದೆ. ತಾಳಿ ಕೊಟ್ಟರು, ಸೀರೆ ಕೊಟ್ಟರು, ದುಡ್ಡು ಕೊಟ್ಟರು. ಇದೇ ರೀತಿ ತೊಟ್ಟಿಲು ಭಾಗ್ಯ ಮಾಡುತ್ತಾರೆಯೋ ಎಂದು ನನ್ನ ಪ್ರಶ್ನೆ ? ಉತ್ತರ ಕನ್ನಡ ಜಿಲ್ಲೆಯಲ್ಲಿ ಬರಗಾಲ ಇದೆ ಅಲ್ಲಿ ಸಾಲ ವಸೂಲಿಗೆ ಹೊರಟಿದ್ದಾರೆ. ನೀರನ್ನು ಕೊಡದೆ ನೀರಿನ ಕರ ವಸೂಲಿಗೆ ಹೊರಟ್ಟಿದ್ದಾರೆ. ಇವನ್ನೆಲ್ಲಾ ಬಂದ್ ಮಾಡುತ್ತೀರಾ ? ಎಷ್ಟೇ ಬೆಲೆ ಬಾಳುವ ಮನೆ ಸುಟ್ಟರೂ ಅವರಿಗೆ ಕೊಡುವುದು ೩೦೦ ರೂಪಾಯಿಗಳು ಮಾತ್ರ. ಅದನ್ನು ಜಾಸ್ತಿ ಮಾಡುತ್ತೀರಾ ? ಇನ್ನೊಂದು ವಿಚಾರ ಏನೆಂದರೆ ಮನೆ ಕೊಡಬೇಕಾದರೆ ಎರಡು ಸಾವಿರ ರೂಪಾಯಿಗಿಂತ ಕಡಿಮೆ ಆದಾಯ ಇರಬೇಕು. ಈ ಆದಾಯದ ಮಿತಿಯನ್ನು ಜಾಸ್ತಿ ಮಾಡುತ್ತಾರೆಯೆ ?

೨-೦೦ ಪಿ. ಎಂ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಕಾನಡೆಯವರು ಹೇಳಿದ ಎಲ್ಲಾ ಸೂಚನೆಗಳನ್ನೂ ನಾನು ಗಮನಿಸುತ್ತೇನೆ. ಮಾನ್ಯ ಸದಸ್ಯರಾದ ಇದಿನಬ್ಬ ಅವರು ಒಂದು ವಿಚಾರ ಹೇಳಿದರು. ಅನೇಕ ರೀತಿಯ ಚಿತ್ರಗಳನ್ನು ತಯಾರು ಮಾಡುತ್ತಾರೆ, ಕೆಟ್ಟ ಚಿತ್ರಗಳು ಮತ್ತು ಅಶ್ಲೀಲ ಚಿತ್ರಗಳಿಗೂ ಕೂಡ ಸರ್ಕಾರದ ಸಬ್ಸಿಡಿ ಸಿಗುತ್ತದೆ ಎಂದು ಹೇಳಿದರು. ಸರ್ಕಾರದ ಸಬ್ಸಿಡಿ ಅಶ್ಲೀಲ ಚಿತ್ರಗಳಿಗೆ ಸಿಗುವುದಿಲ್ಲ. ಅಶ್ಲೀಲ ಚಿತ್ರಗಳನ್ನು ಸೆನ್ಸಾರ್ ಬೋರ್ಡಿನವರು ಪಾಸ್ ಮಾಡುವುದಿಲ್ಲ. ಸೆನ್ಸಾರ್ ಬೋರ್ಡಿನವರು ಯಾವುದು ಪಾಸ್ ಮಾಡುತ್ತಾರೋ ಅಂಥ ಚಿತ್ರಗಳಿಗೆ ಮಾತ್ರ ಇಲ್ಲಿ ಸಬ್ಸಿಡಿ ಸಿಗುತ್ತದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಪಿಕ್ಚರ್ ನೋಡದೆ ಶ್ಲೀಲ ಅಶ್ಲೀಲ ಎಂಬುದು ಗೊತ್ತಾಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಚಿತ್ರೀಕರಣ ಸಂಪೂರ್ಣವಾಗಿ ಕರ್ನಾಟಕದಲ್ಲಿ ಆಗಿದ್ದರೆ ಮಾತ್ರ ಸಬ್ಸಿಡಿ ಸಿಗುತ್ತದೆ. ಮತ್ತು ಅವರಿಗೆ ಇದೇರೀತಿ ನೀವು ಚಿತ್ರ ತೆಗೆಯಬೇಕು ಎಂದು ಪ್ರಿಸ್ಕ್ರೈಬ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಕವಿತೆಗಳು, ಪುಸ್ತಕಗಳು, ಕಾದಂಬರಿಗಳು ಇದೇರೀತಿ ಬರೆಯಬೇಕು. ಎಂದು ಯಾವರೀತಿ ಹೇಳುವುದಕ್ಕೆ ಆಗುವುದಿಲ್ಲವೋ ಅದೇರೀತಿ ಇದೂ ಒಂದು ಕಲೆ ಎಂದು ತಿಳಿದುಕೊಳ್ಳಬೇಕು. ಜನರ ಅಭಿರುಚಿಗೆ ಇದನ್ನು ಬಿಡಬೇಕು. ಜನರಿಗೆ ಒಂದು ಚಿತ್ರ ಸರಿಯಿಲ್ಲ ಎಂದರೆ ನೋಡುವುದಕ್ಕೆ ಹೋಗುವುದಿಲ್ಲ. ಎಲ್ಲಾ ಜನರೂ ಎಲ್ಲಾ ಚಿತ್ರಗಳನ್ನೂ ನೋಡುವುದಿಲ್ಲ. ಆದ್ದರಿಂದ ಈ ವಿಚಾರ ಇಷ್ಟಕ್ಕೇ ಬಿಡುವುದು ಒಳ್ಳೆಯದು ಎಂದು ಅನ್ನಿಸುತ್ತದೆ. ಮೀನುಗಾರರ ವಿಚಾರದಲ್ಲಿ, ಕರಾವಳಿ ವಿಚಾರದಲ್ಲಿ ಒಂದು ಮಾತು ಹೇಳಿದರು. ಆ ಖಾತೆಗೆ ಸಂಬಂಧಪಟ್ಟ ಬೇಡಿಕೆ ಬಂದಾಗ ಅದರ ಬಗ್ಗೆ ಹೇಳುತ್ತಾರೆ. ಗೋಬರ್‌ಗ್ಯಾಸ್ ವಿಚಾರ ಹೇಳಿ ಸಬ್ಸಿಡಿ ಸಿಗಲಿಲ್ಲ ಎಂದು ಸದಸ್ಯರಾದ ಸ್ವಾಮಿರಾವ್ ಅವರು ಹೇಳಿದರು. ಸಬ್ಸಿಡಿ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಾವು ಕಳುಹಿಸಿ ಕೊಡಬೇಕಾಗುತ್ತದೆ. ಇಂತಿಷ್ಟು ಗೋಬರ್ ಗ್ಯಾಸ್ ಇದೆ, ಇಂಥ ಪ್ರಾಜೆಕ್ಟ್ ಇದೆ ಎಂದು ಕಳುಹಿಸಿ ಕೊಟ್ಟು ಅವರಿಂದ ಕ್ಲಿಯರೆನ್ಸ್ ಬರುವವರೆಗೂ ಸಬ್ಸಿಡಿ ಸಿಗುವುದಿಲ್ಲ. ಈ ವರ್ಷ ಕೂಡ ಗೋಬರ್ ಗ್ಯಾಸ್ ವಿಚಾರದಲ್ಲಿ ರಾಜ್ಯ ಸರ್ಕಾರ ತನ್ನ ಗುರಿ ಮೀರಿದೆ, ಇನ್ನಿತರ ಮಾನ್ಯ ಸದಸ್ಯರ ಸೂಚನೆಗಳನ್ನು ನಾನು ಪರಿಶೀಲಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಲಕ್ಷ್ಮೀಸಾಗರ್ ಅವರೆ ವಿಧೇಯಕವನ್ನು ಮಂಡಿಸಿ.

(ಹಲವಾರು ಸದಸ್ಯರು ವಿವರಣೆ ಕೇಳಲು ಅವಕಾಶ ನೀಡಬೇಕೆಂದು ಕೇಳಿಕೊಂಡರು.)

ಅಧ್ಯಕ್ಷರು.—ಬೇಡಿಕೆ ಮೇಲೆ ಚರ್ಚೆ ಬಂದಾಗ ತಮಗೆ ಅವಕಾಶ ಕೊಡುತ್ತೇನೆ. ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಹೀಗಿದೆ.

"೩೧-೩-೧೯೮೯ಕ್ಕೆ ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ ೧ರಿಂದ ೬೪, ಇವುಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊತ್ತವನ್ನು ಲೇಖಾನುದಾನವಾಗಿ ಮಂಜೂರು ಮಾಡುವುದು."

ಪ್ರಸ್ತಾವಕ್ಕೆ ಅನುಮೋದನೆ ದೊರಕಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು.

(ಮಂಜೂರಾದ ಬೇಡಿಕೆಗಳನ್ನು ಪ್ರತ್ಯೇಕವಾಗಿ ಲಗತ್ತಿಸಲಾಗಿದೆ)*

---

*ANNEXURE–I